विश्व हिन्दू परिषद

धर्मो रक्षति रक्षितः

# ಹಿಂದು ವಾಣಿ

ಸಂಪುಟ-12

ಸಂಚಿಕೆ-1

ಫಾಲ್ಗುಣ-ಚೈತ್ರ

ಏಪ್ರಿಲ್ 2013

ಬೆಲೆ ರೂ. 10.00

RNP/KA/BGS/636/2012-2014

HINDU VANI

KANNADA, MONTHLY

VOL - 12 ISSUE-1 APRIL 2013 BANGALORE PAGES-44 Rs:10/-









ಹನುಮಾನ್ ಶಕ್ತಿ ಜಾಗರಣಾ ಯಜ್ಞ, ಪುಟ್ಟೇನಹಳ್ಳಿ, ಬೆಂಗಳೂರು (ವರದಿ ಪುಟ 31)



**ಪ್ರೊ. ಎಂ.ಬಿ. ಪುರಾಣಿಕ್**
ಪರಿಷತ್ ರಾಜ್ಯ ಕಾರ್ಯಾಧ್ಯಕ್ಷರಾಗಿ ನಿಯುಕ್ತಿ
(ವರದಿ ಪುಟ 30)



**ಶ್ರೀ ಕಾಸರಗೋಡು ಚಿನ್ನಾ**
ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿಯ
ಉಜ್ವಾಡು(ಬೆಳಕು)
ಕೊಂಕಣಿ ಚಿತ್ರದ ನಿರ್ದೇಶಕರು

ಮಹಾಶಿವರಾತ್ರಿ ಪದ್ಮನಾಭನಗರ, ಬೆಂಗಳೂರು (ವರದಿ ಪುಟ 2)





# ಹಿಂದುವಾಣಿ

ಗೌರವ ಸಂಪಾದಕ
**ಟಿ.ಎ.ಪಿ. ಶೆಣೈ**
ಇ-hinduvani@yahoo.com

ಶ್ರೀನಂದನನಾಮ ಸಂವತ್ಸರ
ಫಾಲ್ಗುಣ-ಚೈತ್ರ
**ಏಪ್ರಿಲ್ 2013**

**ಪ್ರಕಾಶಕರು**
**ರಮೇಶ್ ಮ. ಪರಾಂಡೆ**
**ವಿಶ್ವಹಿಂದು ಪರಿಷದ್, ಕರ್ನಾಟಕ**
'ಧರ್ಮಶ್ರೀ', 91, ಶಂಕರಪುರಂ,
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು - 560 004
ದೂ. 080-26604641

**ಚಂದಾವಿವರ**
ಬಿಡಿ ಪ್ರತಿ ರೂ. 10/-
ವಾರ್ಷಿಕ ಚಂದಾ ರೂ. 80/-
ದ್ವೈವಾರ್ಷಿಕ ಚಂದಾ ರೂ. 150/-

**ಮುದ್ರಕರು**
ವಿಶ್ವಾಸ್ ಪ್ರಿಂಟ್ಸ್
ಚಾಮರಾಜಪೇಟೆ, ಬೆಂಗಳೂರು
ದೂ. 080-26606088
ಇಮೇಲ್:vishwasprints@yahoo.co.in

**ಹಿಂದುವಾಣಿಗೆ ಚಂದಾದಾರರಾಗಿರಿ**
ಎಂ.ಓ/ಡಿ.ಡಿ.ಗಳನ್ನು
**"ವಿಶ್ವ ಹಿಂದು ಪರಿಷದ್"**
ಹೆಸರಿನಲ್ಲಿ ಕಳುಹಿಸಬಹುದು

**ಹಿಂದುವಾಣಿ E - ಪತ್ರಿಕೆ**
**ನೋಡಿ :www.vhp.org**


## ಧರ್ಮ

**ಧರಿಸಲು ಧರ್ಮವು ಕ್ಷಮೆಯನು, ದಂಡವ**
**ಇರುವುದು, ಕದಿಯದೆ, ಶುಚಿತ್ವವ**
**ಕರಿಸುತ ಇಂದ್ರಿಯ, ನಿಗ್ರಹ, ಬುದ್ಧಿಯ**
**ಅರಿವನು, ಸತ್ಯವ, ಅಕ್ರೋಧ**

ಒಳ್ಳೆಯ ವಿಚಾರಗಳನ್ನು, ಮಾನವೀಯ ಮೌಲ್ಯಗಳನ್ನು, ಧರಿಸಿ ಆಚರಣೆಗೆ ತರುವುದನ್ನೇ ಧರ್ಮವೆಂದಿದ್ದಾರೆ. ಸಮಾಜದಲ್ಲಿ ಧರ್ಮವು ನೆಲೆ ನಿಲ್ಲಬೇಕಾದರೆ, ಅಲ್ಲಿ ಹತ್ತು ಅಂಶಗಳು ನೆಲೆ ನಿಲ್ಲಬೇಕಾಗಿವೆ. ಅವೆಂದರೆ ಧೃತಿ ಕ್ಷಮೆ ದಮ, ಅಸ್ತೇಯ, ಶೌಚ, ಇಂದ್ರಿಯ ನಿಗ್ರಹ, ಧೀಶಕ್ತಿ, ವಿದ್ಯೆ, ಸತ್ಯಭಾಷಣ, ಅಕ್ರೋಧ, ಧೃತಿಯೆಂದರೆ ಸಂತೋಷದಿಂದಿರುವುದು. ಸದ್ವಿದ್ಯೆಯನ್ನು ಸಂಪಾದಿಸುವುದೇ ವಿದ್ಯೆ. ಪರಧನವನ್ನು ಆಸೆಪಡದಿರುವುದೇ ಅಥವಾ ಕದಿಯದಿರುವುದೇ ಅಸ್ತೇಯ. ದಂಡವೆಂದರೆ ಕೆಟ್ಟ ವಿಷಯಗಳನ್ನು ನಿಂದಿಸುವುದು ಅಥವಾ ಖಂಡಿಸುವುದು. ಅಕ್ರೋಧವೆಂದರೆ ಸಿಟ್ಟುಗೊಳ್ಳದಿರುವುದು. ಧೀಶಕ್ತಿಯೆಂದರೆ ಸಾಧು-ಸಂತರ ಜ್ಞಾನಿಗಳ ಸಾಹಚರ್ಯದಿಂದ ನಮ್ಮ ಆಧ್ಯಾತ್ಮಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದು. ಈ ರೀತಿ ಸಮಾಜದಲ್ಲಿ ಮೇಲೆ ಹೇಳಿದ ಅಂಶಗಳು ನೆಲೆನಿಂತಾಗ ಅದು ಧರ್ಮಯುತ ಸಮಾಜವೆನಿಸುತ್ತದೆ. ಇಲ್ಲಿ ಕ್ರೋಧವೆಂದರೆ ಮಾನಸಿಕ ಉದ್ವೇಗ, ಸಿಟ್ಟಿನ ಹಿಂದೆ, ಅಸಹನೆ ಅಹಂಭಾವ, ಹಠಗಾರಿಕೆ, ದುರಾಗ್ರಹ ಮುಂತಾದುವು ಅಡಕವಾಗಿರುತ್ತದೆ. 'ಸತ್ಯವನ್ನು ಹೇಳು. ಆದರೆ ನೀನು ಹೇಳಿದ ಸತ್ಯದಿಂದ ಇನ್ನೊಬ್ಬರಿಗೆ ಹಾನಿಯಾಗುವುದಾದರೆ ಅದನ್ನು ಹೇಳಬೇಡ. ಇನ್ನೊಬ್ಬರನ್ನು ಸಂತೋಷಪಡಿಸಲು ಸುಳ್ಳು ಹೇಳಬೇಡ. ಸಮಾಜದಲ್ಲಿ ಸಾತ್ವಿಕ ಮನೋಭಾವ ಬೆಳೆದಾಗ ಸದಸದ್ವಿವೇಕ ಉಂಟಾಗುತ್ತದೆ. ಇದರಿಂದ

ಸಂಘಟಿತ ಸಮಾಜದ ನಿರ್ಮಾಣವಾಗುತ್ತದೆ. ಸಂಘಟಿತ ಸಮಾಜಕ್ಕೆ ಧಾರ್ಮಿಕ ಮನೋಭಾವವು ಅಡಿಮಣೆಯಾಗಿರುತ್ತದೆ. ನಮ್ಮ ರಾಷ್ಟ್ರವು ಧರ್ಮ ನಿರಪೇಕ್ಷವೆಂದು ಹೇಳಿಕೊಂಡರೂ ಅಲ್ಲಿ ಮಾನವೀಯ ಧರ್ಮವು ಇದ್ದೇ ಇದೆ. ಧರ್ಮದ ಹೊರತು ರಾಷ್ಟ್ರದ ಕಲ್ಪನೆ ಅಸಾಧ್ಯವಾಗಿದೆ. ಏಕೆಂದರೆ ಮೇಲೆ ಹೇಳಿದ ಧಾರ್ಮಿಕ ಮೌಲ್ಯಗಳು ಪ್ರತಿಯೊಬ್ಬ ನಾಗರಿಕನಲ್ಲೂ ಇರಬೇಕು.

– ಡಿ. ವಿಷ್ಣುಭಟ್ಟ

# ಮಹಾ ಶಿವರಾತ್ರಿ ಆಚರಣೆ

**ಪದ್ಮನಾಭನಗರ (ಬೆಂಗಳೂರು)** : 10–03–2013ರ ಮಹಾಶಿವರಾತ್ರಿಯಂದು ಬನಶಂಕರಿ ಜಿಲ್ಲಾ ಪದ್ಮನಾಭನಗರ ಪ್ರಖಂಡ ವತಿಯಿಂದ ನಡೆಸಲಾಯಿತು. ಕಾರ್ಯಕ್ರಮವನ್ನು ಬನಗಿರಿ ದೇವಸ್ಥಾನದ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಮಾನಸ ಸರೋವರ, ಸಿಂಧೂ ನದಿ ಮತ್ತು ಹರಿದ್ವಾರ, ಹೃಷಿಕೇಶ ಕಾಶಿಯಿಂದ ತಂದ ಪವಿತ್ರ ಗಂಗಾಜಲ ತೀರ್ಥವನ್ನು, ರಾಮೇಶ್ವರ, ಕೂಡಲ ಸಂಗಮ, ಹಾಗೂ ಇತರೆ ಪುಣ್ಯಕ್ಷೇತ್ರದಿಂದ ಭಕ್ತರು ತಂದ ಜಲವನ್ನು ಸಮ್ಮಿಳಿತಗೊಳಿಸಿ, ಲಿಂಗರೂಪಿ ಪರಮೇಶ್ವರನಿಗೆ, ಸ್ವತಃ ಬಿಲ್ವ ಪತ್ರದೊಡನೆ ಅಭಿಷೇಕ ಮಾಡುವ ಅಪೂರ್ವ ಅವಕಾಶ ಈ ಸಂದರ್ಭದಲ್ಲಿದ್ದಿತ್ತು.

ಶ್ರೀ ಪ್ರಸನ್ನಗಿರಿ ವಿಷ್ಣು ಸಹಸ್ರನಾಮ ಸತ್ಸಂಗದ ಶ್ರೀಮತಿ ಶಮಂತಕಮಣಿ ಮತ್ತು ಸಂಗಡಿಗರಿಂದ ಲಘುನ್ಯಾಸ, ಶಿವೋಪಾಸನೆ ಮಂತ್ರ, ನಮಕ, ಶಿವ ಸಹಸ್ರನಾಮ, ಶಿವಸೂಕ್ತ, ದುರ್ಗಾ ಸೂಕ್ತ ಮತ್ತು ಮಂತ್ರಪುಷ್ಪದ ಅರ್ಪಣೆಯಾಗಿ ನಂತರ ಶ್ರೀನಿವಾಸ ಶರಣಾಗತಿ ಭಜನಾ ಮಂಡಳಿಯಿಂದ ಭಜನೆ ಮೃತ್ಯುಂಜಯನಿಗೆ ಸಮರ್ಪಣೆಯಾಯಿತು.

6 ವರ್ಷಗಳ ಹಿಂದೆ 250 ಭಕ್ತಾದಿಗಳಿಂದ ಪ್ರಾರಂಭವಾದ ಈ ಕಾರ್ಯಕ್ರಮ, ಈ ಸಲ ಭಕ್ತಾದಿಗಳ ಸಂಖ್ಯೆ 1500ನ್ನು ದಾಟಿತ್ತು. ಶ್ರೀ ಬನಗಿರಿ ವರಸಿದ್ಧಿ ವಿನಾಯಕ ದೇವಸ್ಥಾನದ ಆಡಳಿತ ಮಂಡಳಿಯವರು 8,30 ಗಂಟೆಯಿಂದ 11.00 ಗಂಟೆಯವರೆಗೆ ಶ್ರೀ ಶಿವಲೀಲೆ ಎಂಬ ಯಕ್ಷಗಾನವನ್ನಿಟ್ಟಿದ್ದರು.

ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯುವಲ್ಲಿ ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮ ಅಧ್ಯಕ್ಷೆ ಶ್ರೀಮತಿ ಸರೋಜಿನಿ ಭಾರದ್ವಾಜ್‌ರವರು ಕುಟುಂಬದವರೊಡನೆ ತೊಡಗಿಸಿಕೊಂಡಿದ್ದರು. ಸುಂದರ ಮೂರ್ತಿಯವರು ಬೆಂಗಳೂರು ಮಹಾನಗರ ಸೇವಾ ಪ್ರಮುಖ್ ಶ್ರೀ ಜೆ.ಎಸ್. ಶೇಷಾದ್ರಿ, ಹಾಗೂ ಮಹಾನಗರ ಧರ್ಮಾಚಾರ್ಯ ಸಂಪರ್ಕ ಪ್ರಮುಖ್ ಶ್ರೀ ಎಸ್. ಲಕ್ಷ್ಮೀಕಾಂತ್, ಬನಶಂಕರಿ ಜಿಲ್ಲಾ ಕಾರ್ಯದರ್ಶಿ ಶ್ರೀ ಅಶ್ವತ್ಥನಾರಾಯಣ ಅವರು, ಕಾರ್ಯಕ್ರಮ ಯಶಸ್ವೀಯಾಗುವಂತೆ ಗಮನಿಸಿದರು. ಶ್ರೀ ಜಗದ್ವೀಶ್ವರಿ ಎಂಟರ್‌ಪ್ರೈಸಸ್‌ನ ಶ್ರೀ ವಿಜಯಕುಮಾರ್ ಮತ್ತು ಪಂಚಮುಖಿ ಗಣಪತಿ ದೇವಸ್ಥಾನದ ಧರ್ಮದರ್ಶಿಗಳೂ ಹಾಗೂ ವಿಶ್ವ ಹಿಂದು ಪರಿಷತ್ತಿನ ವಿಶಿಷ್ಟ ಆಜೀವ ಸದಸ್ಯರಾದಂತಹ ಶ್ರೀ ಎಲ್ ಗೋವಿಂದರಾಜ್ ಅವರ ಪ್ರಸಾದ ಸೇವೆ ಶ್ಲಾಘನೀಯವಾಗಿತ್ತು. ಪೂಜೆ, ಅಭಿಷೇಕ ಮತ್ತು ಭಕ್ತಾದಿಗಳಿಂದ ಅರ್ಚನೆಯನ್ನು ಪುರೋಹಿತರಾದ ಶ್ರೀ ನಾಗರಾಜ ಶಾಸ್ತ್ರಿ ಮತ್ತು ಅನುಚರ ಶ್ರೀ ರಮೇಶ್ ಕ್ರಮಬದ್ಧವಾಗಿ ನಡೆಸಿಕೊಟ್ಟರು.

**(ಭಾವಚಿತ್ರ ರಕ್ಷಾಪುಟ 2 ಮತ್ತು ಪುಟ 32)** **ಶ್ರೀ ಜೆ.ಎಸ್. ಶೇಷಾದ್ರಿ** ಮಹಾನಗರ ಸೇವಾ ಪ್ರಮುಖ್

7 ಹನುಮಾನ್ ಚಾಲೀಸ – 35

10 ಸರ್ವಥಾ ಕ್ಷಮೆಗೆ ಅರ್ಹರಲ್ಲ

12 ಪುಸ್ತಕ ವಿಮರ್ಶೆ: ಮುದ್ರಾ ಮಂಜೂಷಾ

15 ಹಿಂದು ದೇವಾಲಯಗಳಿಗೆ ತಿರುಪತಿ ತಿರುಮಲ ಕೊಡುಗೆ

18 ಪ್ರಾಂತ ಬೈಠಕ್ ವರದಿ

23 ಎಲ್ಲ ಖಳನಾಯಕರಿಗೆ ಅನುಕೂಲ ಪ್ರಹಸನ

34 ಜೈನಮತದ ಪಂಚಾಣುವ್ರತಗಳು

36 ಸಂಸ್ಕೃತಿ ಶಿಕ್ಷಣ ಶಿಬಿರ




## ಎಂದಿನಂತೆ




1 ಸೂಕ್ತಿಶ್ರೀ : ಧರ್ಮ

4 ಪ್ರತಿಧ್ವನಿ

5 ಸಂಪಾದಕೀಯ: ಭಾರತದ ಸಾರ್ವಭೌಮತೆ

26 ಕ್ಷೇತ್ರದರ್ಶನ : ಶಿರಸಿ ಮಾರಿಕಾಂಬ ದೇವಾಲಯ

30 ವಿಶ್ವ ಹಿಂದು ವಾರ್ತಾ

33 ಶಬ್ದಶೋಧ – 77

37 ಪ್ರಸ್ತುತ – ಸಾಕಾರಗೊಂಡ ಸಮಾವೇಶ – 2


**ಮುಖಪುಟ**

**ಶ್ರೀರಾಮನವಮಿ : ಶ್ರೀರಾಮ ಪರಿವಾರದೊಂದಿಗೆ**




## ಕ್ರೈಸ್ತ ಮುಖವಾಡದ ಅನಾವರಣ

ಮಾರ್ಚ್ ತಿಂಗಳ ಹಿಂದುವಾಣಿಯು ಪೋಪ್‌ಸ್ಥಾನದ ಹಿಂದೆ ಮಡುಗಟ್ಟಿನಿಂತ ಪಾಪಕೃತ್ಯಗಳನ್ನು ಬಯಲಿಗೆ ತಂದಿದೆ. ಧಾರ್ಮಿಕ ಮುಖವಾಡದ ಹಿಂದೆ ಅಡಗಿರುವ ಕ್ರೂರ ಮುಖವನ್ನು ಅನಾವರಣಗೊಳಿಸಿದೆ. ಕ್ರೈಸ್ತರು ನಡೆಸುತ್ತಿರುವ ಸೇವೆಯ ಸೋಗಿನ ನೂರಾರು ಸಂಸ್ಥೆಗಳಲ್ಲಿ ಇನ್ನೇನೇನು ನಡೆಯುತ್ತಿದೆಯೋ ಏನೋ.

**– ಶಂಕರ ಗುಬ್ಬಿ**

## ಓವೈಸಿಯ ಹುಸಿ ಬಡಾಯಿ

ಈ ಮುಸ್ಲಿಂ ಬಾಯಿಬಡಾಯಿಯಿಂದ ಹುಚ್ಚೆದ್ದು ಬರುವ ಮುಸ್ಲಿಂ ಮತಾಂಧ ಗುಂಪು ವಾಸ್ತವತೆಯನ್ನು ಅರ್ಥಮಾಡಿಕೊಳ್ಳುವ ದಿನಗಳು ಬರಬೇಕಾದರೆ ಅದಕ್ಕೆ ಸರಿಗಟ್ಟುವ ಪ್ರತಿಭಟನೆ ಹಿಂದುಗಳಿಂದ ಬರಬೇಕು. ಶ್ರೀ ಪ್ರವೀಣ ತೊಗಾಡಿಯಾರವರು ಕೊಟ್ಟ ಪ್ರತ್ಯುತ್ತರದಲ್ಲಿ ಏನೂ ತಪ್ಪಿಲ್ಲ. ಮುಸ್ಲಿಮರು ಓವೈಸಿಯ ಅಪಕ್ವ ಮಾತುಗಳನ್ನು ನಿರಾಕರಿಸಿದರೆ ಮಾತ್ರ ಹಿಂದು ಮುಸ್ಲಿಂ ನಡುವಿನ ಕಂದಕವು ತುಂಬಲು ಸಾಧ್ಯ.

**– ಸೂರ್ಯಪ್ರಕಾಶ ಉದ್ಯಾವರ**

## ಹಿಂದುವಾಣಿಯ ಭವಿಷ್ಯ ನುಡಿ

ಹಿಂದುವಾಣಿಯ ಡಿಸೆಂಬರ್ ಸಂಚಿಕೆಯಲ್ಲಿ ಬರೆದಂತೆ ಆಂಧ್ರಪ್ರದೇಶದ ಈಗಿನ ಕಾರ್ಯದರ್ಶಿ ಮಿನ್ನಿ ಮ್ಯಾಥ್ಯುರವರ ನಿವೃತ್ತಿಯ ನಂತರ ಸ್ಯಾಮುಯೆಲ್‌ರವರನ್ನು ಕಾರ್ಯದರ್ಶಿಗಳನ್ನಾಗಿಸುವ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಸಿ.ಬಿ.ಐ. ನಿಂದ ವಿಚಾರಣೆಗೊಳಪಟ್ಟಿರುವ ಸ್ಯಾಮುಯಲ್ ದೆಹಲಿಯ ಶಿಫಾರಸ್ಸಿನ ಮೂಲಕ ಪರಿಶುದ್ಧರೆಂದು ವರ್ಣಿತರಾಗಿ ಅಧಿಕಾರಕ್ಕೆ ಏರಿದರೆ ಆಶ್ಚರ್ಯವೇನಿಲ್ಲ. ಗೋವಾದಲ್ಲೂ ಪೋರ್ಚುಗೀಸ್ ಕಾಲದಲ್ಲಿ ಕ್ರೈಸ್ತನಾದರೆ ಅವನಿಗೆ ಅಧಿಕಾರಗಳು ಕಾಲಬುಡಕ್ಕೆ ಬಂದಿರುತ್ತಿದ್ದವು. ಈಗ ಅದೇ ಮರುಕಳಿಸುತ್ತಿದೆ.

**– ವೆಂಕಟೇಶರಾವ್** ಆಂಧ್ರಹಳ್ಳಿ ಬೆಂಗಳೂರು

## ಕೇರಳದಲ್ಲಿ ಹಿಂದುಗಳು ಅಲ್ಪಸಂಖ್ಯಾತರು

ಕೇರಳದ 140 ಎಂ.ಎಲ್.ಎ.ಗಳಲ್ಲಿ ಹಿಂದುಗಳ ಸಂಖ್ಯೆ 60 ಮಾತ್ರ. ಉಳಿದವರೆಲ್ಲ ಕ್ರೈಸ್ತರು ಅಥವಾ ಮುಸ್ಲಿಮರು. ಈಗ ಕೇರಳದ ಮುಸ್ಲಿಂ ಜನಸಂಖ್ಯೆ 25%. ವರ್ಷಕ್ಕೆ 1.7% ದಷ್ಟು ಮುಸ್ಲಿಂ ಸಂಖ್ಯೆ ಅಲ್ಲಿ ಬೆಳೆಯುತ್ತಿದೆ. ಹಿಂದುಗಳ ಸಂಖ್ಯೆ 1.46% ದಷ್ಟು ಇಳಿಯುತ್ತಿದೆ. ಅಸ್ಸಾಮಿನಂತೆ ಕೇರಳವೂ ಮುಸ್ಲಿಂ ಬಾಹುಳ್ಯದ ಪ್ರಾಂತ್ಯವಾಗಲು ಹೆಚ್ಚು ವರ್ಷಗಳು ಉಳಿದಿಲ್ಲ. ಆಗ ಒಂದು ಲಾಭ ಆಗಲು ಹಿಂದುಗಳು ಈಗಲೇ ಪ್ರಯತ್ನಿಸುವುದು ಒಳ್ಳೆಯದು. ಅದೆಂದರೆ ಅಲ್ಪಸಂಖ್ಯಾತ ಆಯೋಗದಲ್ಲಿ ಹಿಂದುಗಳನ್ನು ಅಲ್ಪ ಸಂಖ್ಯಾತರೆಂದು ಪರಿಗಣಿಸಲು ಈಗಲೇ ಹೋರಾಡುವುದು!.

**– ವಿಶ್ವನಾಥ** ಚಿತ್ರದುರ್ಗ

# ಭಾರತದ ಸಾರ್ವಭೌಮತೆಯನ್ನು ಮಣ್ಣು ಪಾಲು ಮಾಡುವವರು

" ಈ ಪ್ರಕರಣವು ಭಾರತೀಯ ದಂಡ ಸಂಹಿತೆಯ 302 ಭಾಗ (ಕೊಲೆ ಆಪಾದನೆ)ದಲ್ಲಿ ಬರುವುದಿಲ್ಲ. ಬಂದರೂ ಕೂಡಾ ಮರಣ ದಂಡನೆಯನ್ನು ವಿಧಿಸುವಂತಹ ಅಪರೂಪದಲ್ಲೂ ವಿರಳ ಎನಿಸುವಂತಹ ಹೀನ ಕೃತ್ಯವೆನಿಸುವುದಿಲ್ಲ." ಇದು ಈಗಾಗಲೇ ಸರ್ವೋಚ್ಛ ನ್ಯಾಯಾಲಯದ ಮುಂದಿರುವ ಇಟೆಲಿಯ ಕೊಲೆಗಡುಕ ನಾವಿಕರ ಪ್ರಕರಣದ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವರಾದ ಸಲ್ಮಾನ್ ಖುರ್ಷಿದ್‌ರವರು ನೀಡಿದ ತೀರ್ಪು. ನಮ್ಮ ಸರ್ವೋಚ್ಛ ನ್ಯಾಯಾಲಯವನ್ನು ಧಿಕ್ಕರಿಸಿ ಆಪಾದಿತ ನಾವಿಕರನ್ನು ಭಾರತಕ್ಕೆ ಮರಳಿಸಲಾರೆವು ಎಂದ ಇಟಲಿ ಸರಕಾರದ ಮುಂದೆ ಗೋಗರೆದು. ಅದು ವಿಧಿಸಿದ ಶರತ್ತುಗಳೆಲ್ಲವನ್ನೂ ಒಪ್ಪಿ, ಅದನ್ನು ಲಿಖಿತರೂಪದಲ್ಲಿ ಒಪ್ಪಿಸಿ ಮುಖವುಳಿಸಿಕೊಳ್ಳಲು ನಾಮಮಾತ್ರಕ್ಕೆ ಆರೋಪಿಗಳನ್ನು ಭಾರತಕ್ಕೆ ತರಿಸಲು ಕೇಂದ್ರ ಸರಕಾರವು ನಡೆಸಿದ ಕಸರತ್ತಿನ ಭಾಗವಾಗಿ ಮುಂದಿಟ್ಟ ವಾದವಿದು.

ಇದೇ ಖುರ್ಷಿದರು ಹಿಂದೊಮ್ಮೆ ಉತ್ತರ ಪ್ರದೇಶದ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ಬರೇ 9 ಶೇಕಡಾ ಮಾತ್ರವೇನು! ಮುಸ್ಲಿಮರಿಗೆ ಶೇಕಡಾ 18 ಮೀಸಲಾತಿಯನ್ನು ನೀಡುತ್ತೇವೆ ಎಂದು ಹೇಳಿ ಚುನಾವಣಾ ಆಯೋಗದಿಂದ ಛೀಮಾರಿ ಹಾಕಿಸಿಕೊಂಡರು. ಹೀನಾಯ ಸೋಲನ್ನು ಉಂಡರು. ಈಗ ಸೋನಿಯಾರವರ ತಾಯಿ ಮನೆಗೆ ನೆರವು ನೀಡಲು ಹೊರಟು ಸರ್ವೋಚ್ಛ ನ್ಯಾಯಾಲಯದಿಂದ ನ್ಯಾಯಾಂಗ ನಿಂದನೆಯನ್ನು ಎದುರಿಸಬೇಕಾಗಿ ಬರಬಹುದು. ಎಷ್ಟೆಂದರೂ ವಿದೇಶ ವ್ಯವಹಾರಗಳ ಮಂತ್ರಿಯಾಗಲು, ಸೋನಿಯಾರ ಕುಟುಂಬಕ್ಕಾಗಿ ರಕ್ತವನ್ನು ಬೇಕಾದರೂ ಹರಿಸಬಲ್ಲೆ ಎಂದ ಈ ವ್ಯಕ್ತಿ ಈಗ ಇಟೆಲಿಯ ನಾವಿಕರಿಗೆ ಸಕಲ ರಾಜಭೋಗಗಳನ್ನು ನೀಡಲು ಸಿದ್ಧತೆ ಮಾಡುತ್ತಿರುವರು.

ಈಗ ಮತ್ತೆ ನ್ಯಾಯಾಲಯದ ಮುಂದೆ ಬರಲಿರುವ ಈ ನಾವಿಕ ಅಳಿಯಂದಿರು ಸೆರೆಮನೆಯಲ್ಲಿ ದಿನಕಳೆಯರು. ಅವರು ಇಟೆಲಿಯ ರಾಯಭಾರಿ ಕಛೇರಿಯಲ್ಲಿ ವಿಚಾರಣಾ ಕಾಲವನ್ನು ಕಳೆಯುವರು. ಅವರನ್ನು ರಾಷ್ಟ್ರಪತಿ ಭವನದಲ್ಲಿ ಸಕಲ ರಾಜ ಮರ್ಯಾದೆಯೊಂದಿಗೆ ಉಳಿಸುತ್ತೇವೆಂದು ಭಾರತ ಸರಕಾರವು ಹೇಳಿರಲೂ ಬಹುದು. ಹೀಗೆ ಭಾರತ ಸರಕಾರದ ಇಚ್ಛೆ ಅನಿಚ್ಛೆಗಳು ಜಗತ್ತಿನ ದೇಶಗಳ ನಡುವೆ ಇರಲಿ. ಭಾರತದಲ್ಲೇ ಅವುಗಳಿಗೆ ಭಯ ಗೌರವಗಳಿಲ್ಲ.

ಪಾಕಿಸ್ತಾನದಿಂದ ಬಂದ ಭಯೋತ್ಪಾದಕನೊಬ್ಬನನ್ನು ಪೋಲೀಸರು ದೆಹಲಿಯ ಹೊಟೆಲೊಂದರಲ್ಲಿ ಬಂಧಿಸಿದರು. ಇದನ್ನು ಖಂಡಿಸಿದ ಕಾಶ್ಮೀರದ ರಾಜಕಾರಣಿಗಳೆಲ್ಲರೂ ಅದು ಕಾಶ್ಮೀರದ ಪ್ರಜೆಗಳಾದ ಅವಮಾನವೆಂದು ಹುಯಿಲೆಬ್ಬಿಸಿದರು. ಅವರ ಹೇಳಿಕೆಯ ಪ್ರಕಾರ ಈ ರೀತಿಯ ಭಯೋತ್ಪಾದಕರೆಲ್ಲರೂ ಕಾಶ್ಮೀರ ಸರಕಾರವು ಏಕಪಕ್ಷೀಯವಾಗಿ ನೀಡಲಿರುವ ಕ್ಷಮಾದಾನದ ಷರತ್ತಿನ ಮೂಲಕ ಪಾಕಿಸ್ತಾನದಿಂದ ಮರಳಿ ಭಾರತಕ್ಕೆ ಬಂದು ಇಲ್ಲಿ ಸದ್ಬುದ್ಧಿಯಿಂದ ಬದುಕಲು ಬಂದಿಳಿಯುವವರು. ಹೀಗೆ ಬಂದ ಕಾಶ್ಮೀರಿಗಳನ್ನು ವಿಚಾರಿಸುವ ಅಧಿಕಾರ ಭಾರತದ ಯಾವುದೇ ಪೊಲೀಸರಿಗಿಲ್ಲ.

ಹೀಗೆ ಕ್ಷಮಾದಾನದ ಲಾಭವನ್ನು ಪಡೆದು ಬರುವ ಭಯೋತ್ಪಾದಕರು ತಾವೊಬ್ಬರೇ ಬರುವುದಲ್ಲ. ತಮ್ಮ ಜೊತೆ ಪಾಕಿಸ್ತಾನದಲ್ಲಿ ತಾವು ವಿವಾಹವಾದ ಪತ್ನಿಯರ ಜೊತೆ ಹಾಗೂ ಮಕ್ಕಳ ಜೊತೆ ಮರಳುತ್ತಿದ್ದಾರೆ. ಕೆಲವರಿಗಂತೂ ನಾಲ್ಕು ಪಾಕಿಸ್ತಾನೀ ಪತ್ನಿಯರಿರುವರು. ಹೀಗೆ ಭಾರತದ ವಿರುದ್ಧ ಯುದ್ಧ ಪೋಷಿಸಿದವರಿಗೂ ಅವರ ಹಸ್ತಕರಾದ ಶತ್ರು ದೇಶದವರಿಗೂ ಭಾರತಕ್ಕೆ ಮರಳುವ ಮುಕ್ತ ಅವಕಾಶ. ಅದು ಕೂಡಾ ಯುದ್ದ ಹೂಡಿದ ಕಾರಣದಿಂದಲೇ ದೇಶದ ವಿರುದ್ಧ ನಿಂತವರಿಗೆ ಇಲ್ಲಿಯ ಶಾಸನದ ದಂಡವು ಅತಿಕಠಿಣವಾಗಿ ಪ್ರಯೋಗಿಸ ಬೇಕಾಗಿದ್ದಿತು. ಆದರೆ ಇಲ್ಲಿ ನಡೆಯುತ್ತಿರುವುದೇ ಅದಕ್ಕೆ ವಿರುದ್ಧವಾದ ಬಗೆ.

ಎಲ್ಲೆಲ್ಲೂ ರಾಜತಾಂತ್ರಿಕ ಸೋಲನ್ನು ಹೊಂದುವ ಭಾರತದ ಪರಿಪಾಠಿ ಮುಂದುವರಿಯುತ್ತಲೇ ಇದೆ. ಸುತ್ತಮುತ್ತಲ ಯಾವುದೇ ದೇಶಗಳು ಭಾರತದ ಜೊತೆಯಲ್ಲಿಲ್ಲದ ಏಕಾಕಿತನ ಈಗ ನಮ್ಮ ದೇಶದ್ದಾಗಿದೆ. ಅತಿ ಸೂಕ್ಷ್ಮ ಪ್ರದೇಶದ ನೇಪಾಳದ ರಾಜಕೀಯ ಬೆಳವಣಿಗೆಗಳನ್ನು ತನ್ನ ಅನುಕೂಲಕ್ಕೆ ಬೇಕಾದಂತೆ ಬದಲಾಯಿಸಲು ಭಾರತವು ವಿಫಲವಾಯಿತು. ಚೀನಾ ಆ ದಿಶೆಯಲ್ಲಿ ಗೆಲುವು ಸಾಧಿಸುತ್ತಿದೆ. ಬಂಗ್ಲಾ ದೇಶಕ್ಕೆ ಸಕಲ ರಿಯಾಯಿತಿಗಳನ್ನು ನೀಡಿಯೂ ಅಲ್ಲಿ ಭಾರತ ವಿರೋಧಿಗಳ ಕೈ ಮೇಲಾಗುತ್ತಿದೆ. ಮ್ಯಾನ್ಮಾರ್ ದೇಶದಲ್ಲಿ ಎರಡು ಅತ್ಯಾಧುನಿಕ ಬಂದರುಗಳನ್ನು ನಿರ್ಮಿಸಿಕೊಡುವ ಚೀನಾ ಅಲ್ಲಿ ಸರಕಾರವನ್ನು ಭಾರತ ವಿರೋಧಿಯಾಗಿಸುತ್ತಿದೆ. ಶ್ರೀಲಂಕಾದ ರಾಜಕಾರಣದಲ್ಲಿ ಮುಂದಾಲೋಚನೆಯಿಲ್ಲದೆ ಕೈಚಾಚಿ ನಮ್ಮ ಸೈನಿಕರನ್ನು ಬಲಿಹಾಕಿದ ಭಾರತದ ಕೇಂದ್ರ ಸರಕಾರವೀಗ ಅದೇ ಪ್ರಸಂಗದ ಮುಂದುವರಿಕೆಯಾಗಿ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಮುಖಭಂಗವನ್ನು ಅನುಭವಿಸುತ್ತಿದೆ. ಅಲ್ಲೂ ಕೂಡಾ ಚೀನಾ ತನ್ನ ಅಸ್ತಿತ್ವವನ್ನು ಸ್ಥಾಪಿಸಿದೆ. ಈಗ ಶ್ರೀಲಂಕಾದ ಶಸ್ತ್ರ ಪೂರೈಕೆಯಲ್ಲಿ ಚೀನಾ ದೇಶವೇ ಮೇಲುಗೈ ಸಾಧಿಸುತ್ತಿದೆ. ಭಾರತದ ಅಫ್‌ಘಾನಿಸ್ತಾನದ ನಿಲುವು ಅಮೇರಿಕಾದ ಹಿಂತೆಗೆತದಿಂದ ನಗೆಪಾಟಲಾಗುಗುತ್ತಿದೆ. ಅಂತರಾಷ್ಟ್ರೀಯ ವಲಯಗಳಲ್ಲಿ ಹಲವು ಬಗೆಗಳಲ್ಲಿ ಹಲವು ಹಂತಗಳಲ್ಲಿ ದುರ್ಬಲವೆನಿಸಿದ ಭಾರತವನ್ನು ಯಾರು ನೆಚ್ಚಿಕೊಳ್ಳುವರು?

ಚೀನಾತನ್ನ ವ್ಯಾಪಾರನೀತಿಯಿಂದ ಭಾರತದ ಆರ್ಥಿಕತೆಯನ್ನೇ ಬುಡಮೇಲು ಮಾಡ ಹೊರಟಿದೆ. ನದಿ ನೀರನ್ನು ತನಗೆ ಬೇಕಾದಂತೆ ಉಪಯೋಗಿಸುತ್ತ ಭಾರತದ ಯೋಜನೆಗಳನ್ನು ವಿಫಲಗೊಳಿಸುತ್ತಿದೆ. ಪಾಕಿಸ್ತಾನಕ್ಕೆ ಅದು ಗುಪ್ತವಾಗಿ ನೀಡಿದ ಅಣು ರಹಸ್ಯವೀಗ ಬಯಲಾಗಿದೆ.

ಹಿಂದೆ ಅಲಿಪ್ತ ದೇಶಗಳೆಂದು ಹೆಸರಿಸಿಕೊಂಡ ದುರ್ಬಲ ದೇಶಗಳು, ಸಾರ್ಕ್ ದೇಶಗಳೆಂದು ಅಧಿವೇಶನ ನಡೆಸುತ್ತಿದ್ದ ದೇಶಗಳೀಗ ಭಾರತವನ್ನು ಗಣನೆಗೆ ತೆಗೆದುಕೊಳ್ಳದ ಪರಿಸ್ಥಿತಿ ಉದ್ಭವಗೊಂಡಿದೆ.

ದೇಶದ ಒಳಿತಿನ ಬಗ್ಗೆ ಗಮನ ವಹಿಸಬೇಕಾದ ವಿಚಾರವಂತರೆನಿಸಿಕೊಂಡವರೀಗ ಭಯೋತ್ಪಾದಕರಿಗೆ ರಕ್ಷಣೆ ನೀಡುವ ಬಗ್ಗೆ ಅವರ ಸೆರೆ ಬಿಡಿಸುವ ಬಗ್ಗೆ ಚಿಂತಿತರಾಗಿರುವರು. ಆದರೂ ಬೆಳಕಿನ ಛಾಯೆ ಹಬ್ಬುತ್ತಿದೆ. ಕತ್ತಲೆಯ ಕಾಲ ಕಳೆಯುವಂತಿದೆ.

# ಹನುಮಾನ್ ಚಾಲೀಸಾ – 35

**ಹ.ಸು. ಸುಬ್ಬರಾವ್, ಬೆಂಗಳೂರು – 33,**
**ದೂರವಾಣಿ : 080–25489293**

**ಔರ ದೇವತಾ ಚಿತ್ತ ನ ಧರಈ । ಹನುಮಂತ ಸೇಇ ಸರ್ಬ ಸುಖ ಕರ ಇ ॥**

ಇನ್ಯಾವ ದೇವರನ್ನೂ ಮನಸ್ಸಿನಲ್ಲಿ ನೆನೆಯದಿರು, ಹನುಮಂತನೊಬ್ಬನನ್ನೇ ನಿರಂತರ ಭಜಿಸು. ಅವನಿಂದಲೇ ನಿನಗೆ ಸರ್ವಸುಖಗಳು ದೊರೆಯುವುವು.



ಹನುವಾನ ಚಾಲೀಸದ ಮೂಲಕ ಸಂತ ತುಲಸೀದಾಸರು ಆತ್ಮೋನ್ನತಿಯ ಮಾರ್ಗವನ್ನು ಹೇಳುತ್ತಾರೆ. ಒಂದನೇ ಪದ್ಯದಿಂದಲೂ ಹನುಮಂತನ ದೈಹಿಕ ಶಕ್ತಿ, ಮನೋಬಲ, ವಿಚಾರಶೀಲತೆ, ಚಿಂತನ ಶಕ್ತಿ, ಕಾರ್ಯವೈಖರಿಯನ್ನು ನಾನಾ ರೀತಿಯಲ್ಲಿ ಹೇಳಿದ ನಂತರ ಇಲ್ಲಿ ಅದರ ಪರಾಕಾಷ್ಠೆಯಾದ ದೈವೀ ಸ್ವರೂಪವನ್ನು ಬಣ್ಣಿಸುತ್ತಾರೆ. ಅವರಿಗೆ ಹನುಮಂತನು ದರ್ಶನ ಕೊಟ್ಟಾಗ ಅವನ ವಿಶ್ವರೂಪವೇ ಅವರಿಗೆ ಕಾಣಿಸಿರಬೇಕು. ಅವನಲ್ಲಿ ಸಕಲದೇವತೆಗಳೂ ಕಾಣಿಸಿರಬೇಕು. ಆಗ ಅವರ ಬಾಯಿಂದ – 'ಬೇರೆ ಯಾವ ದೇವರೂ ಹೊರಗೆಲ್ಲೋ ಇಲ್ಲ. ಎಲ್ಲ ದೇವತೆಗಳೂ ಹನುಮಂತನಲ್ಲಿಯೇ ನೆಲೆಯಾಗಿದ್ದಾರೆ' – ಎಂಬ ವಾಣಿ ತಾನೇ ತಾನಾಗಿ ಹೊರಬಂದಿತು. ಹನುಮಂತನಿಂದಲೇ ಸರ್ವ ಸುಖವುಂಟಾಗುವುದು – ಎಂದು ಮನವರಿಕೆಯಾಗಿ ಈ ಸಾಲುಗಳನ್ನು ಹೇಳಿದ್ದಾರೆ.

ಅವನ ದೈಹಿಕ ಸಾಮರ್ಥ್ಯವನ್ನಂತೂ ನಾವು ಎಲ್ಲ ಸಂದರ್ಭಗಳಲ್ಲೂ ಕಾಣುತ್ತೇವೆ. ರಾವಣನ ಅಂತಃಪುರಪ್ರವೇಶ, ಅಲ್ಲಿ ಸೀತಾನ್ವೇಷಣ, ರಾಕ್ಷಸ ಸ್ತ್ರೀಯರು ವಿವಿಧ ಭಂಗಿಗಳಲ್ಲಿ ಮಲಗಿರುವ ದೃಶ್ಯಗಳು, ನಂತರ ಪಾನಗೃಹಕ್ಕೆ ಪ್ರವೇಶ ಅಲ್ಲಿ ಸಂಗ್ರಹವಾಗಿದ್ದ ಮದ್ಯ–ಮಾಂಸಗಳ ರಾಶಿ ಮುಂತಾಗಿ ಎಲ್ಲ ರೀತಿಯ ಭೀಭತ್ಸ ದೃಶ್ಯಗಳನ್ನು ನೋಡಿಯೂ ಕೊಂಚವೂ ಮನಃ ಕಾಶಾಯವಿಲ್ಲದ ಸ್ಥಿತಿಯಲ್ಲಿರುತ್ತಾನೆ. ಇದು ಅವನ ಮನಸ್ಸಿನ ಔನ್ನತ್ಯವನ್ನು ತೋರಿಸುತ್ತದೆ.

ಮಾತಿನಲ್ಲಂತೂ ಹನುಮಂತನನ್ನು ಸರಿಗಟ್ಟುವವರು ಯಾರೂ ಇಲ್ಲ. ಮೊದಲಬಾರಿಗೆ ರಾಮ ಲಕ್ಷ್ಮಣರನ್ನು ನೋಡಿದಾಗ, ಸುಗ್ರೀವನಿಗೆ ರಾಮನ ಬಗ್ಗೆ ಎಚ್ಚರಿಕೆ ಕೊಡುವಾಗ, ತಾರೆಗೆ ಜೀವನದ ರಹಸ್ಯವನ್ನು ತಿಳುಹಿದಾಗ, ರಾವಣನಿಗೆ ರಾಮನ ಬಗ್ಗೆ ಹೇಳುವಾಗ, ಸೀತೆಗೆ ಅಂಗುಲೀಯಕವನ್ನು ಕೊಟ್ಟಾಗ ಆಡುವ ಮಾತುಗಳು ಒಂದೊಂದು ಅಧ್ಯಾತ್ಮ ಮಾರ್ಗದಲ್ಲಿ ಹನುಮಂತನು ಯಾವ ಮಟ್ಟಕ್ಕೇರಿದ್ದನೆಂಬುದರ ಸುಂದರ ದೃಶ್ಯ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಯಾವ ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ತನ್ನ ಆಚರಣೆಯಿಂದ ತೋರಿಸಿಕೊಟ್ಟ

ಆಂಜನೇಯನು ರಾಮನ ನಂತರ ಉನ್ನತ ವ್ಯಕ್ತಿಯಾಗಿ ಗೋಚರಿಸುತ್ತಾನೆ. ವಾಲಿಯ ಮರಣಕ್ಕೆ ದುಃಖಿಸುತ್ತಿರುವ ತಾರೆಯನ್ನು ಆಂಜನೇಯನು, ಆರ್ಯೆ–ಎಂದು ಸಂಬೋಧಿಸುತ್ತಾ – ಫಲಾಪೇಕ್ಷೆಯಿಂದ ಮಾಡಿದ ಕರ್ಮವು ಸದ್ಬುದ್ಧಿಯಿಂದ ಮಾಡಿದ್ದರೂ, ದುರ್ಬುದ್ಧಿಯಿಂದ ಮಾಡಿದ್ದರೂ ಮುಂದಿನ ಜನ್ಮದಲ್ಲಿ ಅದರ ಫಲವನ್ನು ಅನುಭವಿಸಲೇ ಬೇಕಾಗುತ್ತದೆ. ನಾವು ಹಿಂದಿನ ಜನ್ಮದಲ್ಲಿ ಯಾವ ಯಾವ ಕರ್ಮ ಮಾಡಿದ್ದೇವೆಂಬುದು ನಮಗೆ ತಿಳಿಯದು. ಇ ಜನ್ಮದಲ್ಲಾದರೂ ಸತ್ಕರ್ಮ ಮಾಡಿ ಮುಂದಿನ ಜನ್ಮಕ್ಕೆ ನಮ್ಮ ಆತ್ಮವನ್ನು ಶುದ್ಧಿಮಾಡಿಕೊಳ್ಳೋಣ. ನಮಗೆ ಈಗಾಗಲೇ ಎಷ್ಟೋ ಜನ್ಮಗಳಾಗಿವೆ. ಒಂದೊಂದು ಜನ್ಮದಲ್ಲೂ ತಾಯಿ–ತಂದೆ, ಗಂಡ ಹೆಂಡತಿ ಮುಂತಾಗಿ ಲೆಕ್ಕವಿಲ್ಲದಷ್ಟು ಆಗಿ ಹೋಗಿದ್ದಾರೆ. ಹೀಗಾಗಿ ನಾವು ಯಾರಿಗಾಗಿ ಅಳಬೇಕು? ಯಾವುದಕ್ಕಾಗಿ ಅಳಬೇಕು? ನಾವೂ ಸಾಯುವವರೇ ಅಲ್ಲವೆ? ಯಾರಿಗೆ ಯಾರಿದ್ದಾರೆ? ಮರಣಾನಂತರ ಜೊತೆಯಲ್ಲಿ ಬರುವವರು ಯಾರು? ಈ ದೇಹವಾದರೋ ಕ್ಷಣ ಭಂಗುರವಾದದ್ದು. ನೀರಿನ ಮೇಲಣ ಗುಳ್ಳೆಯಂತೆ ನೋಡ ನೋಡುತ್ತಲೇ ಒಡೆದು ಹೋಗುವುದು. – ಎಂದು ಹೇಳುತ್ತಾನೆ. ಈ ಮಾತುಗಳನ್ನು ಕೇಳಿದ ಒಡನೆಯೇ ತಾರೆಯ ಮನಸ್ಸು ರಾಮನ ನಿಜಸ್ವರೂಪವನ್ನು ಕಾಣುವುದು.

ರಾಮನಿಂದ ನಾಲ್ಕು ತಿಂಗಳು ಕಾಲಾವಕಾಶ ಪಡೆದ ಸುಗ್ರೀವನು ಭೋಗದಲ್ಲಿ ಮುಳುಗಿ ರಾಮಕಾರ್ಯವನ್ನು ಮರೆತನು. ಆಗ ಆಂಜನೇಯನು, ಸುಗ್ರೀವನನ್ನು ಎಚ್ಚರಿಸಬೇಕಾದ್ದು ನನ್ನ ಕರ್ತವ್ಯವೆಂದು ಯೋಚಿಸಿ, ಎಲೈ ಸುಗ್ರೀವಾ! ತನು, ಧನ, ಅರಮನೆ, ಸತಿ–ಸುತರು, ರಾಜ್ಯ. ಇವೆಲ್ಲವೂ ಕ್ಷಣಭಂಗುರವಾದವುಗಳು. ಇವುಗಳ ಮೇಲಿನ ಮೋಹವನ್ನು ಬಿಡು. ನೀನು ಈ ಕೂಡಲೇ ಹೋಗಿ ರಾಮನಿಗೆ ಶರಣಾಗಿ ವಿಳಂಬವಾದದ್ದಕ್ಕೆ ಕ್ಷಮೆ ಕೇಳಿ ಸೀತೆಯನ್ನು ಹುಡುಕಿಸುವ ಯತ್ನಮಾಡು. ಈಗ ನೀನು ಭೋಗಿಸುತ್ತಿರುವ ಭಾಗ್ಯವು ರಾಮನಿಂದಲೇ ಬಂದುದೆಂಬುದನ್ನು ಮರೆಯದಿರು. ಉಪಕಾರವನು. ಮರೆಯುವುದು ಸರಿಯಲ್ಲ. – ಎಂದು ಎಚ್ಚರಿಸುತ್ತಾನೆ.

ಹನುಮಂತನು ರಾವಣನ ಮುಂದೆ ಏಕಾಂಗಿಯಾಗಿ ನಿಂತಿದ್ದಾನೆ. ಕೈಗಳಲ್ಲಿ ಯಾವುದೇ ಆಯುಧವಿಲ್ಲ. ಸುತ್ತಲೂ ಭಯಂಕರ ರಾಕ್ಷಸರಿದ್ದಾರೆ. ಎಲ್ಲರೂ ರಾವಣನ ಕಡೆಯವರೇ ಆಗಿದ್ದಾರೆ. ಆದರೂ ಅವರೆಲ್ಲರ ಮಧ್ಯೆ ನಿಂತು ಧೈರ್ಯವಾಗಿ ರಾವಣನಿಗೆ ಹೇಳುವ ಮಾತುಗಳು ಹನುಮಂತನ ಸ್ಥೈರ್ಯವನ್ನು ತಿಳಿಸುತ್ತವೆ. "ಎಲೈ ರಾವಣನೇ, ನೀನು ಪುಲಸ್ತ್ಯವಂಶದವನು. ವಿಶ್ರವಸ್ಸುವಿನ ಮಗನು. ಮಹಾ ಬಲಾಢ್ಯನು; ಹರನಿಂದಲೂ ಬ್ರಹ್ಮನಿಂದಲೂ ವರವನ್ನು ಪಡೆದವನು. ನಿನ್ನಂತಹ ಧರ್ಮ ತಿಳಿದವರೂ, ಬುದ್ಧಿಶಾಲಿಗಳೂ ಧರ್ಮಕ್ಕೆ ವಿರುದ್ಧವಾದ ಕಾರ್ಯವನ್ನು ಎಂದೂ ಮಾಡಲೂ ಹೋಗುವುದಿಲ್ಲ. ಮಹಾಪತಿವ್ರತೆಯಾದ ಸೀತಾದೇವಿಯನ್ನು ಏಕೆ ಅಪಹರಿಸಿ ತಂದೆ? ಶ್ರೀರಾಮನ ಕ್ರೋಧಕ್ಕೆ ಪಾತ್ರನಾಗಿರುವೆ. ಆದರೂ ರಾಮನು ನಿನ್ನನ್ನು ಕ್ಷಮಿಸುತ್ತಾನೆ. ಸೀತಾದೇವಿಯನ್ನು ಶ್ರೀರಾಮನಿಗೆ ಒಪ್ಪಿಸಿ ಕ್ಷಮೆ ಕೇಳು. ನೀನೂ ಬದುಕುಳಿಯುವೆ; ನಿನ್ನನ್ನು ನಂಬಿರುವ ಎಲ್ಲ ರಾಕ್ಷಸರೂ ಉಳಿಯುವರು. ಹಾಗಿಲ್ಲವಾದರೆ ಸರ್ವನಾಶವನ್ನು ಹೊಂದುವೆ – ಎಂದನು. ಈ ಮಾತುಗಳನ್ನು ದೈವೀಗುಣವುಳ್ಳವನೇ ಆಡಲು ಸಾಧ್ಯ.

ಹನುಮಾನ ಚಾಲೀಸದಲ್ಲಿ ಹನುಮಂತನ ಒಂದೊಂದು ನಡೆ–ನುಡಿಯನ್ನೂ ಆತ್ಮೋದ್ಧಾರದ ಮೆಟ್ಟಿಲುಗಳಾಗಿ ವರ್ಣಿಸಿ, ಕಡೆಯಲ್ಲಿ ಔರದೇವತಾ ಚಿತ್ತ ನ ಧರ ಇ – ಎನ್ನುತ್ತಾರೆ. ಬೇರೆ

ಯಾವದೇವರನ್ನೂ ನೀನು ಮನದಲ್ಲಿ ನೆನೆಯಬೇಕಾದದ್ದಿಲ್ಲ. ಹನುಮಂತನಲ್ಲೇ ಸಕಲದೇವತೆಗಳೂ ಇದ್ದಾರೆ. ಅಂದ ಮಾತ್ರಕ್ಕೆ ಇತರ ದೇವರುಗಳನ್ನು ಕಡೆಗಣಿಸಬೇಕೆಂದಲ್ಲ. ಹನುಮಂತನಲ್ಲೇ ಸಕಲ ದೇವತೆಗಳನ್ನೂ ಕಾಣಬಹುದು.

ಬ್ರಹ್ಮನು ನೀನು ಮುಂದಿನ ಬ್ರಹ್ಮ ಪಟ್ಟಕ್ಕೆ ಅರ್ಹನಾಗಿರುವೆ ಎಂದು ಹೇಳಿದ್ದರಿಂದ ಹನುಮನು ಬ್ರಹ್ಮನಿಗೆ ಸಮಾನನಾದನು. ವಾನರರೆಲ್ಲರನ್ನೂ ಮುನ್ನಡೆಸಿ, ಅವರಿಗೆ ಎಲ್ಲೂ ಏನೂ ಹಾನಿಯಾಗದಂತೆ ದಾರಿ ತೋರಿಸಿ, ಸಮುದ್ರವನ್ನು ದಾಟಿ ಸೀತೆಯ ವಿಚಾರವೆಲ್ಲವನ್ನೂ ತಿಳಿದು ಬಂದು ವಾನರರ ಜೀವವನ್ನು ರಕ್ಷಿಸಿದ್ದಲ್ಲದೆ, ರಾಮನ ಆಲಿಂಗನದ ಮೂಲಕ ತನ್ನ ಹೃದಯದಲ್ಲಿ ರಾಮನನ್ನೇ ಹೊಂದಿದ್ದರಿಂದ ವಿಷ್ಣುವಿಗೆ ಸಮಾನನಾದನು. ಶಿವನು ತ್ರಿಪುರಗಳನ್ನು ದಹಿಸಿ ರಾಕ್ಷಸರನ್ನು ಹೇಗೆ ನಾಶ ಮಾಡಿದನೋ, ಹಾಗೆಯೇ ಹನುಮಂತನೂ ಲಂಕಾ ನಗರಿಯನ್ನು ಸುಟ್ಟು ಭಸ್ಮ ಮಾಡಿ, ರಾಕ್ಷಸರನ್ನು ನಾಶ ಮಾಡಿ ಶಿವನಿಗೆ ಸಮಾನನಾದನು. ಹೀಗೆ ಬ್ರಹ್ಮ, ವಿಷ್ಣು, ಈಶ್ವರರನ್ನು ತನ್ನಲ್ಲೇ ಹೊಂದಿದವನಾದನು. ಶಿವನೇ ಹನುಮಂತನಾಗಿ ಅವತಾರ ತಾಳಿದ್ದು, ರಾಮನನ್ನೇ ಹೃದಯದಲ್ಲಿ ಧರಿಸಿದ್ದು, ಬ್ರಹ್ಮನ ಅನುಗ್ರಹಗಳಿಂದಾಗಿ ಹನುಮಂತನು ತ್ರಿಮೂರ್ತಿ ಸ್ವರೂಪನಾದನು. ದತ್ತಾತ್ರೇಯರು ಹೇಗೆ ತ್ರಿಮೂರ್ತಿ ಸ್ವರೂಪರೋ ಹನುಮಂತನೂ ತ್ರಿಮೂರ್ತಿ ಸ್ವರೂಪನಾದನು. ಆದ್ದರಿಂದ ಹನುಮಂತನನ್ನು ಭಜಿಸಿದರೆ ತ್ರಿಮೂರ್ತಿಗಳನ್ನು ಭಜಿಸಿದಂತೆ ಆಯಿತು. ಹೀಗೆ ಹನುಮಂತನನ್ನು ಭಜಿಸಿದ ಮೇಲೆ ಬೇರೆ ಯಾವ ದೇವರನ್ನೂ ಭಜಿಸುವ ಅಗತ್ಯವಿಲ್ಲಾ ಎಂದು ಹೇಳಿ ತುಲಸೀದಾಸರು ಹೇಳಿ ಹನುಮಂತನಲ್ಲಿಯೇ ಸಕಲ ದೈವತ್ವವನ್ನು ಕಾಣುತ್ತಾರೆ. ರಾಮನಾದರೋ ಎಲ್ಲ ಕಾರ್ಯಗಳಿಗೂ ಹನುಮಂತನನ್ನೇ ನಿಯೋಜಿಸಿದ್ದಲ್ಲದೆ ಬೇರೆ ಯಾರ ಸಹಾಯವನ್ನೂ ಕೋರಲಿಲ್ಲ. ಇವೆಲ್ಲವುಗಳಿಂದ ನಾವು ತಿಳಿಯುವುದೇನೆಂದರೆ ಹನುಮಂತನೊಬ್ಬನನ್ನೇ ಭಜಿಸಿದರೆ, ಧ್ಯಾನಿಸಿದರೆ, ಅರ್ಚಿಸಿದರೆ ಎಲ್ಲ ದೇವತೆಗಳನ್ನೂ ಪೂಜಿಸಿದಂತೆ ಆಗಿ ನಮ್ಮ ಮನೋಭಿಷ್ಟಗಳೆಲ್ಲವೂ ನೆರವೇರುತ್ತವೆ.

## ಶ್ರೀ ಅಣ್ಣಪ್ಪ ರಾಯಕರ್ ನಿಧನ

ಶ್ರೀ ಅಣ್ಣಪ್ಪ ರಾಯಕರ (38 ವರ್ಷ) ರವರು 9–03–2013 ರಂದು ಸ್ವರ್ಗಸ್ಥರಾದರು.

ಬೆಳಗಾಂವನ ನಿವಾಸಿಗಳಾಗಿದ್ದ ಅಣ್ಣಪ್ಪನವರು 93–94ರಲ್ಲಿ ಒಂದು ವರ್ಷ ವಿಶ್ವ ಹಿಂದು ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತರಾಗಿ ಮಂಗಳೂರಿನಲ್ಲಿ ಸೇವೆ ಸಲ್ಲಿಸಿದ್ದರು. ಜೊತೆಗಾರರೊಂದಿಗೆ ಅಣ್ಣಪ್ಪವರು ಅತ್ಯಂತ ಪರಿಶ್ರಮೀ ಕಾರ್ಯಕರ್ತರೆನಿಸಿಕೊಂಡಿದ್ದರು. ಅವರಿಗೆ ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತೇವೆ.


## ಹಿಂದುವಾಣಿ – ಜಾಹೀರಾತು ದರ

| | |
|---|---|
| **ಆರ್ಟ್‌ಪೇಪರ್ ಬಹುವರ್ಣದಲ್ಲಿ** | |
| **2 ಅಥವಾ 3ನೇ ರಕ್ಷಾ ಪುಟ** | **10000=00** |
| **ಮ್ಯಾಪ್‌ಲಿಥೋ ಕಪ್ಪುಬಿಳುಪು** | |
| **ಒಂದು ಪುಟ** | **3000=00** |

# ಸರ್ವಥಾ ಕ್ಷಮೆಗೆ ಅರ್ಹರಲ್ಲದವರು



**– ದಾಮೋದರ ಶೆಟ್ಟಿ, ಇರುವೈಲ್**
ಮುಂಬಯಿ

ಶಸ್ತ್ರಾಸ್ತ್ರಗಳನ್ನು ಮನೆಯಲ್ಲಿ ಅಕ್ರಮ ವಾಗಿ ಸಂಗ್ರಹಿಸಿ ಇಟ್ಟುಕೊಂಡುದುದಕ್ಕೆ ಬಾಲಿವುಡ್ ನಟ ಸಂಜಯ ದತ್‌ಗೆ ದೇಶದ ಸರ್ವೋಚ್ಚ ನ್ಯಾಯಾಲಯವು ಐದು ವರ್ಷದ ಸೆರೆಮನೆ ವಾಸದ ಶಿಕ್ಷೆಯನ್ನು ವಿಧಿಸಿದೆ. ಆತ ಈಗಾಗಲೇ ಸುಮಾರು ಹದಿನೆಂಟು ತಿಂಗಳು ಸೆರೆಯಲ್ಲಿ ಇದ್ದುದ ರಿಂದ ಆ ಅವಧಿಯನ್ನು ಅವನ ಒಟ್ಟು ಶಿಕ್ಷೆಯಿಂದ ಕಳೆದು ಉಳಿದ ಅವಧಿಯಾದ ಸುಮಾರು ಮೂರುವರೆ ವರ್ಷಗಳ ಸೆರೆವಾಸವನ್ನು ಅವನು ಅನುಭವಿಸ ಬೇಕೆಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟೀಕರಿಸಿದೆ.

ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಹಾಗೂ ಸಾಗಾಟ ಮಾಡಲು ನೆರವಾದವರಿಗೆ ಹತ್ತು ವರ್ಷಗಳ ಸಜೆಯಾದರೆ, ಅಂತಹ ಶಸ್ತ್ರಾಸ್ತ್ರಗಳನ್ನು ಮನೆಯಲ್ಲಿ ಸಂಗ್ರಹಿಸಿ ಇಟ್ಟವನಿಗೆ ಯಾಕೆ ಕಡಿಮೆ ಶಿಕ್ಷೆಯೆಂದು ಸಾರ್ವಜನಿಕರು ಪ್ರಶ್ನಿಸುವಂತಿಲ್ಲ. ಹಾಗೆ ಪ್ರಶ್ನಿಸಿದರೆ ಅದು ನ್ಯಾಯಾಲಯದ ನಿಂದನೆಯಾಗುತ್ತದೆ. ಆದರೆ ನ್ಯಾಯಾಲಯವು ಶಿಕ್ಷೆಯನ್ನು ಪ್ರಕಟಿಸಿದ ತಕ್ಷಣವೇ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಯೊಬ್ಬರು ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳು ತಮ್ಮ ವಿಶೇಷಾಧಿಕಾರವನ್ನು ಬಳಸಿ ಸಂಜಯ್ ದತ್‌ನ ಶಿಕ್ಷೆಯನ್ನು ಮನ್ನಾ ಮಾಡಬೇಕೆಂದು ಹೇಳಿಕೆಯನ್ನಿತ್ತರು. ಪಾರ್ಲಿಮೆಂಟ್ ಸದಸ್ಯೆ ಶ್ರೀಮತಿ ಜಯಾ ಬಚ್ಚನ್‌ರಂತೂ ಸಂಜಯ್ ದತ್ ಈಗ ಬದಲಾದ ಮನುಷ್ಯ, ಆದುದರಿಂದ ಅವನಿಗೆ ಜೈಲು ವಾಸದಿಂದ ವಿನಾಯತಿ ನೀಡಬೇಕೆಂದು ಅಪ್ಪಣೆಕೊಡಿಸಿದರು. ಇನ್ನೂ ಅನೇಕ ಘಟಾನುಘಟಿಗಳು ಅದೇ ಅರ್ಥದ ಮಾತನ್ನಾಡಿ ಸಂಜಯ್ ದತ್‌ನ ಖಾಸಗಿ ವಕೀಲರಂತೆ ವರ್ತಿಸಿದ್ದಾರೆ.

ಸಂಜಯ್ ದತ್ ಈಗ ಬದಲಾದ ಮನುಷ್ಯನಾಗಿರಬಹುದು. ಆದರೆ ಅವನಿಗೆ ಶಿಕ್ಷೆ ವಿಧಿಸಿರುವುದು ಆತ ಇಪ್ಪತ್ತು ವರ್ಷಗಳ ಹಿಂದೆ ಮಾಡಿದ್ದ ಅಪರಾಧಕ್ಕಾಗಿ ಎಂಬುದನ್ನು ಶ್ರೀಮತಿ ಜಯಾ ಬಚ್ಚನ್ ತಿಳಿದಿರತಕ್ಕದ್ದು. ಇಪ್ಪತ್ತು ವರ್ಷಗಳಷ್ಟು ದೀರ್ಘ ಅವಧಿಯ ಸ್ವಾತಂತ್ರವನ್ನು ಅವನು ಅನುಭವಿಸುವುದಕ್ಕೆ ಸಾಧ್ಯವಾದುದು ನಮ್ಮ ಕಾನೂನು ವ್ಯವಸ್ಥೆಯ ವೈಫಲ್ಯದಿಂದ ಅಷ್ಟೇ.

ಸಂಜಯ್ ದತ್‌ನನ್ನು ಕ್ಷಮಿಸುವಂತೆ ವಕಾಲತ್ ಮಾಡುವವರಲ್ಲಿ ಯಾರೂ ತಮ್ಮ ಹತ್ತಿರದ

ಬಂಧುಗಳನ್ನು 1993ರ ಬಾಂಬು ಸ್ಫೋಟದಲ್ಲಿ ಕಳೆದುಕೊಂಡಿಲ್ಲ ಅಥವಾ ಯಾವುದೇ ರೀತಿಯ ಆರ್ಥಿಕ ನಷ್ಟವನ್ನು ಅನುಭವಿಸಿಲ್ಲ. ಇವರೆಲ್ಲರಿಗೂ ಸಂಜಯ್‌ದತ್‌ನ ಇನ್ನೂ ನಿರ್ಮಾಣ ಹಂತದಲ್ಲಿರುವ ಸಿನೆಮಾದಲ್ಲಿ ಹೂಡಿರುವ ಸುಮಾರು 250 ಕೋಟಿ ರೂಪಾಯಿಗಳು ನಷ್ಟವಾಗುವ ಚಿಂತೆ. 1993ರ ಬಾಂಬು ಸ್ಫೋಟದಲ್ಲಿ ಪ್ರಾಣ ಕಳೆದು ಕೊಂಡ ಸುಮಾರು 250ಕ್ಕೂ ಮಿಕ್ಕಿದ ಜನರ ಕುಟುಂಬ ಅನುಭವಿಸಿದ ನಷ್ಟ ಇವರಿಗೆ ನಗಣ್ಯ. ಆತನ ಬಗ್ಗೆ ಅನುಕಂಪದ ಸುರಿಮಳೆ ಸುರಿಸುತ್ತಿರುವವರು ಬಹುಷಃ ಆತನ ಸಿನೆಮಾಗಳಲ್ಲಿ ಪ್ರತ್ಯಕ್ಷ ಯಾ ಪರೋಕ್ಷವಾಗಿ ಹಣ ಹೂಡಿರುವವರೇ ಆಗಿರಬೇಕು. ಅಥವಾ ಅವರಿಂದ ಯಾವುದೋ ಲಾಭಕ್ಕಾಗಿ ಪ್ರೇರಣೆ ಹೊಂದಿದವರಿರಬಹುದು. ಕ್ಷಮಿಸುವುದಾದರೆ ಬರೇ ಸಂಜಯ್ ದತ್ ಯಾಕೆ? ಬಾಂಬು ಸ್ಫೋಟದಲ್ಲಿ ಭಾಗಿಯಾದ ಎಲ್ಲರನ್ನೂ ಕ್ಷಮಿಸಿ ಬಿಡಬಹುದಲ್ಲ! ಯಾಕೆಂದರೆ ಅವರೆಲ್ಲರೂ ಕಳೆದ ಇಪ್ಪತ್ತು ವರ್ಷಗಳಿಂದ ಜೈಲು ವಾಸವನ್ನು ಅನುಭವಿಸಿದವರೇ ಆಗಿರುತ್ತಾರೆ.

ಸಾರ್ವಜನಿಕರು ತಿಳಿದಂತೆ ಪಾಕಿಸ್ತಾನದಿಂದ ಅಕ್ರಮವಾಗಿ ಬಂದ ಬಹಳಷ್ಟು ಆಕ್ರಮ ಆಯುಧಗಳಲ್ಲಿ ಒಂದನ್ನು ಆಯ್ದು ಇರಿಸಿಕೊಂಡ ಅಪರಾಧ ಮಾತ್ರವಲ್ಲದೆ ಅಪರಾಧಿಗಳಿಗೆ ಸಹಾಯ ಮಾಡಿದ ಆಪಾದನೆಯೂ ಸಂಶಯಾತೀತವಾಗಿ ನ್ಯಾಯಾಲಯದಲ್ಲಿ ಸಿದ್ಧವಾಗಿರುವಾಗ ಆತ ನಿರಪರಾಧಿ ಹೇಗಾಗುತ್ತಾನೆ? ಸಂಜಯ ದತ್ ಆ ಸಂದರ್ಭದಲ್ಲಿ ಪೋಲೀಸರಿಗೆ ಮಾಹಿತಿ ಕೊಡುತ್ತಿದ್ದರೆ ಭಾರತದ ಆರ್ಥಿಕ ರಾಜಧಾನಿಯ ಮೇಲೆ ಆಗುತ್ತಿದ್ದ ಅತಿ ದೊಡ್ಡ ಧಾಳಿಯನ್ನು ತಪ್ಪಿಸಬಹುದಾಗಿತ್ತು. ಸಂಜಯ್ ದತ್‌ನ ಗರಾಜಿನಿಂದಲೇ ಅಕ್ರಮ ಶಸ್ತ್ರಾಸ್ತ್ರಗಳ ವಿತರಣೆಯಾದುದೆಂದು ಆತನ ಮಿತ್ರರಾದ ಹನೀಫ್ ಕಡವಾಲ ಹಾಗೂ ಸಮೀರ್ ಹಿಂಗೋರಾ ಪೋಲೀಸರ ಮುಂದೆ ತಪ್ಪೊಪ್ಪಿಕೊಂಡಿದ್ದಾರೆ. ಸಂಜಯ್ ದತ್ ಹಾಗೂ ದಾವೂದ್ ಇಬ್ರಾಹಿಮ್ ನಡುವಿನ ಸ್ನೇಹವೂ ಕೂಡ ಈಗ ಗುಟ್ಟಾಗಿ ಉಳಿದಿಲ್ಲ.

ಇಷ್ಟಿದ್ದೂ ಸಂಜಯ್ ನಿರಪರಾಧಿ ಅಥವಾ ಕ್ಷಮೆಗೆ ಅರ್ಹ ಎಂದು ವಾದಿಸುವವರಿಗೆ ಬಾಂಬು ಸ್ಫೋಟದಲ್ಲಿ ಸತ್ತ ಜನರ ಕುಟುಂಬದ ಭಾವನೆಗಳಿಗೆ ಯಾವುದೇ ಬೆಲೆಯಿಲ್ಲ ವೆಂದಾಯಿತು. ಆದರೆ ಡಾ. ಸುಬ್ರಮಣಿಯಮ್ ಸ್ವಾಮಿ ಮಾತ್ರ ಸಂಜಯ್ ದತ್‌ಗೆ ಕ್ಷಮಾದಾನ ನೀಡಿದ್ದೇ ಆದರೆ ತಾನು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿ ಹೇಳಿಕೆ ಕೊಟ್ಟಿರುತ್ತಾರೆ. ದೇಶದ ಎಲ್ಲಾ ನಾಗರಿಕರ ಅಭಿಪ್ರಾಯವೂ ಅದೇ ಆಗಿದೆ. ಅಪರಾಧಿಗಳನ್ನು ಬಗ್ಗಿಸಬಲ್ಲ ಅಸ್ತ್ರವಿದ್ದರೆ ಅದು ಕಠೋರವಾದ ದಂಡನೀತಿ. ಕ್ಷಮೆಯಲ್ಲ.

**ನೀವೆಷ್ಟು ಬುದ್ಧಿವಂತರು ಪುಟ 22 : ಉತ್ತರ**

| | | |
|---|---|---|
| 1. ನೇಪಾಳ | 2. ಉಷ್ಟ್ರಪಕ್ಷಿ | 3. ಎಂ. ಗೋವಿಂದಪೈ |
| 4. ನಾರದ | 5. ನೀಲಗಿರಿ ಬೆಟ್ಟಗಳು | 6. ಗುಲ್ಬರ್ಗಾ |
| 7. ಏಳು | 8. ಅಪಲೋ–11 | 9. ಆನಿಬೆಸೆಂಟ್ |
| 10. ವಿಜಯಕುಮಾರ್ | | |

| ಉತ್ತರ ಸರಿಯಾದರೆ : | 9–10 ಅತ್ಯುತ್ತಮ | 7–8 ಉತ್ತಮ | 5–6 ಸಾಧಾರಣ |
|---|---|---|---|

ಕನ್ನಡ ಸಂಸ್ಕೃತಿಗೆ ಹಿರಿದಾದ ಅಂತಃಸತ್ವವಿದೆ. ಭವ್ಯಪರಂಪರೆ ಇದೆ. ಅನೇಕ ಶತಮಾನಗಳ ಅವಧಿಯಲ್ಲಿ ಸುಂದರವಾದದ್ದನ್ನು, ಸತ್ಯವಾದದ್ದನ್ನು, ಹಳೆಯದನ್ನು ಮರೆಯದೆ, ಹೊಸದನ್ನು ಅಲಕ್ಷಿಸದೆ, ಉತ್ತಮಾಂಶಗಳನ್ನು ತನ್ನದಾಗಿಸಿಕೊಂಡ ಕರ್ನಾಟಕ ಸಂಸ್ಕೃತಿಯು ವಿಶಿಷ್ಟ ಘನತೆಯನ್ನು ಔನ್ನತ್ಯವನ್ನು ಕಾಪಾಡಿಕೊಂಡು ಬಂದಿದೆ. ನಮ್ಮ ಜನ ಬಾಳಿದ ಬಗೆ, ನಂಬಿದ ಮೌಲ್ಯಗಳು, ಅನುಸರಿಸಿದ ಆಹಾರ–ವಿಹಾರಗಳು ನಮ್ಮ ಸಾಹಿತ್ಯ, ಕಲಾಪ್ರಕಾರಗಳಲ್ಲಿ ಅಚ್ಚಳಿಯದೆ ಪ್ರತಿಬಿಂಬಿಸಿವೆ. ಅಂದು ಕಲೆ, ಸಾಹಿತ್ಯ, ಸಂಸ್ಕೃತಿಯ ವರ್ಧನೆಗೆ ರಾಜರು ಆಶ್ರಯ ನೀಡಿದರು. ಈಗ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಆ ಹೊಣೆ ಹೊತ್ತಿದ್ದಾರೆ.

# ಮುದ್ರಾ ಮಂಜೂಷಾ: ಒಂದು ಸಮಗ್ರ ಅಧ್ಯಯನ

**ಲೇಖಕರು :**

**ಡಾ. ಕೆ.ಎಸ್.ಎನ್. ಉಡುಪ**

**ಪ್ರಾಂಶುಪಾಲರು ಪ್ರಥಮದರ್ಜೆ ಕಾಲೇಜು, ಕುಕ್ಕೆ ಸುಬ್ರಹ್ಮಣ್ಯ (ದ.ಕ)**

**– ಶಾರದಾ ಶಾಮಣ್ಣ, ಬೆಂಗಳೂರು**




ಸಾಹಿತ್ಯವು ಜನ ಜೀವನದ ಪ್ರತಿಬಿಂಬ. ಬರಹಗಾರನು ತನ್ನ ಕಾಲದ ಅಥವಾ ತನ್ನ ತಲೆಮಾರಿನ ಪ್ರತಿನಿಧಿ. ಅವನು ಆ ಕಾಲದ ಜನ ಜೀವನ, ರಾಜಕಾರಣ, ಸಾಮಾಜಿಕ ಬದುಕು, ಇವುಗಳನ್ನು ತನ್ನ ಬರಹದಲ್ಲಿ ಸೆರೆಹಿಡಿಯುತ್ತಾನೆ. ಆ ಕಾಲದ ಪರಿಸ್ಥಿತಿಯಲ್ಲಿ ಗೋಚರವಾಗುವುದೆಲ್ಲವು, ಮುಂದಿನ ಜನತೆಗೆ ಅಡಿಗಲ್ಲು.

ಪ್ರಸ್ತುತದ ಪುಸ್ತಕವಾದ ಮುದ್ರಾಮಂಜೂಷ. ಕೆಂಪು ನಾರಾಯಣ, ಕವಿಯ ರಚನೆಯಾಗಿದೆ. ಅದರ ಒಂದು ಸಮಗ್ರ ಅಧ್ಯಯನದ ಲೇಖಕರಾದ ಡಾ.ಕೆ.ಎಸ್.ಎನ್. ಉಡುಪರ, ಆಳವಾದ ಅಧ್ಯಯನ, ಶ್ರದ್ಧೆ, ಸಾಹಿತ್ಯ ಪ್ರೇಮ, ಇವುಗಳ ಮೊತ್ತವೇ ಈ ಪುಸ್ತಕವಾಗಿದೆ. ಶ್ರೀಯುತರು ಮಂಗಳೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಮಹಾ ಪ್ರಬಂಧವಿದು.

19ನೆಯ ಶತಮಾನವು ರಾಜಕೀಯವಾಗಿ ಕುದಿಯುತ್ತಿದ್ದ ಬಂಡಾಯದ ಕಾಲ. ದಕ್ಷಿಣ ಭಾರತದಲ್ಲಿ ಮರಾಠರೂ, ಇಂಗ್ಲೀಷರೂ, ತಮ್ಮ ತಮ್ಮ ಪ್ರಭುತ್ವಕ್ಕಾಗಿ ಹೊಡೆದಾಡುತ್ತಿದ್ದ ಕಾಲವದು.

ಇಂಗ್ಲೀಷರು ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ತಮ್ಮ ಒಡೆದು ಆಳುವ ನೀತಿಯಿಂದ ಎಲ್ಲರಲ್ಲೂ ಒಗ್ಗಟ್ಟನ್ನು ಹಾಳು ಮಾಡಿ ತಮ್ಮ ಕುತಂತ್ರದಿಂದ ವಿಜಯವನ್ನು ಸಾಧಿಸಿ ಅದರಿಂದ ತಮ್ಮ ಆಶ್ರಿತ ಅರಸರನ್ನು ಶೋಷಣೆ ಮಾಡಿದ ಸಂದರ್ಭವದು. ಆ ಕಾಲದಲ್ಲಿ ಅತಿಪ್ರಸ್ತುತವಾಗಿ ಬಂದ ಕೃತಿ ಈ ಮುದ್ರಾಮಂಜೂಷಾ.

ಮುದ್ರಾಮಂಜೂಷಾದ ಕಥೆ ಬಹು ವಿಸ್ತಾರವೂ, ಜನಪ್ರಿಯವೂ ಆದ ರಾಜಕೀಯ ಕಥೆ. ಇದು ಮಗಧದೇಶದ ಅದೃಷ್ಟವನ್ನು ಎಂದರೆ ನಂದರ ನಾಶವನ್ನೂ ಚಂದ್ರಗುಪ್ತನ ಅಭ್ಯುದಯವನ್ನೂ ಚಿತ್ರಿಸುವ ಕಥೆ. ಮುಖ್ಯ ಪ್ರಸಂಗದ ಮುಖ್ಯ ಪಾತ್ರಧಾರಿಗಳು ಚಾಣಕ್ಯ ಮತ್ತು ನಂದರ ಮಂತ್ರಿ ರಾಕ್ಷಸ. ಈ ಈರ್ವರು ಮಂತ್ರಿಗಳ ಬುದ್ಧಿಶಕ್ತಿಯ ಫಲವಾದ ತಂತ್ರ, ಪ್ರತಿತಂತ್ರಗಳನ್ನು ವಿವರಿಸುವ ಕಥೆ. ಈ ಕಥೆಯೇ ಹದಿನೆಂಟು ಆಶಯಗಳಲ್ಲಿ ಸುಮಾರು 300, ವಾಲೆಗರಿಯ ಹಾಳೆಗಳ ಹಂದರದಲ್ಲಿ ಹಬ್ಬಿದೆ. ಕೆಂಪುನಾರಾಯಣರ ಶೈಲಿಯು ಪಂಡಿತರ ಗದ್ಯ ಶೈಲಿಯಲ್ಲಿರದೆ ಕಥನಕ್ಕೆ ಸೂಕ್ತವಾದ ಸರಳ ಹಾಗೂ ನೇರವಾದ ಮಾರ್ಗವನ್ನು ಅನುಸರಿಸಿ, ಹಳಗನ್ನಡ, ಹೊಸಗನ್ನಡ, ವ್ಯಾಕರಣ ರೂಪಗಳ ಮಿಶ್ರಣವಾಗಿದೆ. ಹಿಂದಿನ ಕಾಲದ ಕಾವ್ಯ ಪದ್ಧತಿಯಂತೆ ಆಶ್ರಯದಾತ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರನ್ನು ಅಂದಿನ ಚಂದ್ರಗುಪ್ತನೊಡನೆ ಸಮೀಕರಿಸಲಾಗಿದೆ. ಕೃತಿಯ ನಡುನಡುವೆ ಬಂದಿರುವ ಸ್ಥಳ ನಾಮಗಳು, ಅರಮನೆಯ ಸಂಪ್ರದಾಯ, ಆಚರಣೆಗಳು ಎಲ್ಲವೂ ಮೈಸೂರು ಅರಮನೆಯದೇ ಆಗಿದೆ. ಇದು ಸಹಜವೂ ಅಲ್ಲವೇ?

ಮಂಜೂಷಾ ಎಂದರೆ ಪುಟ್ಟ ಕೈ ಪೆಟ್ಟಿಗೆ. ಮುದ್ರಾ ಮಂಜೂಷಾ ಎಂದರೆ ಮೊಹರು ಮಾಡಿದ ಅಥವಾ ಬೀಗ ಹಾಕಿದ ಮುದ್ರೆಯೊತ್ತಿದ ಪೆಟ್ಟಿಗೆ ಎಂಬ ಅರ್ಥಬರುತ್ತದೆ. ಅಮೂಲ್ಯವಾದ ವಸ್ತುಗಳನ್ನು ಇದರಲ್ಲಿಟ್ಟು ಮುಚ್ಚಿ ಮೊಹರು ಮಾಡಿ ಬೇಕಾದ ಕಡೆಗೆ ಒಯ್ಯಬಹುದು. ಭದ್ರತೆಯ ಮತ್ತೊಂದು ಹೆಸರೇ ಮಂಜೂಷಾ.

ರಾಜಮಹಾರಾಜರು ತಮ್ಮ ಸಂಚಾರಯಾತ್ರೆಯಲ್ಲಿ ತಮ್ಮ ಮುದ್ರೆಯುಂಗುರ, ರಾಜಕಾರ್ಯದ ಮೊಹರು, ತಮ್ಮಲಾಂಛನ, ಈ ಮಂಜೂಷಾದಲ್ಲಿಟ್ಟುಕೊಂಡು ತಮ್ಮ ರಾಜ್ಯದಲ್ಲಿ ಸಂಚರಿಸುತ್ತಾ ಪ್ರಜೆಗಳ ಕಷ್ಟಸುಖಗಳನ್ನು ವಿಚಾರಿಸುತ್ತಾ ಸ್ಥಳದಲ್ಲಿಯೇ ದಾನ ಪತ್ರಗಳು, ರಹದಾರಿ ಪತ್ರಗಳು, ಜುಲ್ಮಾನೆ, ಮುಂತಾದವುಗಳಿಗೆ ಸಹಿಹಾಕಿ ಮೊಹರು ಒತ್ತುತ್ತಿದ್ದರು. ಇದರಿಂದ ಕ್ಷಿಪ್ರ ಕಾರ್ಯಾಚರಣೆ ನಡೆದಂತಾಗುತ್ತಿದ್ದಿತು. ನಂತರ ಈ ಪೆಟ್ಟಿಗೆಗೆ ಬೀಗ ಹಾಕಿ ಮುಖ್ಯಾಧಿಕಾರಿಯ ಸುಪರ್ದಿಗೆ ಕೊಡುತ್ತಿದ್ದರು.

ಕೆಂಪು ನಾರಾಯಣರ ಕೃತಿ ಮುದ್ರಾಮಂಜೂಷಾದ ಕಡೆ ನೋಡೋಣ. ಇದೊಂದು ಅಪೂರ್ವಕೃತಿ. ವಿದ್ವತ್ತಿನ ಕೀಲಿಕೈಯಿಂದ ಆ ಪೆಟ್ಟಿಗೆಯ ಮುಚ್ಚಳ ತೆಗೆದು ಅದರಲ್ಲಿರುವ ಸಾಹಿತ್ಯ ಭಾಂಡಾಗಾರದ ರುಚಿ ಸವಿಯಲಿ ಎಂಬುದೇ ಕವಿಯ ಆಶಯ. ಈ ನಿಟ್ಟಿನಲ್ಲಿ ಮಂಜೂಷಾ ಎಂಬ ಹೆಸರು ಅನ್ವರ್ಥವಾಗಿದೆ.

ಮುದ್ರಾರಾಕ್ಷಸ; ಒಂದು ಸಮಗ್ರ ಅಧ್ಯಯನದ ಕೃತಿಕಾರರಾದ ಡಾ. ಎಸ್.ಎನ್. ಉಡುಪರ ಬಗ್ಗೆ ಹೇಳುವಾದರೆ ಅವರ ಈ ಕೃತಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯವೂ, ಸಂಶೋಧನೆಯ

ಮೂಲಭೂತತತ್ವವನ್ನು ಅಳವಡಿಸಿಕೊಂಡ ಒಂದು ಕೆಂಪು ರತ್ನವೇ ಆಗಿದೆ. ಒಂದು ಕೃತಿಯನ್ನು ಎಷ್ಟು ಆಳವಾಗಿ, ತಲಸ್ಪರ್ಶಿಯಾಗಿ, ವ್ಯಾಪಕವಾಗಿ, ವಸ್ತುನಿಷ್ಠವಾಗಿ ಮಾಡಬಹುದೆಂಬುದಕ್ಕೆ ಒಂದು ಸಮರ್ಪಕವಾದ, ಪೂರ್ಣವಾದ ಉದಾಹರಣೆಯಾಗಿದೆ. ವಿಷಯಾಂತರಾಳಕ್ಕೆ ಹೋಗಿ, ನೈಜತೆಯನ್ನು ಕಾಪಾಡಿಕೊಂಡು ಒಂದಿದ್ದಾರೆ ಉಡುಪರು. ಅತಿಶಯೋಕ್ತಿ, ಅನೌಚಿತ್ಯ ವಿವರಣೆ, ಸಂಧಿಗ್ಧತೆಗಳುಂಟಾಗದಂತೆ ಎಚ್ಚರವಹಿಸಿದ್ದಾರೆ.

ಮುಖಪುಟದ ಚಿತ್ರವು ಅರ್ಥಪೂರ್ಣವಾಗಿದೆ. ಮೈಸೂರು ಅರಮನೆ ವಿದ್ವಾಂಸರ ಆಶ್ರಯ ಸ್ಥಾನದ ಗುರುತು, ಆಗಿನ ಕಾಲದ ಲೇಖನ ಸಾಮಗ್ರಿಗಳಾದ ಶಾಯಿಕುಡಿಕೆ, ಹಕ್ಕಿಯ ಗರಿಯ ಕಂಠ ಲೇಖನಿ ಕೆಂಪುನಾರಾಯಣರ ಚಿತ್ರ ಎಲ್ಲವೂ ಒಂದಕ್ಕೊಂದು ಪೂರಕವಾಗಿ ಬಂದು ಉಡುಪರ ಕಲ್ಪನಾ ಶಕ್ತಿಗೆ ಮೇರು ಸಾಕ್ಷಿಯಾಗಿ ಕಂಗೊಳಿಸುತ್ತಿದೆ.

**[ಮುದ್ರಾಮಂಜೂಷ ಒಂದು ಸಮಗ್ರ ಅಧ್ಯಯನ : ಕನ್ನಡದಲ್ಲಿ ಪಿ.ಎಚ್.ಡಿ. ಮಹಾಪ್ರಬಂಧ ಬರೆದವರು : ಡಾ. ಕೆ. ಶಂಕರನಾರಾಯಣ ಉಡುಪ ಯಾನೆ ಕೆ.ಎಸ್.ಎನ್. ಉಡುಪ (1952) ಪ್ರಕಾಶಕರು : ಸುದರ್ಶನ ಪ್ರಕಾಶನ, ಸದಾನಂದ ಆಸ್ಪತ್ರೆ ರಸ್ತೆ, ಅಂಚೆ: ಸುಬ್ರಹ್ಮಣ್ಯ – 574238 ಸುಳ್ಯ ತಾಲ್ಲೂಕು ದಕ್ಷಿಣಕನ್ನಡ ಜಿಲ್ಲೆ ದೂರವಾಣಿ – 08257–281201 ಪುಸ್ತಕದ ಬೆಲೆ : 195 ರೂಗಳು]**

# ಶ್ರೀ ಮೋಹನ ಧಾವಸ್ಕರ್ ನಿಧನ



**ಬೆಂಗಳೂರು** : ಬೆಳಕು ಶಿಶುನಿವಾಸ, ಬೆಳಕು ವೃದ್ಧಾಶ್ರಮ, ಬೆಳಕು ವಿದ್ಯಾಸಂಸ್ಥೆಗಳ ಸಂಸ್ಥಾಪಕರಾಗಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಪ್ರಭಾವಿ ಸೇವಾ ಚಟುವಟಿಕೆಗಳಿಗೆ ಸ್ಫೂರ್ತಿಯಾಗಿದ್ದ ಶ್ರೀ ಮೋಹನ್ ಧಾವಸ್ಕರ್‌ರವರು 11.02.2013ರಂದು ದೈವಾಧೀನರಾದರು.

ತಮ್ಮ 65 ವರ್ಷಗಳ ಜೀವನದಲ್ಲಿ ಶ್ರೀ ಮೋಹನರವರು ಹಲವು ದಶಕಗಳ ಕಾಲ ಸಾಮಾಜಿಕ ಕ್ಷೇತ್ರದ ಸೇವಾ ಕಾರ್ಯಗಳಲ್ಲಿ ಗುರುತಿಸಿಕೊಂಡಿದ್ದರು. ಸಾಗರದಲ್ಲಿ ಶಿಕ್ಷಣವನ್ನು ಪೂರೈಸಿ ಸ್ನಾತಕೋತ್ತರ ಪದವಿಯನ್ನೂ ಪೂರ್ಣಗೊಳಿಸಿದರು. ಸಾಹಿತ್ಯಿಕ ಒಲವಿನ ಧಾವಸ್ಕರವರ ಹಲವು ಕಾದಂಬರಿ, ಕಥೆ, ಕವನಗಳ ಸಂಕಲನಗಳು ಬೆಳಕು ಕಂಡಿವೆ. ಸಾಹಿತಿ ಹಾ.ಮಾ.ನಾ ರವರು ತಮ್ಮ ವಿಮರ್ಶಾ ಲೇಖನದಲ್ಲಿ ಅವರ ಕಾದಂಬರಿಯನ್ನು ಉಲ್ಲೇಖಿಸಿದ್ದರು.

ಬೆಂಗಳೂರು ನಗರದ ಸಂಘಟನಾ ಕಾರ್ಯದರ್ಶಿಯಾಗಿ 77 ರಿಂದ 81 ರವರೆಗೆ ಪ್ರಾರಂಭಿಕ ವರ್ಷಗಳಲ್ಲಿ ಅದರ ಪೂರ್ಣಾವಧಿ ಕಾರ್ಯಕರ್ತರೂ ಪರೀಕ್ಷೆಗಳ ಪ್ರಾಂತ ಸಹ ಸಂಯೋಜಕರೂ ಆಗಿ ಅವರು ಸೇವೆಸಲ್ಲಿಸಿದ್ದರು. ಅವರ ಸದ್ಗತಿಗಾಗಿ ಭಗವಂತನಲ್ಲಿ ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸುತ್ತೇವೆ.

# "ಹಿಂದೂ ದೇವಾಲಯಗಳಿಗೆ ತಿರುಪತಿ ತಿರುಮಲ ದೇವಸ್ಥಾನದ ಕೊಡುಗೆ"



**ಟಿ.ವಿ. ನಟರಾಜ್ ಪಂಡಿತ್,**
ಸಂಚಾಲಕರು, ಹಾಸನ ಜಿಲ್ಲಾ ಐತಿಹಾಸಿಕ
ಸ್ಮಾರಕಗಳ ಸಂರಕ್ಷಣಾ ವೇದಿಕೆ
ಮೊಬೈಲ್ ನಂ. 9964536150

ನಮ್ಮ ಪಟ್ಟಣ ಪ್ರದೇಶಗಳಿರಬಹುದು ಅಥವಾ ಗ್ರಾಮಾಂತರ ಪ್ರದೇಶದಲ್ಲಿರಬಹುದು, ಅಲ್ಲೆಲ್ಲಾ ಐತಿಹಾಸಿಕ ಶಿಲ್ಪಕಲಾ ಸಂಪತ್ತಿನ ಅನೇಕ ದೇವಾಲಯಗಳಿವೆ. ಇವುಗಳಲ್ಲಿ ನಗರ ಪ್ರದೇಶದಲ್ಲಿನ ಮುಜರಾಯಿ ದೇವಾಲಯಗಳಿಗೆ ಹೆಚ್ಚಿನ ಸಂಖ್ಯೆಯ ಭಕ್ತರು ಬರುವ ಕಾರಣ ಆರ್ಥಿಕವಾಗಿ ಅವು ಸಬಲವಾಗಿದ್ದು, ಅಲ್ಲಿ ಆಗಮೋಕ್ತವಾಗಿ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳು, ರಥೋತ್ಸವಗಳು ಯಥಾವತ್ತಾಗಿ ನಡೆಯುತ್ತಿರುತ್ತದೆ.

ಆದರೆ ಗ್ರಾಮಾಂತರ ಪ್ರದೇಶದಲ್ಲಿನ ದೇವಾಲಯಗಳು ದೀರ್ಘವಾದ ಐತಿಹಾಸಿಕ ಹಿನ್ನಲೆಯನ್ನು ಹೊಂದಿದ್ದರೂ ಅವುಗಳ ಆರ್ಥಿಕ ಪರಿಸ್ಥಿತಿಯು ದುರ್ಬಲವಾಗಿದ್ದು, ಹೆಚ್ಚಿನ ಸಂದರ್ಭಗಳಲ್ಲಿ ದೇವಾಲಯಗಳಲ್ಲಿ ನಿತ್ಯ ಪೂಜೆಯ ನಿರ್ವಹಣೆಯೇ ಕಠಿಣವಾಗಿರುತ್ತದೆ.

ಈ ಅಂಶಗಳನ್ನು ಗಮನಿಸಿ ತಿರುಮಲ ತಿರುಪತಿ ದೇವಸ್ಥಾನ (ಟಿ.ಟಿ.ಡಿ.) ತಿರುಪತಿಯವರು ಭಾರತದಲ್ಲಿನ ಯಾವುದೇ ರಾಜ್ಯದ/ಯಾವುದೇ ಜಿಲ್ಲೆ/ ತಾಲ್ಲೂಕು ಮುಜರಾಯಿ ದೇವಾಲಯಗಳಲ್ಲಿ ವಿಧಿವತ್ತಾದ ಪೂಜೆಗೆ ಅಲಂಕಾರ ಪೂಜೆಗೆ ರಥೋತ್ಸವ ಮತ್ತು ವಿಶೇಷ **ಸಂದರ್ಭಗಳಲ್ಲಿ ದೇವರ ಸೇವೆಗೆ ಕೊಡೆಗಳೇ (ಛತ್ರಿಗಳು) ಮುಂತಾದವುಗಳನ್ನು ಶೇ. 50ಕ್ಕೂ ಹೆಚ್ಚಿನ ರಿಯಾಯಿತಿ ದರದಲ್ಲಿ ಒದಗಿಸುವ ಮಹತ್ತರ ಯೋಜನೆಯನ್ನು ಹೊಂದಿರುವರು.**

ಈ ಯೋಜನೆಯ ಅವಕಾಶವನ್ನು ಬಳಸಿಕೊಂಡು ಕರ್ನಾಟಕದ ಅನೇಕ ದೇವಾಲಯಗಳ ರಥೋತ್ಸವ, ಪೂಜಾದಿಗಳು ವಿಜೃಂಭಣೆಯಿಂದ ನಡೆಯುತ್ತಿವೆ.

ಟಿ.ಟಿ.ಡಿ. ಯವರ ಈ ಮಹತ್ತರವಾದ ದೇವತಾ ಕಾರ್ಯದ ಯೋಜನೆ ಸೌಲಭ್ಯವನ್ನು ಎಲ್ಲಾ ಅವಶ್ಯಕ ದೇವಾಲಯಗಳು ಹೊಂದುವಂತಾಗಲಿ ಎಂಬುದೇ ಈ ಲೇಖನದ ಸದಾಶಯ.

ರಿಯಾಯಿತಿ ದರದಲ್ಲಿ ತಿರುಮಲ ತಿರುಪತಿ ದೇವಾಲಯದಿಂದ ಗ್ರಾಮೀಣ/ಪಟ್ಟಣ ಪ್ರದೇಶದ ಮುಜರಾಯಿ ಇಲಾಖೆಯ ಆಡಳಿತಕ್ಕೊಳಪಟ್ಟ ದೇವಾಲಯಗಳಿಗೆ, ದೇವಾಲಯದ ಕಾರ್ಯಕ್ರಮಗಳಿಗೆ ದೊರೆಯುವ ದೇವಾಲಯಗಳ ವಸ್ತುಗಳ ವಿವರ ಈ ರೀತಿ ಇದೆ.

ಈ ಕೆಳಗೆ ಸೂಚಿಸಲ್ಪಡುವ ವಸ್ತುಗಳನ್ನು ಟಿ.ಟಿ.ಡಿ. ಯವರಿಂದ ಪಡೆಯಲು ಪ್ರಸ್ತಾವಿತ ಮೊತ್ತವನ್ನು ಆಯಾ ದೇವಾಲಯದ ನಿಧಿಯಿಂದ ದಾನಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು ಟಿ.ಟಿ.ಡಿ. ತಿರುಪತಿ ಹೆಸರಿಗೆ ಕಟ್ಟಬೇಕು. ದೇವಾಲಯದ ಸಮಿತಿಯ ಕೋರಿಕೆ ಪತ್ರವನ್ನು ಆಯಾ ತಾಲ್ಲೂಕಿನ ಸಂಬಂಧಿಸಿದ ತಹಸೀಲ್ದಾರ್‌ರವರಿಗೆ ಸಲ್ಲಿಸಿ ತದನಂತರ ಮುಜರಾಯಿ ಅಸಿಸ್ಟೆಂಟ್ ಕಮೀಷನರ್‌ರವರಿಂದ; ಕಾರ್ಯ ನಿರ್ವಾಹಕ ಅಧಿಕಾರಿಗಳು ಟಿ.ಟಿ.ಡಿ. ಯವರಿಗೆ ಶಿಫಾರಸ್ಸು ಆಗಬೇಕಾಗಿರುತ್ತದೆ. (ಈ ರೀತಿಯ ಶಿಫಾರಸ್ಸು ಪತ್ರವು ಅಸಿಸ್ಟೆಂಟ್ ಕಮೀಷನರ್‌ರವರೇ ಅಲ್ಲದೆ ಟಿ.ಟಿ.ಡಿ. ಬೋರ್ಡ್ ಸದಸ್ಯರು ಸಹ ಶಿಫಾರಸ್ಸನ್ನು ಮಾಡಬಹುದಾಗಿರುತ್ತದೆ.)

1. **ಮೈಕ್ ಸೆಟ್ (ಆಂಪ್ಲಿಫಯರ್ ಸಹಿತ) :** ಸಾಮಾನ್ಯ ವರ್ಗದ ದೇವಾಲಯಗಳು ರೂ. 5843/– ಪರಿಶಿಷ್ಟ ಜಾತಿ/ ವರ್ಗದ ವಸತಿ ಪ್ರದೇಶದ ದೇವಾಲಯಗಳಿಗೆ ರೂ. 1168/– (90% ಸಬ್ಸಿಡಿ ದರದಲ್ಲಿ)

2. **ಶ್ವೇತ ಛತ್ರಿಗಳು :** 6 ಮೂಲೆಯಿರುವ (ಎರಡು ಛತ್ರಿಗಳು) ಶೇ. 50 ರಿಯಾಯಿತಿ ದರದಲ್ಲಿ ರೂ. 4375/–

3. **ಶೇಷ ವಸ್ತ್ರಮ್ :** ಉಚಿತವಾಗಿ ಎಲ್ಲಾ ದೇವಾಲಯಗಳಿಗೆ ಕೊಡುತ್ತಾರೆ.

4. **ಕಲ್ಲಿನ ವಿಗ್ರಹಗಳು :** (ಎಲ್ಲಾ ದೇವರ ವಿಗ್ರಹಗಳೂ ಹೊಸದಾಗಿ ಕಟ್ಟಿರುವ ದೇವಾಲಯಗಳು / ಹಳೆಯ ದೇವಾಲಯಗಳಲ್ಲಿ ಹೊಸದಾಗಿ ಹೆಚ್ಚುವರಿಯಾಗಿ ಯಾವುದಾದರೂ ವಿಗ್ರಹ ಪ್ರತಿಷ್ಠಾಪಿಸಲು, ಉದ್ದೇಶಿಸಿದಲ್ಲಿ ದೇವಾಲಯದ ನಕ್ಷೆ ಅಂದಾಜು ಪಟ್ಟಿ, ದೇವಾಲಯದ ಫೋಟೋದೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕು. ಶೇ. 75ರಿಯಾಯಿತಿ ದರದಲ್ಲಿ ವಿಗ್ರಹಗಳನ್ನು ಕೊಡುತ್ತಾರೆ.

5. ಇದೇ ರೀತಿಯಾಗಿ ಪರಿಶಿಷ್ಟ ಜಾತಿ/ಜನಾಂಗದವರ ಕಾಲೋನಿ, ಬೆಸ್ತರ ವಸತಿ ಪ್ರದೇಶಗಳಿಗೆ ಹೊಸ ದೇವಾಲಯಗಳು ನಿರ್ಮಾಣವಾಗಿದ್ದಲ್ಲಿ ವಿಗ್ರಹಗಳನ್ನು ಉಚಿತವಾಗಿ ಕೊಡುತ್ತಾರೆ.

6. ಇದೇ ರೀತಿಯಾಗಿ ಕಲ್ಲಿನ ವಿಗ್ರಹಗಳನ್ನು ವಿದ್ಯಾ ಸಂಸ್ಥೆಗಳು/ ಆಶ್ರಮಗಳು, ಮಠಗಳಿಗೆ ಶೇ. 50 ರಿಯಾಯಿತಿ ದರದಲ್ಲಿ ಕೊಡುತ್ತಾರೆ. ಈ ಸಂಬಂಧದ ದೇವಾಲಯದ ಕಮಿಟಿಯ ಅರ್ಜಿಯು ಆಯಾ ಜಿಲ್ಲೆಯ ಜಿಲ್ಲಾ ವಿದ್ಯಾಧಿಕಾರಿಗಳಿಂದ/ಮಠದ/ಆಶ್ರಮದ ಮುಖ್ಯಸ್ಥರಿಂದ ದೃಢೀಕರಣ ಮತ್ತು ಶಿಫಾರಸ್ಸಾಗಿರಬೇಕು.

7. **ಪಂಚಲೋಹದ ವಿಗ್ರಹಗಳು :** ಪಂಚಲೋಹದ ವಿಗ್ರಹಗಳ ಸಲುವಾದ ಅರ್ಜಿಯು

ದೇವಾಲಯದ ನಕ್ಷೆ, ಫೋಟೋ ಸಹಿತವಾದ ಅರ್ಜಿಯು ಅಸಿಸ್ಟೆಂಟ್ ಕಮೀಷನರ್ (ಮುಜರಾಯಿ) ರವರಿಂದ ಶಿಫಾರಸ್ಸಾಗಿರುವ ಪ್ರಕರಣಗಳಲ್ಲಿ ಶೇ. 75 ರಿಯಾಯಿತಿ ದರದಲ್ಲಿ ನೀಡುತ್ತಾರೆ.

8. ಇದೇ ರೀತಿಯ ಪಂಚಲೋಹದ ವಿಗ್ರಹಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಜನಾಂಗದ ವಸತಿ ಪ್ರದೇಶದ ದೇವಾಲಯಗಳಿಗೆ ಶೇ.90 ರಿಯಾಯಿತಿ ದರದಲ್ಲಿ ದೇವಾಲಯದ ನಕ್ಷೆ ಮತ್ತು ಫೋಟೋ ಸಹಿತವಾದ ಅರ್ಜಿಯು ಆಯಾ ತಾಲ್ಲೂಕು ಮುಜರಾಯಿ ಅಸಿಸ್ಟೆಂಟ್ ಕಮೀಷನರ್ ರವರಿಂದ ಶಿಫಾರಸ್ಸಾಗಿರುವ ಪ್ರಕರಣಗಳಲ್ಲಿ ನೀಡುತ್ತಾರೆ.

ಟಿ.ಟಿ.ಡಿ. ಯವರೊಂದಿಗೆ ಸಂಪರ್ಕಿಸಲು ದೂರವಾಣಿ ಸಂಖ್ಯೆ : 0877–226276

## ಶ್ರೀ ಸತ್ಯನಾರಾಯಣ ಪೂಜೆ, ಹಾಗೂ ಮಹಾಪುರುಷ ಸ್ವಾಮೀಜಿಯವರ 30ನೇ ಆರಾಧನೋತ್ಸವ



**ಮಂಗಳೂರು** : ವಿಶ್ವ ಹಿಂದು ಪರಿಷತ್ – ಮಾತೃಮಂಡಳಿಗಳು ಮಂಗಳಾ ಗೃಹದಲ್ಲಿ ನಡೆಸುತ್ತಿರುವ 'ಮಹಾಪುರುಷ' ಬಾಲಸಂಸ್ಕಾರ ಕೇಂದ್ರದಲ್ಲಿ ಶ್ರೀಸತ್ಯನಾರಾಯಣ ಪೂಜೆಯ 30ನೇ ವಾರ್ಷಿಕೋತ್ಸವ ಹಾಗೂ ಮಹಾಪುರುಷ ಸ್ವಾಮೀಜಿ ಯವರ ಆರಾಧನೋತ್ಸವಗಳು ನಡೆದವು.

ಭಗವದ್ಗೀತಾ ಪಠನ, ಭಜನೆ, ತರುವಾಯ ಶ್ರೀರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮೀಜಿ ಯವರು ಆಶೀರ್ವಚನ ನೀಡುತ್ತಾ, ಶ್ರದ್ಧಾ ಭಕ್ತಿಯಿಂದ ಭಗವಂತನನ್ನು ಆರಾಧಿಸಿದರೆ ಅವನ ಅನುಗ್ರಹ ಪ್ರಾಪ್ತಿಯಾಗುತ್ತದೆ ಎಂದು ವಿವರಿಸಿದರು. ಸ್ವಾಮಿ ವಿವೇಕಾನಂದರ 150ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಮಕ್ಕಳಿಗೆ ವಿವೇಕಾನಂದರ ಪುಸ್ತಕ ವಿತರಣೆ ಮಾಡಿ ಆಶೀರ್ವದಿಸಿದರು. ಶ್ರೀರಮಾನಾಥ ಹೆಗಡೆ ಶ್ರೀಮಂಗಳಾ ದೇವಿ ಆಡಳಿತ ಮುಕ್ತೇಸರರು ಶುಭಹಾರೈಸಿದರು. ಶ್ರೀ ಮನೋಹರ ಸುವರ್ಣ ವಿ.ಹಿಂ. ಪರಿಷದ್ ಧರ್ಮಾಚಾರ್ಯ ಪ್ರಮುಖ್ ಶ್ರೀ ವಿಜಯ (ಬಜರಂಗದಳ ಬೋಳಾರ ಪ್ರಖಂಡ ಸಂಚಾಲಕರು) ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಪ್ರೇಮಲತಾ ಆಚಾರ್ (ವಿ.ಹಿಂ. ಪರಿಷತ್ – ಮಾತೃಮಂಡಳಿ ಸಂಚಾಲಕಿ) ಬಾಲಸಂಸ್ಕಾರ ಕೇಂದ್ರದ ಚಟುವಟಿಕೆ ಹಾಗೂ ಸ್ವಾಮಿ ಮಂಜುನಾಥ ಮಹಾ ಪುರುಷರ ಬಗ್ಗೆ ವಿವರಿಸಿ, ಸ್ವಾಗತ ಬಯಸಿದರು. ಶ್ರೀಸತ್ಯ ಕೃಷ್ಣ ಪುರೋಹಿತ್ ಬಾಳಂಬಟ್ರು ಪೂಜೆಯನ್ನು ನೆರವೇರಿಸಿದರು. ಕೊನೆಯಲ್ಲಿ ಮಂಗಳಾರತಿ, ಐಕ್ಯಮಂತ್ರದೊಂದಿಗೆ ಸಮಾರಂಭ ಮುಕ್ತಾಯವಾಯಿತು.

**– ಬಿ. ಪ್ರೇಮಲತಾ ಆಚಾರ್**

ದಿನಾಂಕ : 23.02.2013 ಶನಿವಾರ ಮತ್ತು 24.02.2013 ಭಾನುವಾರಗಳಂದು ವಿಶ್ವ ಹಿಂದು ಪರಿಷದ್ ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತೀಯ ಬೈಠಕ್‌ನ್ನು ಉಡುಪಿಯ ಗೋವಿಂದ ಕಲ್ಯಾಣ ಮಂಟಪ ಕಿನ್ನಿಮೂಲ್ಕಿಯಲ್ಲಿ ಆಯೋಜಿಸಲಾಗಿತ್ತು.

ಪೂರ್ವಭಾವಿಯಾಗಿ 23.02.2013 ಶನಿವಾರ ಬೆಳಿಗ್ಗೆ 10.00 ಘಂಟೆಗೆ ಪ್ರಾಂತೀಯ ಕಾರ್ಯಕಾರಿ ಮಂಡಳಿ ಬೈಠಕ್ ನಡೆಯಿತು. ಪ್ರಾಂತ ಮತ್ತು ವಿಭಾಗ ಪದಾಧಿಕಾರಿಗಳು, ಬಜರಂಗದಳ ಮತ್ತು ಮಾತೃಶಕ್ತಿ ಪ್ರಾಂತೀಯ ಪ್ರಮುಖರು, ವಿಭಾಗ ಪ್ರಮುಖರೂ, ಆಯಾಮ ಪ್ರಮುಖರೂ ಉಪಸ್ಥಿತರಿದ್ದರು.

# ಪ್ರಾಂತ ಬೈಠಕ್ ಸಂಕ್ಷಿಪ್ತ ವರದಿ

**ವಾಸುದೇವರಾಜು**

ಹಿತಚಿಂತಕ ಅಭಿಯಾನ ಅನುಭವದ ಹಿನ್ನೆಲೆಯಲ್ಲಿ ಸಂಘಟನೆಯ ವಿಸ್ತರಣೆಯ ಮತ್ತು ಪವಿತ್ರ ಕುಂಭಮೇಳದ ಸಂದರ್ಭದಲ್ಲಿ ಸೇರಿದ ಸಂತ ಸಮ್ಮೇಳನದಲ್ಲಿ ಕೈಗೊಂಡ ಮಹತ್ವದ ನಿರ್ಣಯಗಳನ್ನು ಕೇಂದ್ರದ ಸೂಚನೆಗಳನ್ನು ಅನುಸರಿಸಿ ಅನುಷ್ಠಾನ ಗೊಳಿಸುವ ಕುರಿತು ಕಾರ್ಯ ಯೋಜನೆಯನ್ನು ರೂಪಿಸುವ ಸಮಾಲೋಚನೆಯು ಅಲ್ಲಿ ನಡೆಯಿತು.

ಪ್ರಖಂಡ ಸಮಿತಿಗಳ ಸಂಪೂರ್ಣ ರಚನೆ, ಖಂಡ ಸಮಿತಿಗಳ ಕುರಿತು ಚಿಂತನೆ ಹಾಗೂ ಜಿಲ್ಲೆಗಳ ಪ್ರಗತಿಯ ವರದಿಗಳನ್ನು ಪರಾಮರ್ಶಿಸುವುದೇ ಮೊದಲಾದ ಸಲಹೆ ಸೂಚನೆಗಳನ್ನು ಪ್ರಾಂತ ಬೈಠಕ್‌ನಲ್ಲಿ ವಿಸ್ತ್ರತವಾಗಿ ಚರ್ಚಿಸಲು ನಿರ್ಧರಿಸಲಾಯಿತು.

ಸಂಜೆ ಪ್ರಾಂತ ಬೈಠಕ್ಕಿನ ವೇದಿಕೆಯಲ್ಲಿ ಪರಿಷದ್ ಉಪಾಧ್ಯಕ್ಷರಾದ ಹಾ. ರಾಮಪ್ಪ, ಪ್ರೊ. ಎಮ್.ಬಿ. ಪುರಾಣಿಕ್, ಶ್ರೀಮತಿ ವಾಸಂತಿ ಕಮ್ಮಾಜಿ ಸಂಘ ಚಾಲಕರಾದ ಮಾನ್ಯ ಶಂಭುಶೆಟ್ಟಿಯವರು, ಪ್ರಾಂತ ಕಾರ್ಯದರ್ಶಿ ಟಿ.ಎ.ಪಿ. ಶೆಣೈ, ರಾಜ್ಯ ಸಂಘಟನಾ ಕಾರ್ಯದರ್ಶಿ ಕೇಶವ ಹೆಗಡೆ, ಉಡುಪಿ ಜಿಲ್ಲಾ ಅಧ್ಯಕ್ಷರಾದ ಸುಪ್ರಸಾದ ಶೆಟ್ಟಿಯವರು ಇದ್ದರು.

ಪ್ರಾರ್ಥನೆಯೊಂದಿಗೆ ಬೈಠಕ್ ಪ್ರಾರಂಭವಾಯಿತು. ಉಡುಪಿ ಜಿಲ್ಲಾ ಅಧ್ಯಕ್ಷರಾದ ಸುಪ್ರಸಾದ ಶೆಟ್ಟಿಯವರು ಎಲ್ಲರನ್ನೂ ಸ್ವಾಗತಿಸಿದರು. ಕರ್ನಾಟಕದಲ್ಲಿ ಪರಿಷದ್ ಸಂಘಟನಾ ಕಾರ್ಯದರ್ಶಿಗಳಾದ ಕೇಶವ ಹೆಗಡೆಯವರು ದಿಕ್ಸೂಚಿ ಸಂದೇಶದಲ್ಲಿ ಪ್ರಯಾಗ ಮಹಾಕುಂಭದ ವಿಶೇಷತೆಯೊಂದಿಗೆ ಸಂತ ಸಮಾವೇಶದಲ್ಲಿ ಕೈಗೊಂಡ ಮಹತ್ವದ ನಿರ್ಣಯಗಳ ವಿವರಗಳನ್ನು ನೀಡಿದರು. ಹತ್ತು ಸಾವಿರ ಸಂತರು ನಿರ್ಣಯಿಸಿದ ಐದು ಮುಖ್ಯ ಠರಾವುಗಳನ್ನು ವಿಶ್ಲೇಷಿಸಿದರು.

1. ಶ್ರೀರಾಮನ ಭವ್ಯ ಮಂದಿರ ನಿರ್ಮಾಣಕ್ಕಾಗಿ ಸರಕಾರವು ಸ್ವಾಧೀನಪಡಿಸಿಕೊಂಡ ಭೂಮಿಯನ್ನು ರಾಮಜನ್ಮ ಭೂಮಿಯೊಂದಿಗೆ ಸಂಪೂರ್ಣವಾಗಿ ಪಡೆಯುವುದು.

2. ಗಂಗೆಯ ಪಾವಿತ್ರ್ಯಕ್ಕಾಗಿ ಗಂಗಾ ಶುದ್ಧೀಕರಣ ಹಾಗೂ ರಕ್ಷಣೆ 3. ಗೋವಂಶ ರಕ್ಷಣೆ

4. ಹಿಂದು ಭಾವನೆಗಳ ಅಲಕ್ಷ್ಯ ಮತ್ತು ಮುಸ್ಲಿಂ ತುಷ್ಟೀಕರಣದ ಅಂತ್ಯ
5. ಮಾತೃಶಕ್ತಿಯ ರಕ್ಷಣೆಗೆ ಕ್ರಮ.

ಇಡೀ ರಾಷ್ಟ್ರದ ಗೌರವ "ಶ್ರೀರಾಮ". ರಾಮನಾಮ ಆತ್ಮಶಕ್ತಿ ವರ್ಧಕ, ಸಂಕಷ್ಟ ವಿನಾಶಕ. ಜಯ ಪ್ರದಾಯಕವಾದದ್ದು. ಶ್ರೀ ವಿಜಯ ಸಂವತ್ಸರದ, ಚೈತ್ರ ಶುದ್ಧ ಪ್ರತಿಪದ್, ಚಾಂದ್ರಮಾನ ಯುಗಾದಿಯಂದು ಅಂದರೆ ದಿನಾಂಕ 11.04.2013 ರ ಗುರುವಾರ ರಾಮನವಮಿ ದಿನದಿಂದ ಜಪಾನುಷ್ಠಾನವನ್ನು ಪ್ರಾರಂಭಿಸುವುದು. ಪ್ರತಿದಿನ ಒಂದು ಮಾಲೆಗೆ 108 ರಂತೆ 13 ಮಾಲೆಗಳ "ಶ್ರೀರಾಮ ಜಯರಾಮ ಜಯ ಜಯರಾಮ" ಎಂಬ ವಿಜಯ ಮಹಾಮಂತ್ರವನ್ನು 33 ದಿನಗಳ ಕಾಲ ಜಪ ಮಾಡುವುದು. ವೈಶಾಖ ಶುದ್ಧ ತದಿಗೆ, ಅಕ್ಷಯ ತೃತೀಯ, ಸೋಮವಾರ ದಿನಾಂಕ 13.05.2013 ರಂದು ಸಾಮೂಹಿಕವಾಗಿ ಯಜ್ಞದಲ್ಲಿ ಭಾಗವಹಿಸಿ ಅನುಷ್ಠಾನವನ್ನು ಸಂಪನ್ನಗೊಳಿಸುವುದು. ಯುಗಾದಿಯಂದು ಕೈಗೆ ರಕ್ಷಾ ಸೂತ್ರ ಧರಿಸಿ ಮನೆಯ ಮೇಲೆ ಧ್ವಜ ಹಾರಿಸಬೇಕು. ಸಂಕಲ್ಪ ಮಾಡುವಾಗ 11 ರೂಪಾಯಿಗಳ ದಕ್ಷಿಣೆಯನ್ನು ಅರ್ಪಿಸಬೇಕು. ಈ ರೀತಿ ಕಾರ್ಯರೂಪಗೊಳಿಸಿ ಈ ಪವಿತ್ರ ಕಾರ್ಯದಲ್ಲಿ ನಾವೆಲ್ಲರೂ ಬಂಧು-ಮಿತ್ರರೊಡಗೂಡಿ ಶ್ರಮಿಸಲು ಕಂಕಣಬದ್ಧರಾಗೋಣ ಎಂದು ವಿನಂತಿಸಿದರು.

ಶ್ರೀಯುತ ಶಂಭುಶೆಟ್ಟಿಯವರು ಮಾತನಾಡಿ, ಉಡುಪಿಯಲ್ಲಿ 1969ರಲ್ಲಿ ಉಡುಪಿ ಶ್ರೀಕೃಷ್ಣನ ಸಾನಿಧ್ಯದಲ್ಲಿ ಜರುಗಿದ ಸಮ್ಮೇಳನದಲ್ಲಿ ಪರಮ ಪೂಜ್ಯ ಗುರೂಜಿಯವರು ಭಾಗವಹಿಸಿದ್ದರು. 1985ರಲ್ಲಿ ನಡೆದ ಧರ್ಮ ಸಂಸದ್ ಸಭೆಯಲ್ಲಿ 80 ಸಂತರು ಸಾನಿಧ್ಯವಹಿಸಿ, ಅಯೋಧ್ಯೆಯ ಕುರಿತು ಮಹತ್ವದ ವಿಷಯ ಕೈಗೊಂಡರು. ಪ್ರಸ್ತುತ ವಿವೇಕಾನಂದರ 150 ನೇ ವರ್ಷಾಚರಣೆ ನಡೆಯುತ್ತಿದ್ದು, ವಿಶ್ವ ಹಿಂದು ಪರಿಷದ್ ಸುವರ್ಣ ಜಯಂತಿ ಆಚರಿಸುತ್ತಿರುವ ಈ ಶುಭ ಅವಸರದಿಂದ ಪ್ರೇರಿತರಾಗಿ, ಹಿಂದುರಾಷ್ಟ್ರ, ಹಿಂದು ಸಂಸ್ಕೃತಿ, ಮಾನವೀಯ ಮೌಲ್ಯಗಳ ಸ್ಥಿರೀಕರಣಕ್ಕಾಗಿ ಎಲ್ಲರೂ ಕಟಿಬದ್ಧರಾಗಿರಬೇಕೆಂದು ಸಂದೇಶ ನೀಡಿದರು.

ಶ್ರೀಯುತ ಪ್ರೊ. ಎಂ.ಬಿ. ಪುರಾಣಿಕ್‌ರವರು ಮಾತನಾಡಿ ಮಧ್ವಾಚಾರ್ಯರ ಈ ಉಡುಪಿ ಕ್ಷೇತ್ರವು ಹಿಂದೂ ಜೀವನ ಮೌಲ್ಯಗಳ ಉತ್ಕರ್ಷೆಯ ಕೇಂದ್ರ ಬಿಂದು. ಸನಾತನ ಧರ್ಮ ನೆಲೆ ನಿಂತಿರುವುದು ಸಾಧು-ಸಂತರು, ಋಷಿ ಮುನಿಗಳಿಂದ ಯುವಕರು ದಾರಿ ತಪ್ಪಿ ಪಾಶ್ಚಾತ್ಯ ಸಂಸ್ಕೃತಿ, ಸಭ್ಯತೆ ಅಪ್ಪಿಕೊಳ್ಳುತ್ತಿದ್ದಾರೆ ಎಂಬ ಆಪಾದನೆಯನ್ನು ಸುಳ್ಳಾಗಿಸಲು ರಾಷ್ಟ್ರ ಪ್ರೇಮದ ಉದ್ದೀಪನೆ, ಸಾಂಸ್ಕೃತಿಕ ಮೌಲ್ಯಗಳತ್ತ ಮತ್ತು ಶ್ರದ್ಧೆಯ ಸೆಳೆತದೊಡಗೂಡಿ, ಈ ದಿಶೆಯಲ್ಲಿ ಹಿರಿಯರ ಮಾರ್ಗದರ್ಶನದ ಅವಶ್ಯಕತೆಯನ್ನು ತುಂಬಿ ಕೊಡುವಲ್ಲಿ ಎಲ್ಲರೂ ಪಾತ್ರ ವಹಿಸೋಣ ಎಂದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಗಣೇಶ ಕಿಣಿಯವರು ವಂದನಾರ್ಪಣೆ ಮಾಡಿದರು.

ನಂತರದ ಅವಧಿಯಲ್ಲಿ ವಿಭಾಗವಾರು ಬೈಠಕ್ ನಡೆಯಿತು. ಕಾರ್ಯದರ್ಶಿಗಳಾದ ಶ್ರೀ ಟಿ.ಎ.ಪಿ. ಶೆಣೈರವರು ಆಯಾ ಜಿಲ್ಲಾ ಪದಾಧಿಕಾರಿಗಳು ಶ್ರೀರಾಮ ಜಪಾನುಷ್ಠಾನ, ಹಿತಚಿಂತಕರ ಅಭಿಯಾನ, ಧರ್ಮರಕ್ಷಾನಿಧಿ, ರಾಮೋತ್ಸವ ಇವುಗಳ ಕುರಿತು ಕಾರ್ಯಯೋಜನೆಯ ರೂಪರೇಖೆ, ದಿನಾಂಕ ಮತ್ತು ಪರಿಷದ್ ಶಿಕ್ಷಾವರ್ಗಕ್ಕೆ ಬರುವ ಕಾರ್ಯಕರ್ತರ ಸಂಖ್ಯೆ ಇವುಗಳನ್ನು ಚರ್ಚಿಸಿ, ಸಿದ್ಧಪಡಿಸಿ, ಒದಗಿಸಿರುವ ಪ್ರಪತ್ರದಲ್ಲಿ ವರದಿ ನೀಡಬೇಕೆಂದು ವಿನಂತಿಸಿದರು.

ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾವಾರು ಪ್ರಗತಿಯ ವರದಿಗಳನ್ನು ಸಲ್ಲಿಸಿದರು. ಏಕಲ ವಿದ್ಯಾಲಯಗಳ ಮುಖ್ಯಸ್ಥರಾದ ಶ್ರೀಯುತ ಮಾದಪ್ಪನವರು ಏಕಲ ವಿದ್ಯಾಲಯಗಳಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ವಿವರಿಸಿದರು. ಕರ್ನಾಟಕ ದಕ್ಷಿಣ ಗ್ರಾಮಗಳಲ್ಲಿ ಒಟ್ಟು 810 ವಿದ್ಯಾಲಯಗಳಿದ್ದು ಪಂಚಮುಖಿ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಸಂಪರ್ಕ ಪ್ರಮುಖರೂ ಗೋ ಸೇವಾ ಆಯೋಗದ ಸದಸ್ಯರೂ ಆಗಿರುವ ಶ್ರೀಯುತ ಮಂಜುನಾಥ ಸ್ವಾಮಿಯವರು ಕರ್ನಾಟಕವನ್ನು ಗೋವಂಶ-ಜಾನುವಾರು ಹತ್ಯೆ ಮುಕ್ತ ರಾಜ್ಯವನ್ನಾಗಿ ಮಾಡಲು ಈವರೆವಿಗೂ ಕೈಗೊಂಡು ಕ್ರಮಗಳನ್ನು ವಿವರಿಸಿದರು. ಸರ್ಕಾರದಿಂದ ಸಂಪೂರ್ಣ ಗೋವಂಶ ಹತ್ಯೆ ನಿಷೇಧ ಕಾನೂನು ತಿದ್ದುಪಡಿ ಮಸೂದೆ ಅಂಗೀಕಾರ ಪಡೆದರೂ ರಾಜ್ಯಪಾಲರ ಅಂಕಿತವಾಗಿಲ್ಲದ ಎಲ್ಲ ಹಂತಗಳ ವಿವರಗಳನ್ನು ಒದಗಿಸಿದರು. ಇದಕ್ಕಾಗಿ ದಿನಾಂಕ 16.03.2013ರಂದು 'ಬೃಹತ್ ಗೋವಂಶ ರಕ್ಷಾ ರ್‍ಯಾಲಿ – ರಾಜ ಭವನ್ ಚಲೋ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಪ್ರಾಂತ ಕಾರ್ಯಕಾರಿಣಿ ಸದಸ್ಯರು, ಬೆಂಗಳೂರು ಗ್ರಾಮಾಂತರ ಹೊಸಕೋಟೆಯಲ್ಲಿನ ಸ್ವಾಮಿ ವಿವೇಕಾನಂದ ಕೇಂದ್ರದ ಕಾರ್ಯದರ್ಶಿಗಳಾದ ಶ್ರೀಯುತ ನಾಗರಾಜ ಗುಪ್ತರವರು 1985ರಲ್ಲಿ ಕೇವಲ 8 ಜನ ಮಕ್ಕಳಿಂದ ಪ್ರಾರಂಭವಾದ ಶಾಲೆ ಇಂದು 1600 ವಿದ್ಯಾರ್ಥಿಗಳಿಂದ ತುಂಬಿ, ಸಾಮಾಜಿಕ ಸ್ವಾವಲಂಬನೆ ಮತ್ತು ಸಾಂಸ್ಕೃತಿಕ ಶಿಕ್ಷಣ. ಸಾಹಿತ್ಯ, ಬೌದ್ಧಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುತ್ತ, ನೂರಕ್ಕೆ ನೂರು ಫಲಿತಾಂಶ ಪಡೆದು ಸರ್ಕಾರದ ಹೆಗ್ಗಳಿಕೆಯ ಪ್ರಶಂಸಾ ಪತ್ರ ಪಡೆದಿದೆ ಎಂದರು.

ಇದೇ ಸಂದರ್ಭದಲ್ಲಿ ಪರಿಷ್ಕರಿಸಿದ 'ಗಾನ ಸ್ತೋತ್ರಮಾಲ' ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು. ಸಂಜೆಯ ಸತ್ಸಂಗವು ಕರ್ನಾಟಕದ ಸತ್ಸಂಗ ಪ್ರಮುಖರಾದ ಶ್ರೀ ಬಸವರಾಜರವರ ಮಾರ್ಗದರ್ಶನದಲ್ಲಿ ನಡೆಯಿತು. ಅವರು ಕುಂಭಮೇಳದ ಪೌರಾಣಿಕ ಹಿನ್ನೆಲೆಯೊಂದಿಗೆ ಸಂತ ಸಮ್ಮೇಳನದ ಕುರಿತು ವಿವರಿಸಿದರು. ದಿನಾಂಕ 24.02.2013 ರಂದು ಬೆಳಿಗ್ಗೆ 9.00 ಗಂಟೆಗೆ ಪ್ರಾರ್ಥನೆಯೊಂದಿಗೆ ಬೈಠಕ್ ಪ್ರಾರಂಭವಾಯಿತು. ಶ್ರೀಯುತ ಕೇಶವ ಹೆಗಡೆಯವರು ಸರ್ಕಾರದ ವಶದಲ್ಲಿರುವ 70 ಎಕರೆ ಭೂಮಿಯನ್ನು ಸಂಪೂರ್ಣ ಪಡೆದರೆ ಸಂಸತ್ತಿನಲ್ಲಿ ಶಾಸನವಾದರೆ ಮಾತ್ರ ಭವ್ಯ ಮಂದಿರದ ನಿರ್ಮಾಣ ಸಾಧ್ಯ ಆ ಪ್ರಯುಕ್ತ ರಾಮಜಪಾನುಷ್ಠಾನ ಹಳ್ಳಿ-ಹಳ್ಳಿಗೂ ಮುಟ್ಟಿ, ಜನಜಾಗೃತಿ ಆಧ್ಯಾತ್ಮ ಶಕ್ತಿ ಸಂಚಲನೆಯಾಗಬೇಕೆಂದರು.

ಶ್ರೀ ಬಸವರಾಜ್‌ರವರು ಮಾತನಾಡಿ, ಹನುಮಾನ್ ಶಕ್ತಿ ಜಾಗರಣದಿಂದಾಗಿ ಸರ್ಕಾರದ ಷಡ್ಯಂತ್ರ ಫಲಿಸಲಿಲ್ಲ. ಈಗ ಜಿಲ್ಲಾ ಮಟ್ಟದಿಂದ, ತಾಲ್ಲೂಕು ಹೋಬಳಿ ಮಟ್ಟದಲ್ಲಿ ಪ್ರತಿ ಹಳ್ಳಿಗೂ ಸಂದೇಶ ಮುಟ್ಟಿಸಿ ಜಪಾನುಷ್ಠಾನದಲ್ಲಿ ತೊಡಗಲು ಸಲಹಾ ಸೂಚನೆಗಳನ್ನು ನೀಡಬೇಕೆಂದು ಸಭೆಯನ್ನು ಕೋರಿದರು. ಅನೇಕ ಸಲಹೆ ಸೂಚನೆಗಳು ಹೊರಹೊಮ್ಮಿದವು.

ನಂತರದ ಅವಧಿಯಲ್ಲಿ ಮುಂದಿನ ಕಾರ್ಯಯೋಜನೆಗೆ ದಿನಾಂಕಗಳನ್ನು ಗೊತ್ತುಪಡಿಸಲಾಯಿತು. ಆಯಾ ಜಿಲ್ಲೆಗಳಿಗೆ ನಿಗದಿಯಾದ ದಿನಾಂಕಗಳಂದು ಪ್ರವಾಸ ಕೈಗೊಳ್ಳುವ ಪ್ರಾಂತದ ಪದಾಧಿಕಾರಿಗಳನ್ನು ಹೆಸರಿಸಿದರು.

ಅಲ್ಲದೇ, (1) ಮಾರ್ಚ್ 10 ಅಥವಾ ಅದಕ್ಕೆ ಮುನ್ನ ಜಿಲ್ಲಾ ಬೈಠಕ್ ನಡೆಸುವುದು (2) ಮಾರ್ಚ್ 15ರ ಒಳಗೆ ಧರ್ಮರಕ್ಷಾನಿಧಿ ಪೂರ್ಣಗೊಳಿಸುವದು (3) ಶ್ರೀ ರಾಮನವಮಿ ಆಚರಣೆ (4) ಹಿತಚಿಂತಕರ ಅಭಿಯಾನದ ಲೆಕ್ಕಪತ್ರಗಳ ಮುಕ್ತಾಯಗೊಳಿಸುವುದು (5) ಮೇ 18ರಿಂದ 28ರವರೆಗೆ ಪರಿಷದ್ ಶಿಕ್ಷಾವರ್ಗ ಆಯೋಜಿಸುವುದು ಎಂಬುದಾಗಿ ನಿಶ್ಚಯಿಸಲಾಯಿತು.

ಮುಂದುವರಿದ ಅವಧಿಯಲ್ಲಿ ಜಿಲ್ಲಾ ಪದಾಧಿಕಾರಿಗಳು ಜಪಾನುಷ್ಠಾನಕ್ಕೆ ಸಂಬಂಧಿಸಿದಂತೆ ತಮ್ಮ-ತಮ್ಮ ಗುರಿಯನ್ನು ಮಂಡಿಸಿದರು. ಅನೇಕ ಕಾರ್ಯಕರ್ತರು, ಶ್ರೀ ಬಸವರಾಜ್‌ರವರ ಪ್ರಸ್ತಾವನೆಗೆ ಅನುಗುಣವಾಗಿ ತಮ್ಮ-ತಮ್ಮ ಸಮಯ ನೀಡುವ ಅವಧಿಗಳನ್ನು ತಿಳಿಸಿದರು. ಹಲವು ಕಾರ್ಯಕರ್ತರು ಜಪಾನುಷ್ಠಾನಕ್ಕೆ ಅಗತ್ಯವಿರುವ ಸಂಪನ್ಮೂಲಗಳನ್ನು ತಾವೇ ಕ್ರೋಢಿಕರಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು.

ಭೋಜನದ ವಿರಾಮದ ನಂತರ ಅಪರಾಹ್ನ 03.30 ಕ್ಕೆ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಗಂಜಾಂನ ಶ್ರೀ ಶಂಕರಮಠದ ಸ್ವಾಮೀಜಿ ಶ್ರೀ ಗಣೇಶ ಸ್ವರೂಪಾನಂದಜೀಯವರು ಸಾನಿಧ್ಯ ವಹಿಸಿದ್ದರು. ಮಂಡ್ಯದ ಸತ್ಸಂಗ ಪ್ರಮುಖರಾದ ಶ್ರೀ ಲಕ್ಷ್ಮಣಯ್ಯನವರ ಪ್ರಾರ್ಥನೆಯೊಂದಿಗೆ ಸಭೆ ಪ್ರಾರಂಭವಾಯಿತು. ಎರಡೂ ದಿನಗಳ ಕಾರ್ಯಕಲಾಪಗಳ ಸಂಕ್ಷಿಪ್ತ ಮಾಹಿತಿಗಳನ್ನು ಪುನರಾವಲೋಕನ ಮಾಡಲಾಯಿತು. ಶ್ರೀ ಟಿ.ಎ.ಪಿ. ಶೆಣ್ಯೈರವರು, ಬೆಂಗಳೂರು ಮಹಾನಗರ ವಿಭಾಗವನ್ನು ಆಡಳಿತಾತ್ಮಕ ಸುವಿಧಗಳಿಗಾಗಿ ಪ್ರತಿ ಐದು ಜಿಲ್ಲೆಗಳ ಉತ್ತರ ಮತ್ತು ದಕ್ಷಿಣ ವಿಭಾಗ ಎಂದು ರಚಿಸಲಾಗಿದೆ. ಎಂದು ಘೋಷಿಸಿದರು. ನಂತರ ಪ್ರಾಂತ ಉಪಾಧ್ಯಕ್ಷರಾದ ಶ್ರೀ ರಮೇಶ ಪರಾಂಡೆರವರು ಮತ್ತು ಶ್ರೀ ಅಟ್ಟಾವರ ರಾಮದಾಸರು ಕಾರ್ಯಭಾರಗಳ ಒತ್ತಡಗಳನ್ನು ಕಡಿಮೆ ಮಾಡಲು ಇಚ್ಛಿಸಿದ ಕಾರಣ ಪ್ರಸ್ತುತ ಹೊಂದಿರುವ ಉಪಾಧ್ಯಕ್ಷರ ಹೊಣೆಯಿಂದ ಅವರಿಗೆ ವಿನಾಯಿತಿಗೊಳಿಸಲಾಗಿದೆ ಎಂದು ಘೋಷಿಸಿದರು.

ಹಿಂದು ಮಹಿಳಾ ವೇದಿಕೆಯ ವಿಶ್ವಸ್ಥರಾದ ಶ್ರೀಮತಿ ರಮಾರತ್ನರವರು ಡಿಸೆಂಬರ್ 29 ಮತ್ತು 30ರಂದು ನಡೆದ ಅಂತಾರಾಷ್ಟ್ರೀಯ ಹಿಂದು ಮಹಿಳಾ ಸಮ್ಮೇಳನದ ಸದ್ದುದ್ದೇಶ, ಕೈಗೊಳ್ಳುತ್ತಿರುವ ಸೇವಾ ಕಾರ್ಯಗಳನ್ನು ವಿವರಿಸಿದರು. ಇಂದಿನ ಸಂಕೀರ್ಣ ಕಾಲಘಟ್ಟದಲ್ಲಿ ಮಹಿಳೆಯ ಮುಂದಿರುವ ಸವಾಲುಗಳು ಮತ್ತು ಎದುರಿಸಿ, ಪರಿಹಾರ ಕಂಡುಕೊಳ್ಳುವ ಮಾರ್ಗೋಪಾಯಗಳು ಯಾವುದು ಹೇಗೆ ಎಂಬ ಚಿಂತನ-ಮಂಥನಕ್ಕಾಗಿ ವಿದ್ಯಾವಂತರೇ ಇರುವ ಈ ಸಂಘಟನೆ ಶ್ರಮಿಸುತ್ತದೆ ಎಂದರು. ಲೋಕಾರ್ಪಣೆಗೊಂಡ 'ತೇಜಸ್' ಸ್ಮರಣ ಸಂಚಿಕೆಯ ಪರಿಚಯ ಮಾಡಿಕೊಟ್ಟು ಜಿಲ್ಲಾ ಪದಾಧಿಕಾರಿಗಳಿಗೆ ಹಂಚಿಕೆ ಮಾಡಿದರು.

ಶ್ರೀ ಟಿ.ಎ.ಪಿ. ಶೆಣ್ಯೈರವರು ಎರಡೂ ದಿನಗಳ ವಿವಿಧ ಅವಧಿಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಿದುದೇ ಅಲ್ಲದೆ, ಮುಕ್ತಾಯ ಸಮಾರಂಭದ ಮಾತುಗಳಲ್ಲಿ, ಇತಿಹಾಸದಲ್ಲಿ ಹಿಂದು ಪರಾಕ್ರಮದ ಪುಟಗಳನ್ನು ತಿರುವಿ ಹಾಕಿದರು. ವಿಜಯ ಮಹಾಮಂತ್ರ ಜಪಾನುಷ್ಠಾನಗೊಳಿಸಿ ಸಮಾಜದಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಆವಾಹನೆಗೊಳಿಸೋಣ. ಸಂತ ಮಹಾತ್ಮರ ನಿರೂಪವನ್ನು ಪಾಲಿಸೋಣ. ನಮ್ಮೆಲ್ಲರ ಶ್ರದ್ಧಾಭಕ್ತಿಯನ್ನು ಕ್ರೋಢೀಕರಿಸೋಣ. ಶ್ರೀರಾಮ ಜನ್ಮಭೂಮಿಯನ್ನು ಪಡದೇ ತೀರೋಣ, ಭವ್ಯ ಮಂದಿರ ನಿರ್ಮಾಣ ಮಾಡಿಯೇ ತೀರೋಣ ಎಂದು ಕರೆ ನೀಡಿದರು.

ಶ್ರೀ ಗಣೇಶ ಸ್ವರೂಪಾನಂದ ಸ್ವಾಮೀಜಿಗಳು ಆಶೀರ್ವಚನ ನೀಡುತ್ತಾ, ರಾಮ, ಕೃಷ್ಣರು, ಸಾಧುಸಂತರು ಈ ದಿವ್ಯ ಭೂಮಿಯನ್ನು ಕಾಪಾಡುತ್ತಾ ಬಂದಿದ್ದಾರೆ. ರಾಮಾಯಣ–ಮಹಾಭಾರತಗಳು ಕಾಪಾಡುತ್ತಿವೆ. ಹಿಂದುಗಳು ಎಂದೂ ಭಯೋತ್ಪಾದಕರಲ್ಲ. ಪ್ರೇಮದ ದಾರದಲ್ಲಿ ಪೋಣಿಸಿದ ಮಣಿಗಳು. ವಿಶ್ವಕ್ಕೆ ಪ್ರೇಮದ ಶಾಂತಿ ಸಂದೇಶ ಸಾರುವ ಶಾಂತಿ ದೂತರು ಎಂದರು.

ಶ್ರೀಯುತ ಎಂ.ಬಿ. ಪುರಾಣಿಕರು ಜಿಲ್ಲಾವಾರು ಬದಲಾದ ದಾಯಿತ್ವಗಳನ್ನು ಪದಾಧಿಕಾರಿಗಳ ಹೆಸರುಗಳನ್ನು ಘೋಷಿಸಿದರು.

ಎರಡು ದಿನಗಳ ಕಾರ್ಯಕ್ರಮದ ನಿರೂಪಣೆಯ ಹೊಣೆಯನ್ನು ಸಹ ಕಾರ್ಯದರ್ಶಿಗಳಾದ ಶ್ರೀ ಬಿ.ಇ. ಸುರೇಶ್‌ರವರು ವಹಿಸಿದ್ದರು. ಉಡುಪಿ ಜಿಲ್ಲಾಧ್ಯಕ್ಷರ ಆಭಾರ ಮನ್ನಣೆಯೊಂದಿಗೆ ಶಾಂತಿ ಮಂತ್ರದೊಂದಿಗೆ ಸಭೆ ಸಂಪನ್ನವಾಯಿತು.

**ಪ್ರಾಂತೀಯ ಬೈಠಕ್ಕಿನಲ್ಲಿ ಕಾರ್ಯಕರ್ತರ ನಿರ್ಧಾರದಂತೆ**

ಶ್ರೀರಾಮತಾರಕ ಮಂತ್ರ ಜಪಾನುಷ್ಠಾನ ಸಂಕಲ್ಪ ಕೈಗೊಳ್ಳುವ ಕುಟುಂಬಗಳು 165000
ಶ್ರೀರಾಮತಾರಕ ಮಂತ್ರ ಜಪಾನುಷ್ಠಾನದಲ್ಲಿ ಭಾಗವಹಿಸುವ ಗ್ರಾಮಗಳು 42700
ಏಕಲವಿದ್ಯಾಲಯ ಸಮಿತಿ ಸಂಪರ್ಕದಿಂದ ಪಾಲ್ಗೊಳ್ಳುವ ಕುಟುಂಬಗಳು 35000
ಪಾಲ್ಗೊಳ್ಳುವ ಗ್ರಾಮಗಳು : 1620

## ನೀವೆಷ್ಟು ಬುದ್ಧಿವಂತರು

– ಬಿ.ಇ. ಸೀತಾಲಕ್ಷ್ಮಿ
ಬೆಂಗಳೂರು

1. ಬುದ್ಧನ ಜನ್ಮಸ್ಥಳ 'ಲುಂಬಿನಿ' ಎಲ್ಲಿದೆ?
2. ಪಕ್ಷಿಗಳಲ್ಲಿ ಅತ್ಯಂತ ದೊಡ್ಡದು ಯಾವುದು?
3. ಕನ್ನಡದ ಮೊದಲ ರಾಷ್ಟ್ರಕವಿ ಯಾರು?
4. 'ತ್ರಿಲೋಕ ಸಂಚಾರಿ' ಎಂದು ಕರೆಸಿಕೊಂಡ ಮಹರ್ಷಿ ಯಾರು?
5. ಪೂರ್ವ ಹಾಗೂ ಪಶ್ಚಿಮ ಘಟ್ಟಗಳನ್ನು ಜೋಡಿಸುವ ಬೆಟ್ಟಗಳ ಶ್ರೇಣಿ ಯಾವುದು?
6. ಕರ್ನಾಟಕದಲ್ಲಿ ದೂರದರ್ಶನ ಕೇಂದ್ರ ಪ್ರಾರಂಭವಾಗಿದ್ದು ಎಲ್ಲಿ?
7. ಎಷ್ಟು ಬಣ್ಣಗಳು ಸೇರಿದರೆ ಬಿಳಿಯ ಬಣ್ಣವಾಗುತ್ತದೆ?
8. ಚಂದ್ರನ ಮೇಲೆ ಪ್ರಪ್ರಥಮವಾಗಿ ಇಳಿಸಿದ ನೌಕೆ ಯಾವುದು?
9. ಭಾರತದಲ್ಲಿ 'ಹೋಂ ರೂಲ್' ಚಳುವಳಿಯನ್ನು ಪ್ರಾರಂಭಿಸಿದವರು ಯಾರು?
10. 2012ರ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಶೂಟಿಂಗ್ ಸ್ಪರ್ಧೆಯಲ್ಲಿ ರಜತಪದಕ ಗಳಿಸಿಕೊಟ್ಟವರು ಯಾರು?

**(ಉತ್ತರ ಪುಟ 11 )**

# ಎಲ್ಲ ಖಳನಾಯಕರಿಗೆ ಅನುಕೂಲವಾಗುವ ಇಟಲಿ ಪ್ರಹಸನ

– ಪ್ರಮೋದ ವಲ್ಸಂಗಕಾರ್
ಹೈದರಾಬಾದ್

“ಭಾರತದಲ್ಲಿ ಬಂಧಿತರಾಗಿರುವ ನಮ್ಮ ಇಬ್ಬರು ಹುಡುಗರು ಮೊದಲು ಇಟಲಿಗೆ ಸುರಕ್ಷಿತವಾಗಿ ಬಂದು ತಲುಪಲಿ ಅದರೊಂದಿಗೆ ಸೋಲಿನ ಭಯದಲ್ಲಿರುವ ನಮ್ಮ ಪಕ್ಷಕ್ಕೆ ಒಂದಿಷ್ಟು ಮತಗಳು ಬೀಳಲಿ. ಆರು ತಿಂಗಳ ನಂತರ ನಾನೇನೂ ಈ ದೇಶದ ವಿದೇಶ ವ್ಯವಹಾರಗಳ ಮಂತ್ರಿಯಾಗಿ ಇರುವುದಿಲ್ಲ. ನನ್ನ ಈ ತಂತ್ರದ ಬೆಳವಣಿಗೆ ಮತ್ತು ಪರಿಣಾಮಗಳನ್ನು ಮುಂದಿನ ಮಂತ್ರಿ ನೋಡಿಕೊಳ್ಳುತ್ತಾನೆ ಬಿಡಿ”

14.2.12 ರಂದು ಕೇರಳದ ಸಮುದ್ರದಲ್ಲಿ ಮೀನು ಹಿಡಿಯುತ್ತಿದ್ದ ದೋಣಿಯ ಇಬ್ಬರು, ಕೇರಳದ ಬೆಸ್ತರನ್ನು ಗುಂಡಿಟ್ಟು ಕೊಂದ ಇಟಲಿಯ ಹಡಗಿನ ಇಬ್ಬರು ನಾವಿಕರನ್ನು ಬಂಧಿಸಲಾಗಿತ್ತು. ಅವರನ್ನು ನಮ್ಮ ಸರ್ವೋಚ್ಚ ನ್ಯಾಯಾಲಯವು ಹಲವು ಷರತ್ತುಗಳೊಂದಿಗೆ ಇಟಲಿಯ ಚುನಾವಣೆಯಲ್ಲಿ ಮತದಾನ ಮಾಡಲು ಅನುಕೂಲವಾಗುವಂತೆ ಜಾಮೀನು ನೀಡಿತು. ಆದರೆ ಇಟಲಿಗೆ ತಲುಪಿದೊಡನೆ ಅಲ್ಲಿಯ ಸರಕಾರವು ಈ ಇಬ್ಬರು ನಾವಿಕರನ್ನು ಭಾರತಕ್ಕೆ ಒಪ್ಪಿಸಲು ನಿರಾಕರಿಸಿತು. ಆ ಸಂದರ್ಭದಲ್ಲಿ ಇಟಲಿಯ ವಿದೇಶ ವ್ಯವಹಾರಗಳ ಮಂತ್ರಿಯೊಬ್ಬರು ಮಾಡಿದ ಉದ್ಗಾರ ಮೇಲಿನದ್ದು.

ಇಟಲಿಯು “ನಮ್ಮ ನಾವಿಕರು ಭಾರತದಲ್ಲಿ ಅವರ ವಿಚಾರಣೆಯಾಗುವಲ್ಲಿಗೆ ಹಿಂತಿರುಗಲಾರರು” ಎಂದು ಹೇಳಿದಾಗ ಈ ನಿರ್ಧಾರದ ಪರಿಣಾಮವನ್ನು ಎದುರಿಸಬೇಕಾಗುತ್ತದೆ” ಎನ್ನುವ ಪತ್ರಿಕ್ರಿಯೆಯನ್ನು ನಮ್ಮ ಪ್ರಧಾನಿ ಮನಮೋಹನ ಸಿಂಗರು, ಮಾಡಿದ್ದರು. ಆದರೆ ಇವೇ ನಾಲ್ಕು ಮಾತುಗಳನ್ನು ಪ್ರತಿಬಾರಿಯು ಪಾಕಿಸ್ತಾನವಾಗಲಿ, ಬಂಗ್ಲಾದೇಶವಾಗಲೀ ನಮ್ಮ ಸೈನ್ಯದ ವಿರುದ್ಧ,ನಮ್ಮ ದೇಶದ ವಿರುದ್ಧ ಕಾರ್ಯಾಚರಣೆಯನ್ನು ನಡಿಸಿದಾಗಲೆಲ್ಲ ಭಯೋತ್ಪಾದಕ ಬಾಂಬು ಸ್ಫೋಟವಾದಾಗಲೆಲ್ಲ ಹೇಳುತ್ತಿರುವುದರ ನಂತರದ ವೈಫಲ್ಯವನ್ನು ಜಗತ್ತಿಡೀ ಗಮನಿಸುತ್ತ ಇರುತ್ತಿತ್ತು. ಇವೇ ಮಾತುಗಳನ್ನು ಕಾಶ್ಮೀರದ ಪ್ರತ್ಯೇಕತಾ ವಾದಿಗಳ ವಿರುದ್ಧ ಮತ್ತು ವಿದೇಶಿ ಪ್ರೇರಿತ ಭಯೋತ್ಪಾದಕರ ವಿರುದ್ಧವೂ ಹೇಳುತ್ತಿರುವುದರ ಪ್ರಭಾವದ ಅರಿವು ಕೂಡಾ ಇಡೀ ಜಗತ್ತಿಗೇನೇ ತಿಳಿದಿದೆ. ಹಾಗಾಗಿ ಆ ಮಾತನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ.

ಹಾಗಾದರೆ ನಮ್ಮ ಪ್ರಧಾನಿಯ ಎಚ್ಚರಿಕೆಯ ಮಾತಿಗೆ ಬೆದರಿದಂತೆ ನಟಿಸಿ ಈ ನಾವಿಕರಿಬ್ಬರನ್ನು ಮತ್ತೆ ಭಾರತಕ್ಕೆ ಹಿಂತಿರುಗುವಂತೆ ಇಟಲಿ ಸರಕಾರವು ತೆಗೆದುಕೊಂಡ ನಿರ್ಣಯದ ಮರ್ಮವೇನು?

ಕಳೆದ ವರ್ಷದ ಮೊದಲಲ್ಲಿ ಕೇರಳದ ಕ್ರೈಸ್ತ ಕಾರ್ಡಿನಲ್‌ರೊಬ್ಬರ ಹೇಳಿಕೆಯನ್ನು ಈ ಸಂದರ್ಭದಲ್ಲಿ ನೆನಪಿಸುವುದು ಸೂಕ್ತವೆನಿಸುತ್ತದೆ. ಅವರು ಈ ಪ್ರಕರಣವನ್ನು ಕೈಗೆತ್ತಿಕೊಂಡು

ರಾಜಿ ಪ್ರಯತ್ನವನ್ನು ನಡೆಸಿದ್ದರು. ಅವರ ಪ್ರಕಾರ "ಕ್ರೈಸ್ತ ದೇಶವೊಂದರ ಹಡಗು ಹಾಗೂ ನಾವಿಕರು ಕ್ರೈಸ್ತ ಬೆಸ್ತರನ್ನು ಕೊಂದ ಪ್ರಕರಣದಲ್ಲಿ ಕ್ರೈಸ್ತ ಗುರುವಾಗಿರುವ ನಾನು ನನ್ನ ದೇಶದ ಕ್ರೈಸ್ತ ಆಡಳಿತಗಾರರನ್ನು ಸಮಜಾಯಿಸಿ ಕ್ರೈಸ್ತರನ್ನು ರಕ್ಷಿಸಬೇಕಾದುದು ನನ್ನ ಕರ್ತವ್ಯ" ಎಂದಿದ್ದರು.

ಇದು ನಮ್ಮ ದೇಶದ ಎಲ್ಲಾ ಕ್ರೈಸ್ತರನ್ನು ಸಂಬಂಧಿಸಿ ಹೇಳಿದುದೇ ಆಗಿದೆ. ಅಂದರೆ ಈ ಪ್ರಕರಣದಲ್ಲಿ ತಮ್ಮ ಹಿತಾಸಕ್ತಿಗಳನ್ನು ಇಟ್ಟುಕೊಂಡಿರುವವರು ಸೋನಿಯಾ, ರಾಹುಲ್, ಮಾರ್ಗರೇಟ್, ಆಂಟನಿ, ಆಸ್ಕರ್, ಚಾಂಡಿ ಮುಂತಾದವರು. ಅದರಲ್ಲೂ ಮೊದಲಿನ ಇಬ್ಬರು ಹೇಳಿ ಕೇಳಿ ಇಟಲಿ ಕ್ರೈಸ್ತರು.

ಹೀಗೆ ರಾಬರ್ಟ್ ವಾಡ್ರಾ ಎನ್ನುವ ಪ್ರಿಯಾಂಕಾ ಎಂಬಾಕೆಯ ಗಂಡನ ಮೇಲೆ ಆರ್ಥಿಕ ದುರ್ವ್ಯವಹಾರದ ಆಪಾದನೆ ಬರುತ್ತಲೇ, ಮರುಕ್ಷಣದಲ್ಲಿ ಎಂಬಂತೆ ಭಾರತದ ಅರ್ಥಮಂತ್ರಿಗಳು ಅವರದ್ದು ಸಾಚಾ ವ್ಯವಹಾರ ಎಂದರು. ಖುರ್ಷಿದ್ ಎನ್ನುವ ವಿದೇಶ ವ್ಯವಹಾರ ಸಚಿವರು ಸೋನಿಯಾ ಅಳಿಯಸಾದಾ ಶುದ್ಧ ವ್ಯಕ್ತಿ ಎಂದರು. ಕಂಪೆನಿ ವ್ಯವಹಾರಗಳ ಸಚಿವ ವೀರಪ್ಪ ಮೈಲಿಯವರು ವಾಥ್ರಾರವರ ಕಂಪೆನಿಯ ವ್ಯವಹಾರಗಳೆಲ್ಲ ಕಾನೂನು ಬದ್ಧ ಎಂದರು. ಹೀಗೆ ಒಬ್ಬ ಕ್ರೈಸ್ತ ಮನೆಯಳಿಯನ ನೆರವಿಗೆ ಧಾವಿಸಿ ಬರುವ ಮಂತ್ರಿಗಳ ದಂಡೇ ಇದೆ. ಹಾಗಿರುವಾಗ ತಮ್ಮ ಒಡತಿ ಸೋನಿಯಾರವರ ತಾಯಿ ಮನೆಗೆ ಸಹಾಯಮಾಡಲು ದೇಶದ ಇಡೀ ಆಡಳಿತ ಯಂತ್ರವೇ ಸೊಂಟಕಟ್ಟಿ ನಿಂತಿದ್ದರೆ ಆಶ್ಚರ್ಯವೇ ಇಲ್ಲ.

ವಿಶೇಷವೆಂದರೆ ಈ ಇಟೆಲಿಯ ಹಡಗಿನ ಪ್ರಕರಣದಲ್ಲಿ ನ್ಯಾಯಮೂರ್ತಿ ಅಲ್ತಮಸ್ ಕಬೀರರ ಪೀಠವು ಇಟೆಲಿಯ ಆಪಾದಿತ ನಾವಿಕರಿಗೆ ಚುನಾವಣೆಯಲ್ಲಿ ಮತನೀಡಲು ಬಿಡುಗಡೆ ಗೊಳಿಸಿ ಇಟೆಲಿಗೆ ಹೋಗಲು ಅನುಮತಿ ನೀಡಿತು. ಚುನಾವಣೆಗೆ ಅಂಚೆ ಮತದಾನದಲ್ಲಿ ಭಾಗವಹಿಸಿ ಎಂದು ಹೇಳುವ ಪ್ರಾಥಮಿಕ ಆಲೋಚನೆಯು ಅವರಿಗೆ ಬರಲಿಲ್ಲ. ಕೇರಳದ ನ್ಯಾಯಾಲಯವಾದರೋ 6 ಕೋಟಿ ರೂಪಾಯಿಗಳ ಭದ್ರತೆಯನ್ನು ಹಿಂದಿನ ಬಾರಿ ಪಡೆದು ಆ ನಾವಿಕರನ್ನು ಕ್ರಿಸ್‌ಮಸ್ ಹಬ್ಬದಲ್ಲಿ ಭಾಗವಹಿಸಲು ಅನುಮತಿ ನೀಡಿದ್ದಿತ್ತು. ಆದರೆ ಈ ಬಾರಿ ಅಟಾರ್ನಿ ಜನರಲ್ ಗುಲಾಮ್ ವಹನವತಿಯವರೂ ಸಾರಾಸಗಟು ಬಿಡುಗಡೆಗೆ ಸಮ್ಮತಿಯನ್ನು ನೀಡಿದರು. ವಿದೇಶಾಂಗ ಸಚಿವಾಲಯದ ಮುಖ್ಯ ಕಾರ್ಯದರ್ಶಿಯವರಾದ ರಂಜನ್ ಮಥಾಯಿಸ್‌ರವರೂ ಸಚಿವರಾದ ಖುರ್ಷಿದ್‌ರವರೂ ಈ ಪ್ರಕರಣದಲ್ಲಿ ವಹಿಸಿಕೊಂಡಿದ್ದುದು ಪೋಷಕ ಪಾತ್ರವನ್ನು.

ಇದೊಂದು ಎಲ್ಲರಿಗೂ ಸುಖಾಂತವೆನ್ನಿಸಬೇಕೆನ್ನುವ ಪ್ರಹಸನ. ಈ ಪ್ರಕರಣದಿಂದ ಇಟಲಿಯ ಆಡಳಿತ ಪಕ್ಷಕ್ಕೆ ಲಾಭವಾಯಿತು. ಭಾರತದ ದುರ್ಬಲ ಪ್ರಧಾನಿಯ ಪೊಳ್ಳು ಬೆದರಿಕೆಗೆ ವಿದೇಶವೊಂದು ಭಯಪಟ್ಟಿತೆನ್ನುವ ಹೊಸ ವರಸೆಯೊಂದನ್ನು ಹುಡುಕುವ ಅವಕಾಶ ದೊರೆಯಿತು. ಭಾರತದ ಸಾಮ್ರಾಜ್ಞಿಯ ತವರು ಮನೆಯ ಪ್ರಜೆಗಳು ಭಾರತದ ಕಾನೂನಿನ ಉಲ್ಲಂಘನೆಯನ್ನು ಮಾಡಿಯೂ ರಕ್ಷಣೆಗೆ ಒಳಗಾದರು.

ಆ ಇಬ್ಬರು ಅಪಾದಿತ ನಾವಿಕರನ್ನು ಭಾರತಕ್ಕೆ ಮರಳುವಂತೆ ಮಾಡಲು ಭಾರತವು ಇಟೆಲಿಯ ಎಲ್ಲಾ ಬೇಡಿಕೆಗಳಿಗೂ ಒಗ್ಗಿತು. ಇಟೆಲಿಯು ತನ್ನ ನಾವಿಕರಿಗೆ ಮರಣ ದಂಡನೆಯ ಶಿಕ್ಷೆ ನೀಡಬಾರದು ಎಂದಿತು. ಅದನ್ನು ಭಾರತ ಒಪ್ಪಿತು. ಅವರನ್ನು ಸೆರೆಮನೆಯಲ್ಲಿಡದೆ ಇಟೆಲಿಯ ದೆಹಲಿಯಲ್ಲಿರುವ ರಾಯಭಾರ ಕಛೇರಿಯಲ್ಲಿ ಇರುವಂತೆ ಆಗ್ರಹಿಸಿತು. ಅದನ್ನು ನಮ್ಮ ಸರಕಾರ ಒಪ್ಪಿತು. ಈಗಿನ್ನು ಸರಕಾರವು ನೇಮಿಸುವ ವಿಶೇಷ ನ್ಯಾಯಾಲಯವೇನಾದರೂ ಭಾರತವು ಆ ನಾವಿಕರನ್ನು ವಿಚಾರಿಸುವ ಅಧಿಕಾರವಿಲ್ಲವೆಂದರೆ ಸಾಕು ಸರಕಾರವು ಸರ್ವೋಚ್ಚ ನ್ಯಾಯಾಲಯದ ಮೇಲ್ಮನವಿಗೆ ಹೋಗದೆ ಆಪಾದಿತರನ್ನು ಇಟೆಲಿಗೆ ಒಪ್ಪಿಸಬಹುದೇನೋ. ಇನ್ನೂ ಒಂದು ವಿಚಿತ್ರವೆಂದರೆ ಹೇಗೂ ಮರಣದಂಡನೆ ಇಲ್ಲವೆಂದು ಈಗಲೇ ನಿರ್ಣಯಿತವಾಗಿರುವ ಈ ಆಪಾದಿತರಿಗೆ ನಮ್ಮ ನ್ಯಾಯಾಲಯದ ಉಳಿದ ಶಿಕ್ಷೆಯನ್ನು ವಿಧಿಸಿದರೂ ಅದನ್ನು ಅವರು ಇಟೆಲಿಯ ಸೆರೆಮನೆಯಲ್ಲಿದ್ದು ಅನುಭವಿಸಬಹುದೆಂದೂ ಇದೆ. ಈಗಲೇ ಜಾಮೀನು ಮೇಲೆ ಬಿಡುಗಡೆ ಹೊಂದಿ ಸ್ವದೇಶಕ್ಕೆ ಹೋಗಿದ್ದ ಈ ಕೈದಿಗಳಿಗೆ ವೀರೋಚಿತನಾದ ಸ್ವಾಗತವು ಅವರಿಗೆ ಇಟೆಲಿಯಲ್ಲಿ ಸಿಕ್ಕೆದುದನ್ನು ಗಮನಿಸಿದಾಗ ಇನ್ನು ಶಿಕ್ಷೆಗೊಳಗಾದ ಮೇಲೆ ಇಟೆಲಿಯಲ್ಲಿ ಅವರಿಗೆ ಶಿಕ್ಷೆಯಮತೂ ಇರದು ಅದರ ಬದಲು ಪ್ರಶಸ್ತಿ ಪುರಸ್ಕಾರಗಳೇ ಸಿಗಬಹುದು.

ಈಗಿನ ಕೇಂದ್ರ ಸರಕಾರವು ಬಟ್ಟಾಂಬಯಲು ನಡೆಸುವ ಅಕ್ರಮಗಳನ್ನು ದೇಶವು ಈಗ ಮೌನವಾಗಿ ಗಮನಿಸುತ್ತಿದೆ. ಡಿ.ಎಂ.ಕೆ.ಯು ಯು.ಪಿ.ಎ. ಕೂಟದಿಂದ ಹೊರಹೋಗಲಿದೆ ಎಂದಾಗ ಬೆದರಿಸಲು ಸಿ.ಬಿ.ಐ.ಯನ್ನು ಸರಕಾರವು ಉಪಯೋಗಿಸಿತು. ಆಮೇಲೆ ಬೇಕೆಂದೇ ಪ್ರಧಾನಿಯ ಕಛೇರಿಯಿಂದ ಸಿ.ಬಿ.ಐ. ವಿಚಾರಣೆ ನಡೆಯದಂತೆ ಆದೇಶಿಸಿತು. ಹೀಗೆ ತಾನು ಶಿಕ್ಷಿಸಬಲ್ಲೆ ಅಷ್ಟೇ ಅಲ್ಲ ಕಾಪಾಡಲೂ ಬಲ್ಲೆ ಎನ್ನುವ ವಾತಾವರಣವನ್ನು ಕೇಂದ್ರವು ನಿರ್ವಹಿಸುತ್ತಿದೆ. ಆದರೆ ಜನರು ಬುದ್ಧವಂತರಾಗುತ್ತಿದ್ದಾರೆ. ಕ್ವಟ್ರೋಚಿ ಎನ್ನುವ ಇಟೆಲಿಯ ಖದೀಮನು ಭಾರತದ ನ್ಯಾಯವ್ಯವಸ್ಥೆಯಿಂದ ಪಾರಾದುದನ್ನು ನೆನಪಿಸುವ ಬೆಳವಣಿಗೆ ಇದು.

## ಶಬ್ದಶೋಧ – 76 ರ ಉತ್ತರ

| | | | | | | | | |
|---|---|---|---|---|---|---|---|---|
| 1 ವಿ | ರಂ | 2 ಚಿ | ■ | ■ | ■ | 3 ಚಂ | ದ | 4 ನಾ |
| ನಾ | ■ | ತ್ತಾ | ■ | ■ | ■ | ದ್ರಿ | ■ | ಕು |
| ಯ | ■ | 5 ಲ | ಗ್ನ | 6 ಪ | ತ್ರಿ | ಕೆ | ■ | ತಂ |
| 7 ಕ | 8 ಚ | ■ | ■ | ಡಿ | ■ | ■ | 9 ಗ | ತಿ |
| ■ | ಕೋ | ■ | 10 ಕ | ಪಾ | ಅ | ■ | ರ | ■ |
| 11 ಅ | ರಿ | ■ | ■ | ಟ | ■ | ■ | 12 ತಿ | 13 ಲ |
| ಭಿ | ■ | 14 ಗು | ಲಾ | ಲು | ಬ | 15 ಣ್ಣ | ■ | ಟ್ಟ |
| ಜಾ | ■ | ಳಿ | ■ | ■ | ■ | ಪ್ಪ | ■ | ಣಿ |
| 16 ತ | ವ | ಕ | ■ | ■ | ■ | 17 ಕ | ಟ್ಟಿ | ಗೆ |

# ಶಿರಸಿ ಶ್ರೀಮಾರಿಕಾಂಬ ದೇವಾಲಯ



**ಬಿ.ಎಸ್. ಪಾರಿಜಾತ ಮೋಹನ್**
ಶಿಕ್ಷಕಿ, ಬೆಂಗಳೂರು
paravimona@gmail.com

"ಸೌಂದರ್ಯ ಲಹರಿ" ಆಚಾರ್ಯ ಶ್ರೀ ಶಂಕರ ಭಗವತ್ಪಾದರಿಂದ ರಚಿತವಾದ ವಿಶಿಷ್ಟ ಸ್ತೋತ್ರ. ಪಾರ್ವತಿ, ಸರಸ್ವತಿ, ಲಕ್ಷ್ಮಿ, ಸ್ವರೂಪಿಯಾದ ವಿಶ್ವಮಾತೆಯನ್ನು ವಿಧವಿಧವಾಗಿ ವರ್ಣಿಸಿರುವ ಸ್ತೋತ್ರ, ಆಚಾರ್ಯರು ಆ ದೇವಿಯನ್ನು ' ತಾಯಿ ನೀನು ಸರಸ್ವತಿ, ಲಕ್ಷ್ಮೀ, ಪಾರ್ವತೀ ಮಾತ್ರವಾಗದೆ ಇವೆಲ್ಲವನ್ನು ಮೀರಿದ ತುರೀಯಳು ಪರಮಾನಂದಸ್ವರೂಪಳು ಪರಬ್ರಹ್ಮನ ಶಕ್ತಿಯೂ ಆಗಿರುವೆ ಎಂದು ವರ್ಣಿಸಿದ್ದಾರೆ. ದೇವಿಯು ಶಂಕರಿ, ಶಾಂಭವಿ, ದುರ್ಗೆ, ಚಾಮುಂಡಿ, ಮಹಾಕಾಳಿ, ಮಾರಿಕಾಂಬೆಯೆಂಬ ವಿವಿಧ ಹೆಸರುಗಳಿಂದ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಕಾರ್ಯಕ್ಕಾಗಿ ಅವತರಿಸಿ ಭಕ್ತರ ಮನೋಭಿಷ್ಟಗಳನ್ನು ನೆರವೇರಿಸುತ್ತಾ ಬಂದಿದ್ದಾಳೆ.

ಇಂತಹ ಶಕ್ತಿ ದೇವಿಯು ನೆಲೆಸಿರುವ ಕರ್ನಾಟಕದ ಮಾರಿಕಾಂಬ ಕ್ಷೇತ್ರಗಳಲ್ಲಿ ಪ್ರಮುಖವಾದ ಹಾಗು ವಿಶಿಷ್ಟವಾದ ಕ್ಷೇತ್ರ ಶಿರಸಿ. ಈ ಕ್ಷೇತ್ರವು ಉತ್ತರಕನ್ನಡ ಜಿಲ್ಲೆಯ, ಶಿರಸಿ ತಾಲ್ಲೂಕಿನಲ್ಲಿದೆ. ದಟ್ಟವಾದ ಎಲೆಉದುರುವ ಮರಗಳಿರುವ ಅರಣ್ಯಗಳಿಂದ ಸುತ್ತುವರಿದ ಈ ಪ್ರದೇಶವು ಅನೇಕ ಸುಂದರವಾದ ಜಲಪಾತಗಳನ್ನೊಳಗೊಂಡ ಪ್ರಾಕೃತಿಕ ಸೌಂದರ್ಯದಿಂದ ಕಣ್ಮನ ಸೆಳೆಯುವ ತಾಣವಾಗಿದೆ. ಈ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು 2500 ಅಡಿಗಳಷ್ಟು ಎತ್ತರದಲ್ಲಿದೆ. ತಮಗೆ ಪ್ರಕೃತಿಯ ವಿಕೋಪದಿಂದ ರಕ್ಷಣೆ, ದುಷ್ಟಶಕ್ತಿಯ ನಿಗ್ರಹಕ್ಕೆ ತಾಯಿ ಮಾರಿಕಾಂಬೆಯು ಇಲ್ಲಿ ನೆಲೆಸಿರುವುದೇ ಕಾರಣವೆಂದು ಭಕ್ತರು ನಂಬಿದ್ದಾರೆ.

**ಪೌರಾಣಿಕ ಹಾಗು ಐತಿಹಾಸಿಕ ಹಿನ್ನೆಲೆ;**

ದಂತಕಥೆಗಳ ಪ್ರಕಾರ ಈ ಹಿಂದೆ ಒಮ್ಮೆ ಸೋಂದೆಯ ಅರಸ ಇಮ್ಮಡಿ ಸದಾಶಿವರಾವನ ಕನಸಿನಲ್ಲಿ ತಾಯಿ ಮಾರಿಕಾಂಬೆಯು ಕಾಣಿಸಿಕೊಂಡು ಅಲ್ಲೆ ಹತ್ತಿರದ ಕೆರೆಯೊಂದರಲ್ಲಿ ತನ್ನ ಉಪಸ್ಥಿತಿಯನ್ನು ತಿಳಿಸಿ, ತನಗಾಗಿ ಒಂದು ದೇವಾಲಯವನ್ನು ನಿರ್ಮಿಸುವಂತೆ ಆಜ್ಞಾಪಿಸಿದಳಂತೆ. ಅದರಂತೆ ಸದಾಶಿವರಾಯನು ಊರ ಸರಹದ್ದಿನ ಕೆರೆಯನ್ನು ಶೋಧಿಸಲು ತಾಯಿ ಮಾರಿಕಾಂಬೆಯ ವಿಗ್ರಹವು ದೊರೆಯಿತು. ಸುಮಾರು 7 ಅಡಿ ಎತ್ತರದ ಸುಂದರ ಕೆತ್ತನೆಯ ಮರದ ಆ ವಿಗ್ರಹವನ್ನು ಕ್ರಿ.ಶ. 1611ರಲ್ಲಿ ಹೊರ ತೆಗೆದು ನಂದಿಕೇಶ್ವರ ಮಠದ ಸ್ವಾಮಿಗಳ ನಿರ್ದೇಶನದಂತೆ ಸಕಲ ಸಂಪ್ರದಾಯದೊಂದಿಗೆ ಮಂಗಳವಾರ 8ನೇ ವೈಶಾಖದಂದು ಪ್ರತಿಷ್ಠಾಪಿಸಲಾಯಿತಂತೆ. ಹಾಗೆ 1688ರಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ. ಪಾರಂಭದಲ್ಲಿ ಶಕ್ತಿ ದೇವತೆಯ ಆರಾಧನೆಗೆ



ಪ್ರಾಣಿಬಲಿಯನ್ನು ನೆರವೇರಿಸಲಾಗುತ್ತಿದ್ದು ಈಗ ದೇವಾಲಯದಲ್ಲಿ ಪ್ರಾಣಿ ಬಲಿ ನಿಂತಿದೆ. ಪೂಜಾ ಪದ್ಧತಿಯಲ್ಲೂ ಮಾರ್ಪಾಡು ಮಾಡಲಾಗಿದೆ. ಹಿಂದೆ ಈ ಪ್ರದೇಶವು ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಗಂಗರು, ಕಲಚೂರ್‍ಯರು, ಯಾದವರು, ಹೊಯ್ಸಳರು, ಸೋಂದೆಯ ಅರಸರು, ವಿಜಯನಗರದರಸರು ಹೀಗೆ ಆನೇಕ ರಾಜಮನೆತನ ಗಳ ಆಡಳಿತಕ್ಕೆ ಒಳಪಟ್ಟು ಕಾಲಕ್ರಮೇಣ ಅಭಿವೃದ್ಧಿಯ ಹಾದಿಯನ್ನು ತಲುಪಿದೆ.

**ಇಲ್ಲಿನ ಪ್ರಮುಖ ಪೇಕ್ಷಣೀಯ ಸ್ಥಳಗಳು;**

**ಶ್ರೀಮಾರಿಕಾಂಬ ದೇವಾಲಯ;** ಈ ದೇವಾಲಯವು ಮಂಗಳೂರು ಶೈಲಿಯಲ್ಲಿ ನಿರ್ಮಿಸಲಾಗಿದೆ. ಇದು ವಿಶಾಲವಾದ ಪ್ರಾಂಗಣವನ್ನು ಹೊಂದಿದ್ದು ಮುಂಬಾಗಿಲಲ್ಲಿ ಬೃಹತ್ ಗಾತ್ರದ ಎರಡು ಆನೆಗಳನ್ನು ನಿರ್ಮಿಸಲಾಗಿದೆ. ಪ್ರಾಂಗಣದ ಸುತ್ತಲಿನ ಒಳ ಹಾಗು ಹೊರ ಗೋಡೆಗಳು ಕಾವಿ ಕಲೆಯ ರಾಮಾಯಣ ಮಹಾಭಾರತದ ಅನೇಕ ಘಟನೆಗಳನ್ನು ವಿವರಿಸುವ ಚಿತ್ರಗಳಿಂದ ಅಲಂಕೃತವಾಗಿದೆ. ಗರ್ಭಗೃಹದಲ್ಲಿ ಮರ ಹಾಗು ಲೋಹದ ಮಂಟಪವಿದ್ದು ಅದರ ಸುತ್ತಲೂ ಅನೇಕ ದೇವಾನು ದೇವತೆಗಳ ಚಿತ್ರವನ್ನು ಕಾಣಬಹುದಾಗಿದೆ. 7 ಅಡಿ ಎತ್ತರದ ಮರದ ಸುಂದರ ಕೆತ್ತನೆಯ ಸಿಂಹವಾಹಿನಿಯಾದ ದೇವಿಯ ವಿಗ್ರಹವು ಕಣ್ಮನ ಸೆಳೆಯುತ್ತದೆ. ದೊಡ್ಡದಾದ ಸುಂದರ ನಯನಗಳೂ, ಅಷ್ಟಭುಜಗಳನ್ನು ಹೊಂದಿರುವ ತಾಯಿಯು ಅನೇಕ ಶಸ್ತ್ರಾಸ್ತ್ರಗಳಿಂದಲೂ, ಆಭರಣಗಳಿಂದಲೂ ಅಲಂಕೃತಗೊಂಡು ವಿರಾಜಮಾನಳಾಗಿದ್ದಾಳೆ.

**ಮಹಾಗಣಪತಿ ದೇವಾಲಯ;** ಮಾರಿಕಾಂಬ ದೇವಾಲಯದ ಆವರಣದ ಎದುರು ಭಾಗದಲ್ಲಿ ಶ್ರೀಮಹಾಗಣಪತಿಯ ದೇವಾಲಯವಿದ್ದು, ಇಲ್ಲಿನ ಜನರು ತಮ್ಮ ಎಲ್ಲಾ ಶುಭ ಸಮಾರಂಭಗಳನ್ನು ಸ್ವಾಮಿಯ ಅನುಮತಿ ಪಡೆದು ನೆರವೇರಿಸುತ್ತಾರೆ.

**ಶ್ರೀಹನುಮಂತನ ದೇವಾಲಯ;** ಇದು ಸಹ ಗಣಪತಿಯ ದೇವಾಲಯದ ಪಕ್ಕದಲ್ಲೇ ಇದ್ದು ಎಣ್ಣೆ ಆಂಜನೇಯ ಎನಿಸಿದ್ದಾನೆ. ಕಾರಣ ಇಲ್ಲಿ ಬರುವ ಭಕ್ತರು ಎಣ್ಣೆಯ ಅಭಿಷೇಕವನ್ನು ಸ್ವಾಮಿಗೆ ನೆರವೇರಿಸುವುದರ ಮೂಲಕ ತಮ್ಮ ಕಷ್ಟಗಳನ್ನು ಪರಿಹರಿಸುವಂತೆ ಬೇಡುತ್ತಾರೆ.

**ಕೋಣಗೃಹ;** ಇದು ಮಾರಿಕಾಂಬೆಯ ಗರ್ಭಗೃಹದ ಹಿಂಭಾಗದಲ್ಲಿದೆ. ಇಲ್ಲಿ ಸುಂದರ ದಷ್ಟಪುಷ್ಟ ದೇಹವನ್ನು, ಆಕರ್ಷಣೀಯ ಕಣ್ಣುಗಳನ್ನು, ಕೊಂಬುಗಳನ್ನು ಹೊಂದಿರುವ ಬೃಹತ್

ಗಾತ್ರದ ಅಪರೂಪದ ಕೋಣಗಳನ್ನು ಹಿಂದಿನ ಸಂಪ್ರದಾಯದ ಸಂಕೇತವಾಗಿ ಸಂರಕ್ಷಿಸಲಾಗುತ್ತಿದೆ. ದೇವಿಯ ಪೂಜೆಯೊಂದಿಗೆ ಪ್ರತಿದಿನ ಇವುಗಳ ಆರಾಧನೆಯು ನಡೆಯುತ್ತದೆ.

**ಗೋಪಾಲಕೃಷ್ಣ ದೇವಾಲಯ;** ಇದು ಸಹ ದೇವಿಯ ದೇವಾಲಯದ ಆವರಣದಲ್ಲೇ ಇದೆ. ಸುಂದರ ಕಪ್ಪು ಶಿಲೆಯ ವಿಗ್ರಹ ರೂಪದ ಸ್ವಾಮಿಯು ಇಲ್ಲಿ ನೆಲೆಸಿದ್ದಾನೆ.

**ಇಲ್ಲಿನ ಇನ್ನಿತರ ಪ್ರಮುಖ ದೇವಾಲಯಗಳು;**

ಶ್ರೀ ಮಹಾಗಣಪತಿ ದೇವಾಲಯ;. ಶ್ರೀ ಶಂಕರ ದೇವಾಲಯ; ಶ್ರೀ ಲಕ್ಷ್ಮೀದೇವಾಲಯ; ಶ್ರೀ ವಿಷ್ಣುವಿನ ದೇವಾಲಯ; ಶ್ರೀ ರಾಮಲಿಂಗೇಶ್ವರ ದೇವಾಲಯ; ಶ್ರೀ ಸುಬ್ರಹ್ಮಣ್ಯ ದೇವಾಲಯ, (ನೀಲೆಕಣಿ.); ಶ್ರೀ ವಿಠೋಬ ದೇವಾಯ, ಶ್ರೀ ದತ್ತಾತ್ರೇಯ ದೇವಾಲಯ, ಶ್ರೀ ರಾಘವೇಂದ್ರ ಮಠ, ಶ್ರೀ ಕಾಳಿಭವಾನಿ,(ಅಂಬಾಗಿರಿ); ಶ್ರೀ ಅಯ್ಯಪ್ಪ, ಶ್ರೀ ಶನೇಶ್ವರ ಸ್ವಾಮಿ ದೇವಾಲಯ ಇತ್ಯಾದಿ.

**ಇಲ್ಲಿನ ವಿಶೇಷ ಪೂಜಾ ದಿನಗಳು;** ಎರಡು ವರ್ಷಗಳಿಗೊಮ್ಮೆ ಮಾರಿಕಾಂಬೆಯ ಜಾತ್ರೆ ನಡೆಯುತ್ತದೆ. ಇದು ಕರ್ನಾಟಕದ ಅತಿ ದೊಡ್ಡ ಜಾತ್ರೆಗಳಲ್ಲಿ ಒಂದು. ಆ ಸಮಯದಲ್ಲಿ ಮಾರಿಕಾಂಬೆಯ ರಥೋತ್ಸವದಲ್ಲಿ ಭಾಗವಹಿಸಲು ದೇಶವಿದೇಶಗಳಿಂದ ಲಕ್ಷಾಂತರ ಜನರು ಇಲ್ಲಿಗೆ ಆಗಮಿಸುತ್ತಾರೆ. ದಸರಾ, ದೀಪಾವಳಿ, ಕಾರ್ತೀಕ ಮಾಸದಂತಹ ವಿಶೇಷ ದಿನಗಳಲ್ಲಿ ವಿಶೇಷ ಪೂಜೆ ಹೋಮ–ಹವನಗಳನ್ನು ಇಲ್ಲಿ ನೆರವೇರಿಸಲಾಗುತ್ತದೆ.

**ಇಲ್ಲಿನ ಹತ್ತಿರದ ಪ್ರೇಕ್ಷಣೀಯ ಸ್ಥಳಗಳು;**

**ಸೋಂದ; (ಸೋಂದೆ, ಸೋದೆ)** ಇದುಶಿರಸಿಯಿಂದ20 ಕಿ. ಮೀ. ದೂರದಲ್ಲಿದೆ. ಇದು ಹಿಂದು, ಜೈನ ಪರಂಪರೆಯ ನೆಲೆ. ಇಲ್ಲಿ ವಾದಿರಾಜಮಠ, ಸ್ವರ್ಣವಲ್ಲಿ ಮಠ, ಸ್ವಸ್ತಿಶ್ರೀ ಭಟ್ಟಾರಕ ಜೈನ ಮಠಗಳಿವೆ. ಇಲ್ಲಿನ ತಪೋವನ, ವ್ಯಾಸರಾಜ ಮಠ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳು.



**ಬನವಾಸಿ;** ಇದು ಶಿರಸಿಯಿಂದ ಸುಮಾರು 25 ಕಿ.ಮೀ ದೂರದಲ್ಲಿದೆ. ಪ್ರಸಿದ್ಧ ಐತಿಹಾಸಿಕ ಸ್ಥಳವಾದ ಈ ಪ್ರದೇಶದಲ್ಲಿ ಸುಂದರ ಕೆತ್ತನೆಯ ಕಲ್ಲಿನ ಒಳಾಂಗಣ ಹೊರಾಂಗಣ ಗೋಡೆಗಳು ಕಂಬಗಳು, ವಿಗ್ರಹಗಳು, ಬೃಹತ್ ನಂದಿ ನಮ್ಮ ನಾಡಿನ ಕಲಾ ವೈಭವಕ್ಕೆ ಮೆರಗು ನೀಡಿದೆ. ಸುಂದರ ಕಲಾ ವೈಭವದ ಗರ್ಭಗುಡಿಯಲ್ಲಿ ಶ್ರೀ ಮಧುಕೇಶ್ವರ ಸ್ವಾಮಿಯು ಲಿಂಗರೂಪಿಯಾಗಿ ನೆಲೆಸಿದ್ದಾನೆ. ಜೇನಿನ ಬಣ್ಣದ ಶಿವಲಿಂಗವು ಆಕರ್ಷಣೀಯವಾಗಿದೆ ಆದ ಕಾರಣ ಈ ಸ್ವಾಮಿಗೆ ಮಧುಕೇಶ್ವರ ಎಂಬ ಹೆಸರಿದೆ.

**ಸಹಸ್ರಲಿಂಗ;** ಇದು ಶಿರಸಿಯಿಂದ 17ಕಿ.ಮೀ ದೂರದಲ್ಲಿದೆ. ಇಲ್ಲಿ ಹರಿಯುವ ಅಘುನಾಶಿನಿ ನದಿಯು ಸಹಸ್ರಶಿವಲಿಂಗಗಳನ್ನು, ಬಸವ ವಿಗ್ರಹಗಳನ್ನು ಸ್ಪರ್ಶಿಸಿ ಸಾಗುತ್ತಿರುವುದನ್ನು ಕಾಣಬಹುದಾಗಿದೆ.



**ಯಾಣ;** ಇದು ಶಿರಸಿಯಿಂದ 40 ಕಿ.ಮೀ ದೂರದಲ್ಲಿದೆ. ದಟ್ಟವಾದ ಅರಣ್ಯದ ಮಧ್ಯೆ ಪ್ರಕೃತಿಯ ಒತ್ತಡಕ್ಕೆ ಸಿಲುಕಿ ಬಂಡೆಗಲ್ಲುಗಳು ವಿವಿಧ ಆಕೃತಿಯಲ್ಲಿ ನಿಂತಿವೆ. ಆ ಕಲ್ಲುಗಳ ಸಂದಿನಲ್ಲಿ ಇಣುಕಿ ನೋಡುವ ಸೂರ್ಯರಶ್ಮಿಯ ವಿಶೇಷ ಆಕರ್ಷಣೆ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಇಲ್ಲಿನ ಪ್ರಾಕೃತಿಕ ಸೌಂದರ್ಯದ ಅನುಭವ ಜೀವನದಲ್ಲಿ ಒಮ್ಮೆ ಸವಿಯಲೇ ಬೇಕೆನಿಸುತ್ತದೆ.

**ಇಲ್ಲಿನ ಪ್ರಮುಖ ಜಲಪಾತಗಳು;**

**ಉಂಚಳ್ಳಿ ಜಲಪಾತ;** ಇದು 30 ಕಿ. ಮೀ ದೂರದಲ್ಲಿದೆ. ಇದನ್ನು ಬ್ರಿಟೀಷ್ ಕಲೆಕ್ಟರ್ ಲುಶಿಂಗ್ಟನ್ ಎಂಬುವನು ಪತ್ತೆ ಮಾಡಿದ ಪ್ರಯುಕ್ತ ಈ ಜಲಪಾತವನ್ನು ಲುಶಿಂಗ್ಟನ್ ಜಲಪಾತವೆಂದು, ಕರೆಯುತ್ತಾರೆ. ಸುಮಾರು 116 ಮೀಟರ್ ಎತ್ತರದಿಂದ ದುಮ್ಮಿಕ್ಕುವ ಅಘುನಾಶಿನಿಯು ಕೆಪ್ಪೆ ಜಲಪಾತವೆಂದು ಕರೆಸಿಕೊಂಡಿದ್ದಾಳೆ.



ಇತರೆ ಜಲಪಾತಗಳು; ಶಿವಗಂಗಾ ಜಲಪಾತ, ಬೆಣ್ಣೆಹೊಳೆ ಜಲಪಾತ, ಬುರುಡೆ ಜಲಪಾತ, ಮಗೂಡ ಜಲಪಾತ, ಹೀಗೆ ಪ್ರವಾಸಿಗರ ಕಣ್ಮನ ತಣಿಸುವ ಇನ್ನು ಅನೇಕ ಜಲಪಾತಗಳು ಹಾಗು ಇತರ ಸ್ಥಳಗಳಾದ ಮಂಜುಗುಣಿ, ಸಾತುಡಿ, ಬಂಗಾರ ಮಕ್ಕಿ,ಇತ್ಯಾದಿಗಳ ತಾಣ ಶಿರಸಿ.

**ಯಾತ್ರಿಕರಿಗೆ ವಿಶೇಷ ಮಾಹಿತಿ;**

* ಶಿರಸಿಗೆ 3ರಿಂದ 4 ದಿನಗಳ ಪ್ರವಾಸ ಹೊರಟರೆ ಉತ್ತಮ
* ಶಿರಸಿ ಬೆಂಗಳೂರಿನಿಂದ ಸುಮಾರು 425 ಕಿ.ಮೀ ದೂರದಲ್ಲಿದೆ.
* ಹುಬ್ಬಳ್ಳಿಯಿಂದ 103 ಕಿಮೀ ದೂರವಿದೆ.
* ಇಲ್ಲಿಗೆ ಕೆ.ಎಸ್.ಆರ್.ಟಿ.ಸಿ ಹಾಗು ಖಾಸಗಿ ಬಸ್‌ಗಳ ಸೌಲಭ್ಯವಿದೆ.
* ಕುಮಟವರೆಗೆ ರೈಲ್ವೆ ವ್ಯವಸ್ಥೆ ಇದೆ. ಹುಬ್ಬಳ್ಳಿ ವರೆಗೆ ವಿಮಾನದ ವ್ಯವಸ್ಥೆ ಇದೆ
* ಖಾಸಗಿ ಹಾಗು ದೇವಾಲಯದ ಅನೇಕ ವಸತಿಗೃಹಗಳು ಇಲ್ಲಿವೆ.
* ಮರಾಠಿ, ಕೊಂಕಣಿ, ಕನ್ನಡ ಇಲ್ಲಿನ ಭಾಷೆಗಳು.
* ಅಡಿಕೆ ಕೋಕೋ, ಗೋಡಂಬಿ ವೆನಿಲ್ಲಾ ಪ್ರಮುಖ ಬೆಳೆಗಳು.
* ಯುವಕರಿಗೆ ಟ್ರಕ್ಕಿಂಗ್‌ಗೆ ಉತ್ತಮವಾದ ಕೆಲವು ತಾಣಗಳು ಇಲ್ಲಿವೆ.
* ಇಲ್ಲಿಗೆ ಕಾರವಾರ ಸಿದ್ಧಾಪುರ, ವರದಳ್ಳಿ ಶ್ರೀಧರ ಮಠ, ಸಿಗಂಧೂರು, ಮುರುಡೇಶ್ವರ, ಗೋಕರ್ಣ, ಇಡಗುಂಜಿ, ಜೋಗ,ಇತ್ಯಾದಿ ಹತ್ತಿರವಿರುವ ಸ್ಥಳಗಳು.

## ಮಾನ್ಯ ಸಹ ಸರಕಾರ್ಯವಾಹ ಕಣ್ಣನ್‌ಜಿಯವರ 'ಧರ್ಮಶ್ರೀ' ಭೇಟಿ

**ಪರಿಷದ್ ರಾಜ್ಯ ಕಾರ್ಯಾಧ್ಯಕ್ಷರಾಗಿ ಪ್ರೊ. ಎಮ್.ಬಿ. ಪುರಾಣಿಕರ ನಿಯುಕ್ತಿ**

**ಬೆಂಗಳೂರು** : 6.3.2013 ಬುಧವಾರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಾನ್ಯ ಸಹಸರಕಾರ್ಯವಾಹ ಶ್ರೀಕಣ್ಣನ್‌ಜಿಯವರು ಪರಿಷದ್ ಪ್ರಾಂತ ಕಾರ್ಯಾಲಯ ಧರ್ಮಶ್ರೀಗೆ ಭೇಟಿ ಇತ್ತರು. ಅವರು ಈ ಪ್ರಥಮ ಭೇಟಿಯ ಸುಸಂದರ್ಭದಲ್ಲಿ ಹಿರಿಯ ಪ್ರಾಂತೀಯ ಕಾರ್ಯಕರ್ತರೊಂದಿಗೆ ಎರಡು ಘಂಟೆಗಳ ಕಾಲ ಕಳೆದರು. ಪರಿಷದ್ ಕಾರ್ಯಕ್ರಮಗಳು, ಪ್ರಾಂತ್ಯಾದ್ಯಂತ ಕಾರ್ಯಕರ್ತರ ನಿಯುಕ್ತಿಗಳ ಬಗ್ಗೆ ಪರಿಚಯಿಸಿಕೊಂಡರು. ಹಿಂದು ಸಮಾಜಕ್ಕೆ ಎದುರಾಗಿರುವ ಹೊಸ ಸವಾಲುಗಳ ಬಗ್ಗೆ ಮಾನ್ಯರು ಕಾರ್ಯಕರ್ತರಿಗೆ ನೆನಪಿಸುತ್ತ ಅನುಕೂಲಕರ ವಾತಾವರಣವನ್ನು ಪರಿಚಯಿಸುತ್ತ ಪರಿಷದ್ ಕಾರ್ಯವು ಕರ್ನಾಟಕದಲ್ಲಿ ಬೆಳೆಯುತ್ತಿರಲಿ ಎಂದು ಹಾರೈಸಿದರು. **(ಭಾವಚಿತ್ರ ರಕ್ಷಾಪುಟ 2)**

ಇದೇ ಬೈಠಕ್ಕಿನಲ್ಲಿ ಪ್ರಾಂತದ ಉಪಾಧ್ಯಕ್ಷರಾದ ಪ್ರೊ. ಎಮ್.ಬಿ. ಪುರಾಣಿಕರನ್ನು ಪರಿಷತ್ತಿನ ಪ್ರಾಂತ ಕಾರ್ಯಾಧ್ಯಕ್ಷರನ್ನಾಗಿ ನಿಯುಕ್ತಿಗೊಂಡಿ ರುವುದನ್ನು ಘೋಷಿಸಲಾಯಿತು.

**ವಿಶ್ವ ಹಿಂದು ವಾರ್ತಾ**

ಕ್ಷೇತ್ರೀಯ ಕಾರ್ಯದರ್ಶಿಗಳಾದ ಬಿ.ಎನ್. ಮೂರ್ತಿಯವರು ಈ ಘೋಷಣೆಯನ್ನು ಮಾಡುತ್ತ ಅಧ್ಯಕ್ಷರಾದ ಡಾ॥ ಶಿವಕುಮಾರ ಸ್ವಾಮಿಯವರ ಅನುಭವದೊಂದಿಗೆ ಪ್ರೊ. ಎಮ್.ಬಿ. ಪುರಾಣಿಕರು ಕಾರ್ಯಾಧ್ಯಕ್ಷರಾಗಿ ಪರಿಷತ್ತಿನ ಚಟುವಟಿಕೆಗಳನ್ನು ಮುಂದಿನ ಗಮನವಾದ ಗ್ರಾಮಗಳ ಕಡೆಗೆ ಕೊಂಡೊಯ್ಯು ವುದು ಸಾಧ್ಯವಾಗಲಿದೆ ಎಂದು ಹಾರೈಸಿದರು.

ದಕ್ಷಿಣಾಂಚಲ ಸಂಘಟನಾ ಕಾರ್ಯದರ್ಶಿಗಳಾದ ಮಾನ್ಯ ಸುಧಾಂಶುಜಿ ಪಟ್ನಾಯಕರವರೂ, ಪ್ರಾಂತ ಅಧ್ಯಕ್ಷರಾದ ಡಾ। ಶಿವಕುಮಾರ ಸ್ವಾಮಿಯವರೂ, ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಕೇಶವ ಹೆಗ್ಡೆಯವರೂ ರಾಜ್ಯ ಸತ್ಸಂಗ ಪ್ರಮುಖರೂ ರಾಮಜಪಾನುಷ್ಠಾನ ಕಾರ್ಯಕ್ರಮದ ಪ್ರಾಂತ ಸಂಯೋಜಕರೂ ಆದ ಬಸವರಾಜರವರೂ ರಾಜ್ಯ ಬಜರಂಗ ಸಂಯೋಜಕರಾದ ಸೂರ್ಯನಾರಾಯಣರವರೂ ಪ್ರಾಂತೀಯ ಕಾರ್ಯಕರ್ತರೊಂದಿಗೆ ಉಪಸ್ಥಿತರಿದ್ದರು.

ಹಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿರುವ ಪ್ರೊ. ಪುರಾಣಿಕರು ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ, ಸಾಮಾಜಿಕ ಮತ್ತು ಸೇವಾ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವರು. ರಾಜ್ಯ ಪ್ರಶಸ್ತಿ ಪುರಸ್ಕೃತರಾಗಿರುವುದರೊಂದಿಗೆ ಮಾನ್ಯರು ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರೂ ಹೌದು. ಈಚೆಗೆ ರಚಿತಗೊಂಡಿರುವ ಗೋಸೇವಾ ಆಯೋಗದ ಅಧ್ಯಕ್ಷರಾಗಿರುವ ಶ್ರೀ ಪುರಾಣಿಕರುತಮ್ಮ ಸೇವಾವಧಿಯಲ್ಲಿ ಕಾಲೇಜು ಪ್ರಾಧ್ಯಾಪಕರಾಗಿದ್ದರು.

## ಧರ್ಮ ರಕ್ಷಾ ನಿಧಿ ಕಾರ್ಯಕ್ರಮ

ಹಲಸೂರು ಜಿಲ್ಲೆಯ ಧರ್ಮರಕ್ಷಾ ನಿಧಿಯ ಕಾರ್ಯಕ್ರಮವು ದಿ. 12–3–2013 ರಂದು ಹಲಸೂರಿನ ರಾಮಕೃಷ್ಣ ಶಾಲೆಯಲ್ಲಿ ನಡೆಯಿತು. ಶ್ರೀಲಕ್ಷ್ಮಿ ಮತ್ತು ತನುಶ್ರೀಯವರಿಂದ ಪ್ರಾರ್ಥನೆ. ಶ್ರೀ ಟಿ.ಎ.ಪಿ. ಶೆಣೈರವರ ಅಧ್ಯಕ್ಷತೆ. ಶ್ರೀ ಲಿಂಗಯ್ಯನವರು ವೇದಿಕೆಯಲ್ಲಿದ್ದರು. ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಶ್ರೀಮತಿ ಭಾಗ್ಯರವರು ಸ್ವಾಗತ ಭಾಷಣ ಮಾಡಿದರು. ನಂತರ ಪ್ರಾಂತಕಾರ್ಯದರ್ಶಿ ಶ್ರೀ ಟಿ.ಎ.ಪಿ. ಶೆಣೈರವರು ಧರ್ಮರಕ್ಷಾ ನಿಧಿಯ ಬಗ್ಗೆ ಮಾತನಾಡಿದರು.

ಅಯೋಧ್ಯೆ ರಾಮ ಮಂದಿರದ ವಿಷಯವನ್ನೇ ಪ್ರಧಾನವಾಗಿಟ್ಟುಕೊಂಡು ಸಂತ ಸಮ್ಮೇಳನದಲ್ಲಿ ಎಲ್ಲ ಸಾಧು–ಸಂತರೂ ಒಮ್ಮತದ ತೀರ್ಮಾನಕ್ಕೆ ಬಂದರು. ಇಂದು ರಾಮನ ಶಕ್ತಿಯೇ ದೇವಾಲಯದ ನಿರ್ಮಾಣಕ್ಕೆ ಬೇಕು. ಆದ್ದರಿಂದ ಪ್ರತಿಯೊಂದು ಮನೆಯಲ್ಲೂ ಶ್ರೀ ರಾಮ ಜಯರಾಮ ಜಯ ಜಯರಾಮ – ಎಂಬ ದಿವ್ಯ ತಾರಕ ಮಂತ್ರವನ್ನು ಒಂದು ದಿನದಲ್ಲಿ 13 ಮಾಲೆ ಜಪ ಮಾಡಬೇಕು. ಒಂದು ಮಾಲೆಯಲ್ಲಿ 108 ಮಣಿಗಳಿರುತ್ತವೆ. ಅಂದರೆ 108*13=1404 ಆಗುತ್ತದೆ. ಹೀಗೆ 53 ಕೋಟಿ ಮನೆಗಳಲ್ಲಿ ರಾಮತಾರಕ ಮಂತ್ರದ ಜಪ ನಡೆಯುತ್ತದೆ. ಹಿಂದೆ ಸಮರ್ಥ ರಾಮದಾಸರು 13 ಕೋಟಿ ರಾಮನಾಮ ಜಪಮಾಡಿ ಅದರಿಂದ ಬಂದ ಶಕ್ತಿಯನ್ನು ಧಾರೆಯೆರೆದರು. ಅದರಿಂದ ಶಿವಾಜಿಯು ಹಿಂದೂ ಮಹಾಸಾಮ್ರಾಜ್ಯವನ್ನು ಕಟ್ಟಲು ಸಾಧ್ಯವಾಯಿತು. ಈಗ 53 ಕೋಟಿ ಜಪದ ಶಕ್ತಿಯನ್ನು ರಾಮ ಮಂದಿರ ನಿರ್ಮಾಣಕ್ಕಾಗಿ ನಾವು ಕೊಡೋಣ. ಖಂಡಿತವಾಗಿಯೂ ರಾಮ ಮಂದಿರ ನಿರ್ಮಾಣವಾಗುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಒಂದು ಲಕ್ಷ 68 ಸಾವಿರ ಮನೆಗಳಲ್ಲಿ ಜಪನಡೆಸುವುದಾಗಿ ಮಾತು ಕೊಟ್ಟಿದ್ದೇವೆ. ಜಪದಿಂದ ಆತ್ಮವಿಶ್ವಾಸ ಬರುತ್ತದೆ ಎಂದರು. ಶ್ರೀ ಬಾಬು ನಾಥರವರ ಧನ್ಯವಾದಗಳೊಂದಿಗೆ ಉತ್ಸವವು ಸಂಪನ್ನವಾಯಿತು. **ವರದಿ : – ಹಸು**

## ಹನುಮತ್ ಶಕ್ತಿ ಜಾಗರಣ ಯಜ್ಞ ವರ್ಧಂತಿ

**ಪುಟ್ಟೇನಹಳ್ಳಿ, ಬೆಂಗಳೂರು :** ಬನಶಂಕರಿ ಜಿಲ್ಲೆಯ ಪುಟ್ಟೇನಹಳ್ಳಿ ಪ್ರಖಂಡ ಶ್ರೀ ಹನುಮತ್ ಶಕ್ತಿ ಜಾಗರಣ ಯಜ್ಞ ವರ್ಧಂತಿಯು 3–0–2013 ಭಾನುವಾರ ಚುಂಚಘಟ್ಟ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಸಂಪನ್ನವಾಯಿತು. ಶ್ರೀಮತಿ ವಿಮಲರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸ್ವಾಮಿಜಿಯವರು ತಮ್ಮ ಆಶೀರ್ವಚನದಲ್ಲಿ ರಾಮಭಂಟ ಹನುಮನ ವರ್ಣನೆಯನ್ನು ಮಾಡಿ, ಅಯೋಧ್ಯೆಯ ಶ್ರೀ ರಾಮಜನ್ಮ ಭೂಮಿಯಲ್ಲಿ ರಾಮದೇಗುಲವನ್ನು ಕಟ್ಟಲು ರಾಮ ಜಪಾ ಪಾರಾಯಣಕ್ಕೆ ತಾವೇ ಹದಿಮೂರು ಬಾರಿ ಜಪಿಸಿ ಚಾಲನೆ ಕೊಟ್ಟರು.

ಪ್ರಾಂತ ವಿಶೇಷ ಸಂಪರ್ಕ ಪ್ರಮುಖ ಶ್ರೀ ಮಂಜುನಾಥಸ್ವಾಮಿಯವರು ಭಾರತದ ಕ್ಷಾತ್ರ ಪರಂಪರೆಯ ಬಗ್ಗೆ ಅರಿವು ಮೂಡಿಸಿ ರಾಮಜನ್ಮ ಭೂಮಿಯಲ್ಲಿ ರಾಮಮಂದಿರ ಕಟ್ಟುವುದರ ಬಗ್ಗೆ ವೀರ ಸಂಕಲ್ಪವನ್ನು ಮಾಡಲು ಹಿಂದೂ ಸಮಾಜಕ್ಕೆ ಕರೆ ಇತ್ತರು. ಪ್ರಖಂಡದ ಅಧ್ಯಕ್ಷರಾದ ಶ್ರೀ ಶೇಖರ್‌ರವರ ಸ್ವಾಗತ ಭಾಷಣ ಕಾರ್ಯದರ್ಶಿ ಶ್ರೀ ಜಯರಾಮ್‌ನಾಯಕ್‌ರವರ ಚೊಕ್ಕ ನಿರೂಪಣೆಯೊಂದಿಗೆ ಮುಕ್ತಾಯವಾಯಿತು. **(ಭಾವಚಿತ್ರ ರಕ್ಷಾಪುಟ 2)**

ಕ್ಷೇತ್ರದ ಶಾಸಕ ಶ್ರೀ ಎಂ. ಕೃಷ್ಣಪ್ಪ, ನಗರಸಭಾಸದಸ್ಯೆ ಶ್ರೀಮತಿ ಶಶಿಕಲಾ ಜಯಾರಾಮ್ ಜಿಲ್ಲಾ ಕಾರ್ಯದರ್ಶಿ ಕೆ. ಅಶ್ವತ್ಥನಾರಾಯಣ ಪ್ರಾಂತ ಸಹ ಕಾರ್ಯದರ್ಶಿ ಶ್ರೀ ಬಿ. ಇ. ಸುರೇಶ್ ಉಪಸ್ಥಿತರಿದ್ದರು. **ವರದಿ – ಸುಧೀರ್,**

## ಮಾನ್ಯ ಸುಧಾಂಶುಜಿ ಪ್ರವಾಸ

**ಮಂಗಳೂರು :** ದಕ್ಷಿಣಾಂಚಲದ ಎರಡು ಕ್ಷೇತ್ರಗಳ ಸಂಘಟನಾ ಕಾರ್ಯದರ್ಶಿಗಳಾದ ಮಾನ್ಯ ಸುಧಾಂಶು ಮೋಹನ ಪಟ್ನಾಯಕರು ಮಂಗಳೂರು ವಿಭಾಗದ 5 ಜಿಲ್ಲೆಗಳ ಪ್ರವಾಸವನ್ನು ಕೈಗೊಂಡಿದ್ದರು. ಐದೂ ಜಿಲ್ಲೆಗಳಲ್ಲಿ ಜಿಲ್ಲಾ ಬೈಠಕನ್ನು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ಜಿಲ್ಲೆಯ ಮತ್ತು ಪ್ರಖಂಡಗಳ ಸಂಘಟನಾತ್ಮಕ ರಚನೆಯನ್ನು ಸುಬದ್ಧಗೊಳಿಸುವ ಅವರ ಉದ್ಧೇಶದಲ್ಲಿ, ನೀಡಿದ ಹಲವು ಸೂಕ್ಷ್ಮ ಸೂಚನೆಗಳನ್ನು ಜಿಲ್ಲಾ ಘಟಕಗಳು ಬಹಳ ಉತ್ಸುಕತೆಯಿಂದ ಅಳವಡಿಸುವ ಇಚ್ಛೆಯನ್ನು ವ್ಯಕ್ತಪಡಿಸಿದವು.

ಮುಂದಿನ ವಿಜಯ ಮಹಾಮಂತ್ರದ ಜಪಾನುಷ್ಠಾನ ಕಾರ್ಯಕ್ರಮವನ್ನೂ ಸಫಲಗೊಳಿಸುವ ಹೆಜ್ಜೆಯಲ್ಲೂ ಜಿಲ್ಲಾ ಸಮಿತಿಗಳು ತಮ್ಮ ತಮ್ಮ ಜಿಲ್ಲೆಯಲ್ಲಿ ಜಿಲ್ಲಾ ಸಂಯೋಜಕರನ್ನು ನಿಯುಕ್ತಿಗೊಳಿಸಿದವು.

ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ಅಧ್ಯಕ್ಷರೂ ಕಾರ್ಯದರ್ಶಿಗಳೂ ಉಪಸ್ಥಿತರಿದ್ದು ತಮ್ಮ ಸಮಿತಿಗಳ ಪ್ರಸ್ತುತ ಪಾತ್ರವನ್ನು ಮನಗಾಣಿಸಿಕೊಳ್ಳಲು ಈ ಪ್ರವಾಸವು ಸಹಾಯಕವಾಯಿತು. ಪ್ರವಾಸದಲ್ಲಿ ವಿಭಾಗ ಸಂಘಟನಾ ಕಾರ್ಯದರ್ಶಿ ಬಾಯಾಡಿ ವೆಂಕಟರಮಣ ಭಟ್, ವಿಭಾಗ ಕಾರ್ಯದರ್ಶಿ ಕೃಷ್ಣ ಮೂರ್ತಿಯವರು ವಿಭಾಗ ಬಜರಂಗದಳ ಸಂಯೋಜಕರಾದ ಶರಣರವರು ಸುಧಾಂಶುಜಿಯವರ ಜೊತೆಯಲ್ಲಿದ್ದರು. ದಕ್ಷಿಣ ಪ್ರಾಂತದ ಕಾರ್ಯದರ್ಶಿಗಳಾದ ಟಿ.ಎ.ಪಿ. ಶೆಣೈಯವರು ಎಲ್ಲಾ ಜಿಲ್ಲೆಗಳ ಪ್ರವಾಸದಲ್ಲಿ ಜೊತೆಗೂಡಿದ್ದರು. ಕಾರ್ಯಾಧ್ಯಕ್ಷರಾದ ಮಾನ್ಯ ಪ್ರೊ. ಎಮ್. ಬಿ. ಪುರಾಣಿಕರು ಕೊಡಗು ಜಿಲ್ಲೆಯಲ್ಲಿ ಅವರ ಜೊತೆಗೂಡಿದರು. **ವರದಿ : ಶರಣ್,** ಮಂಗಳೂರು




**ಪದ್ಮನಾಭನಗರ ಬೆಂಗಳೂರಿನಲ್ಲಿ ಮಹಾಶಿವರಾತ್ರಿ (ವರದಿಪುಟ 2 ಮತ್ತು ಭಾವಚಿತ್ರ ರಕ್ಷಾಪುಟ 2)**

# ಶಬ್ದಶೋಧ – 77

ರಚನೆ : ಎಂ. ಎಸ್. ಉಮಾ, ಬನಶಂಕರಿ ಬೆಂಗಳೂರು




**ಎಡದಿಂದ ಬಲಕ್ಕೆ**

1. ನಹುಷನ ಕುರಿತು ದೇವುಡು ಅವರ ಕಾದಂಬರಿ 5
4. ಸತ್ತವರ ನಂತರದ ಸ್ಮರಣೆ ಕುರಿತ ಶಿವರಾಮ ಕಾರಂತರ ಕಾದಂಬರಿ 5
6 ಜೂಜುಕೋರ 3
7. ಶಂಕರಾಚಾರ್ಯರು ಇಲ್ಲಿ ಅಂತರ್ಧಾನವಾದರೆಂಬ ಪ್ರತೀತಿ 5
11. ದಾಡಿಮ 3
14. ಒಂದು ಬಗೆಯ ಸಾರ್ವಜನಿಕ ವಾಹನ 2
15. ಕೊನೆಯಲ್ಲಿ ದೀರ್ಘವಾದ ಲಂಚ 4
16. ಸದಾ ಕೆಲಸದಲ್ಲೇ ಮಗ್ನನಾದ ಸನ್ಯಾಸಿ 5
20. ಮಧ್ಯದಲ್ಲಿ ಒತ್ತು ಕಳೆದ ಪೌರ್ಣಿಮೆ/ಹುಣ್ಣಿಮೆ 3
21. ಜಯವಾಗಲಿ ಎಂದು ವರಕೊಟ್ಟ ಯಮ 4
24. ಹಿರಿಯ ಸಹೋದರ 3
25. ರಕ್ತ ಹೀರುವ ಕೀಟವನ್ನು ಹುಡುಕಿ 3
26. ಹರಿಯನ್ನು ಸ್ಮರಿಸುತ್ತಾ ಸಾಗುವ ಅಲೆ 3
27. ಹೊಚ್ಚ ಹೊಸದಾದ 5

**ಮೇಲಿನಿಂದ ಕೆಳಗೆ**

1. ದೇವುಡು ಅವರ ವಸಿಷ್ಠ, ವಿಶ್ವಾಮಿತ್ರ ಕುರಿತ ಕಾದಂಬರಿ 5
2. ತಪ್ಪನ್ನು ಕ್ಷಮಿಸುವುದೂ ಒಂದು ಶ್ರೇಷ್ಠವಾದ ದಾನವೇ 4
3. ಯಜ್ಞಗಳಿಗೆ ಸಂಬಂಧಿಸಿದ ವೇದ 4
4. ಆದಿಕವಿ ಪಂಪನಿಗೆ ಪ್ರಿಯವಾದ ಅರಸ, ಆಶ್ರಯದಾತ 5
5. ದಿಢೀರೆಂದು ಮಕ್ಕಳಿಗೆ ಬರುವ ಕಾಯಿಲೆ 3
8. ಈಗಿನವರು ಕಾಣದ 25 ಪೈಸೆ 3
10. ಸುದ್ದಿ ಹರಡುವ ಈ ಕಾರು 3
11. ದಕ್ಷ ಬ್ರಹ್ಮನ ಮಗಳು 4
12. ಇದು ಲೆತ್ತ 2
13. ಗಾಳಿ ತೂರಿ ಊದುವ ವಾದ್ಯ 3
14. ಪುಕಾರು ಹಬ್ಬಿಸಿ ಇದರ ನೆರವಿನಿಂದ ಕುದುರೆ ಹತ್ತಿ ಓಡಿದ 3
17. ವಿಶ್ವದ ದೊಡ್ಡಣ್ಣ ಹೆದರಿ ಇಲ್ಲಿ ಅಡಗಿದ್ದಾನೆ 4
18. ಬೆಟ್ಟ, ಗುಡ್ಡಗಳಲ್ಲಿ ವಾಸಿಸುವ ಜನ 4
19. ಜವಾನನೂ ಉಪಯೋಗಿಸುವ ಸುವಾಸನೆಯ ಮಸಾಲೆ ಕಾಳು 4
22. ಕೊನೆಯಲ್ಲಿ ದೀರ್ಘವಾದ ಪಟ್ಟಣ ಮೇಲೇರಿದೆ 3
23. ಇಂದ್ರಿಯಗಳನ್ನು ಹಿಡಿತದಲ್ಲಿಟ್ಟು ಕೊಂಡಿರುವವನು 2

# ಜೈನ ಮತದ ಪಂಚಾಣು ವ್ರತಗಳು

– ಶಾರದಾ ಶಾಮಣ್ಣ
ಬೆಂಗಳೂರು

ಜೈನಮತದ ಸಾಂಪ್ರದಾಯಿಕ ಇತಿಹಾಸದಂತೆ, ಭಗವಾನ್ ಮಹಾವೀರರು ಇಪ್ಪತ್ತನಾಲ್ಕನೇಯ ತೀರ್ಥಂಕರರು. ಇವರು ಪರಿನಿರ್ವಾಣವನ್ನು ಹೊಂದಿ ಇಂದಿಗೆ ಸುಮಾರು 2500 ವರ್ಷಗಳಿಗಿಂತ ಅಧಿಕವಾಗಿದೆ.

ಲಿಚ್ಛವಿ ನಾಡಿನ ಒಂದು ಗಣರಾಜ್ಯದ ರಾಜನಾದ ಸಿದ್ಧಾರ್ಥನ ಮಗನು ಮಹಾವೀರ. ಈತನ ತೊಟ್ಟಿಲಿನ ಹೆಸರು ವರ್ಧಮಾನ. ರಾಜಕುಮಾರನಾಗಿದ್ದರೂ ವರ್ಧಮಾನನಿಗೆ ಎಳೆಯತನದಿಂದಲೂ ವಿರಕ್ತಿಭಾವ ಸಹಜವಾಗಿದ್ದಿತು. ಅವನಲ್ಲಿ ಯಾವ ಬಗೆಯ ಸಾಂಸಾರಿಕ ವ್ಯಾಮೋಹಗಳು ಬೆಳೆಯಲೇ ಇಲ್ಲ. ಪ್ರಾಪ್ತವಯಸ್ಕನಾದ ಮೇಲೆ ಮನೆಯನ್ನೂ ಬಳಗವನ್ನೂ ಬಿಟ್ಟು ಕಾಡಿಗೆ ಹೋಗಿ ಹನ್ನೆರಡು ವರ್ಷಗಳ ಕಾಲ ಉಗ್ರವಾದ ತಪಸ್ಸನ್ನು ಮಾಡಿ ಜಿನತತ್ವದ ಸಿದ್ಧಿಯನ್ನು ಪಡೆದನು. ಮಾನವ ಸಹಜ ಎಲ್ಲಾ ಮಾಯೆ ಮೋಹಗಳನ್ನು ಗೆದ್ದು ತಪೋವೀರ ಎಂಬ ಅನ್ವರ್ಥನಾಮಕ್ಕೆ ಪಾತ್ರನಾಗಿ ನಿಂತನು. ಭವಮಾಯೆಗಳನ್ನು ಜಯಿಸಿದುದರಿಂದಲೇ ಆತನಿಗೆ ಜಿನಪದವಿ ದೊರೆಯಿತು. ಈ ಜಿನನು ಉಪದೇಶಿಸಿದ ಮಾನವ ಧರ್ಮವೇ 'ಜೈನಧರ್ಮ' ಎಂದು ಭರತಖಂಡದಲ್ಲೆಲ್ಲಾ ಖ್ಯಾತಿ ಪಡೆಯಿತು. ಜಿನ ಎಂದರೆ ಎಲ್ಲವನ್ನೂ ಜೈಸಿದವನೆಂದು ಅರ್ಥ. ಕನ್ನಡನಾಡೂ ಜೈನ ಧರ್ಮ ಮತ್ತು ಜೈನ ಸಾಹಿತ್ಯಕ್ಕೆ ಆಗರವಾಗಿತ್ತೆಂಬುದನ್ನು ಪ್ರಾಚೀನ ಶಿಲಾಶಾಸನವೊಂದರ ಈ ಪದ್ಯದಲ್ಲಿ ನಾವು ಕಾಣಬಹುದು.

ಜಿನಧರ್ಮಾವಾಸಮಾದತ್ತು. ಅಮಳವಿನಯದಾಗಾರಮಾದತ್ತು, ಪದ್ಮಾ
ಸನ ನಿರ್ಪಾಸದ್ಮಮಾದತ್ತು. ಅತಿವಿಶದಯಶೋಧಾಮ ಮಾದತ್ತು ವಿದ್ಯಾ
ಧನ ಜನ್ಮಸಾಧನ ಮಾದತ್ತು. ಅಸಮತರಳ ಗಂಭೀರ ಸದ್ಗೇಹ ಮಾದತ್ತು
ಎನಿಸಲ್ಕೆ ಇಂತುಳ್ಳ ನಾನಾ ಮಹಿಮೆಯೊಳೆಸಗಂ ಚಾರು ಕರ್ನಾಟಕದೇಶಂ ।

ಮಧ್ಯಯುಗದ ಕರ್ನಾಟಕ ಇತಿಹಾಸದಲ್ಲಿ ಕಾಣುವ ಹೆಚ್ಚಿನ ದಾನ ದತ್ತಿಗಳ ಶಿಲಾಶಾಸನಗಳು, ಜೈನಧರ್ಮೀಯರಾದ ರಾಜ ಮಹಾರಾಜರು, ಜೈನ ಧರ್ಮೀಯರದ್ದೇ ಆಗಿದೆ. ಭಗವಾನ್ ಮಹಾವೀರನು ತತ್ವಸಿದ್ದನಷ್ಟೇ ಅಲ್ಲ. ಲೌಕಿಕ ವ್ಯವಹಾರವನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡವನು. ಜೈನ ಧರ್ಮದ ಕೊನೆಯ ಮೆಟ್ಟಿಲು ಮುನಿಯಾಗುವುದು ಎಂದು ಉಪದೇಶಿಸಿದರೂ, ಸಮಾಜದಲ್ಲಿ ಎಲ್ಲರೂ ಮುನಿಗಳಾಗುವುದು ಸುಲಭವಲ್ಲವೆಂದು ಅವರು ಅರಿತಿದ್ದರು. ಸಂಸಾರಿಗಳು ನಿತ್ಯವ್ರತಗಳಾದ ಅಹಿಂಸೆ, ಸತ್ಯ, ಅಚೌರ್ಯ, ಶೀಲ, ಅಪರಿಗ್ರಹ ಎಂಬ ಪಂಚಾಣು ವ್ರತಗಳನ್ನು ಪಾಲಿಸಬೇಕು.

ಅಹಿಂಸೆಗೆ ಜೈನ ಧರ್ಮದಲ್ಲಿ ತುಂಬಾ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ತೃಣದಿಂದ ಹಿಡಿದು ಮಾನವನವರೆಗೆ ಯಾವ ಜೀವಗಳನ್ನೂ ಹಿಂಸಿಸಕೂಡದೆಂಬುದು ಜೈನ ಧರ್ಮದ ಮುಖ್ಯ

ಆದೇಶ. ಆದರೆ ಸಮಾಜಕ್ಕೆ ಪ್ರಯೋಜನಕಾರಿಯಾದ ಬೇಸಾಯಗಳನ್ನು ಲೌಕಿಕರೆ ಮಾಡಬೇಕಾಗಿರುವುದರಿಂದ ಇವುಗಳನ್ನು ಮಾಡುವಾಗ ಬೇಡವಾಗಿದ್ದರೂ ಅನಿವಾರ್ಯಕಾರಿ ಹಿಂಸೆ ನಡೆಯಬಹುದು. ಈ ಬಗೆಯ ಕೃಷಿ ಹಿಂಸೆ, ಉದ್ಯಮ ಹಿಂಸೆಗಳು ಜೈನಧರ್ಮದ ದೃಷ್ಟಿಯಲ್ಲಿ ಕ್ಷಮ್ಯವಾಗಿರುವುದು. ನಿರಪರಾಧಿಗಳ ಮೇಲೆ ಹಿಂಸಾಕಾರ್ಯ ನಡೆದರೆ ಆಗ ಸ್ವರಕ್ಷಣೆಗಾಗಿ ಹಿಂಸಾಕಾರ್ಯಕ್ಕೆ ಸಿದ್ಧರಾಗಬೇಕಾದುದು ಅಧರ್ಮವಲ್ಲವೆಂದು ಜೈನಧರ್ಮವೂ ಒಪ್ಪಿಕೊಂಡಿದೆ.

**ಸತ್ಯ :** ಎಂಬುದು ಎರಡನೆಯ ಅಣುವ್ರತ. ಎಲ್ಲರೂ ಸತ್ಯವ್ರತವನ್ನೂ ಪಾಲಿಸಲೇ ಬೇಕು. "ಸತ್ಯಂ ವದ, ಸತ್ಯಾನ್ನ ಪ್ರವದಿತವ್ಯಂ" ಮೊದಲಾದ ಉಪನಿಷತ್ತಿನ ಆದೇಶಗಳೂ ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್ ಎಂಬ ಪುರಾಣ ಪುರುಷರ ವಚನಗಳೂ ಜಗತ್ಪ್ರಸಿದ್ಧವಾಗಿವೆ.

**ಅಚಾರ್ಯ :** ಎಂದರೆ ಕಳವು ಮಾಡದಿರುವುದು. ಇದು ಶ್ರಾವಕನ ಮೂರನೆಯ ಅಣುವ್ರತ. ಸನಾತನ ಧರ್ಮದವರು ಅಸ್ತೇಯ ಎಂಬ ಹೆಸರಿನಿಂದ ಇದನ್ನು ಸ್ವೀಕರಿಸಿದ್ದಾರೆ. ಸ್ತೇಯ ಎಂದರೆ ಕಳವು. ಅಸ್ತೇಯ ಎಂದರೆ ಕಳವು ಮಾಡದಿರುವುದು. ಇನ್ನೊಬ್ಬರ ವಸ್ತುವನ್ನು ಅವರಿಗೆ ತಿಳಿಯದಂತೆ ಎತ್ತಿ ಹಾಕುವುದಷ್ಟೇ ಕಳ್ಳತನವಲ್ಲ. ಸ್ವಾರ್ಥ ಲೋಭಗಳಿಂದ ಸಮಾಜಕ್ಕೆ ಉಪಯುಕ್ತವೆನಿಸುವ ವಸ್ತುಗಳನ್ನು ತನ್ನಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುವುದೂ ಕಳ್ಳತನವೇ ಎನಿಸುವುದು. ಜೀವನಾವಶ್ಯಕ ವಸ್ತುಗಳನ್ನು ದಾಸ್ತಾನು ಮಾಡಿಕೊಂಡು ನಂತರ ಕಾಳಸಂತೆಯಲ್ಲಿ ಮಾರುವುದು ಅಪರಾಧ.

ಪಂಚಾಣು ವ್ರತಗಳಲ್ಲಿ ಶೀಲ ಅಥವಾ ನಡತೆ ಎಂಬುವುದು ನಾಲ್ಕನೆಯದು. ಜೈನ ಯತಿಗಳು ಬ್ರಹ್ಮಚಾರಿಗಳಾಗಿಯೇ ಇರಬೇಕು. ಶ್ರಾವಕರು ಸ್ವಸ್ತ್ರೀ ನಿರತ ಮತ್ತು ಪರಸ್ತ್ರೀ ವಿಮುಖನಾಗಿರಬೇಕು. ಇದು ಹೆಂಗಸರಿಗೂ ಅನ್ವಯಿಸುತ್ತದೆ. ಇದೇ ಶೀಲ.

ಐದನೆಯ ಅಣುವ್ರತವೆಂದರೆ ಅಪರಿಗ್ರಹ. ಪರಿಗ್ರಹ ಎಂದರೆ ಯಾವುದೇ ವಸ್ತುವನ್ನಾಗಲೀ ಧನವನ್ನಾಗಲೀ ಪಡೆಯಬೇಕೆಂಬ ಪ್ರವೃತ್ತಿ. ಹಾಗೆ ಪಡೆಯದಿರುವುದೇ ಅಪರಿಗ್ರಹವ್ರತ. ಸಮಾಜದಲ್ಲಿಯ ಪ್ರತಿಯೊಂದು ವ್ಯಕ್ತಿಯೂ ಸ್ವಂತದ ದುಡಿಮೆಯಿಂದ ಸ್ವಾವಲಂಬಿಯಾಗಿ ಬಾಳಬೇಕೆಂಬುದು ಜೈನಾಗಮದ ಅಪೇಕ್ಷೆ. ಒಬ್ಬರಿಗೊಬ್ಬರು ನೀಡುವ ಸಹಕಾರಬೇಕು. ಔಚಿತ್ಯವನ್ನರಿತು ದಾನ ಮಾಡಬೇಕು. ಆದರೆ ಶ್ರಾವಕರು ಇನ್ನೊಬ್ಬರೆದುರು ಎಂದೂ ಕೈಯೊಡ್ಡಿ ನಿಲ್ಲಲಾಗದು. ತನ್ನ ಗಳಿಕೆಯ ಮೇಲೆಯೇ ತಾನು ನಿಲ್ಲಬೇಕು. ಈ ವ್ರತವು ಸಮಾಜದಲ್ಲಿ ಸೋಮಾರಿತನವನ್ನು ಹೋಗಲಾಡಿಸುವುದು. ಶ್ರಮ ಜೀವನಕ್ಕೆ ಇಂಬುಕೊಟ್ಟಿದೆ.

ಭಗವಾನ್ ಮಹಾವೀರರಿಂದ ಪ್ರತಿಪಾದಿತವಾದ ಪಂಚಾಣು ವ್ರತಗಳು, ಮೋಕ್ಷ ಸಾಧನೆಗೆ ಅವಶ್ಯವಿರುವಂತೆ ಮಾನವ ಜೀವನದ ಸುಖ ಸಮಾಧಾನಗಳ ಸಾಧನೆಗೂ ಅತ್ಯಗತ್ಯವಾಗಿದೆ. ಯಾವ ರಾಜ್ಯದಲ್ಲಿ, ಯಾವುದೇ ರಾಜ್ಯದಲ್ಲಿ ಪಂಚಾಣು ವ್ರತಗಳ ನಿಷ್ಠೆ ಜ್ಞಾತವಾಗಿಯೋ, ಅಜ್ಞಾತವಾಗಿಯೋ ಜಾಗೃತವಾಗಿದ್ದರೂ ಸಹ ಆ ಸಮಾಜ ಐಶ್ವರ್ಯ, ಅಭ್ಯುದಯಗಳಿಂದ ಕೂಡಿ ಮಾನವತೆಯ ಸಂಪೂರ್ಣ ಸಾಕ್ಷ್ಯಗಳಾಗಿ ಮೆರೆಯುವುವು. ರಾಜಕಾರಿಣಿಗಳು, ಮಂತ್ರಿಮಹೋದಯರು, ಉನ್ನತಾಧಿಕಾರಿಗಳು, ವರ್ತಕರು, ಗುತ್ತಿಗೆದಾರರು ಈ ವಿಷಯಗಳನ್ನು ಅನುಸರಿಸಿದರೆ ರಾಜ್ಯ ಭ್ರಷ್ಟಾಚಾರ, ಲಂಚಗುಳಿತನ, ಕೊಲೆ, ದರೋಡೆ ಇವುಗಳಿಂದ ಮುಕ್ತವಾದರೆ ಸಮಾಜಕ್ಕೆ ಕ್ಷೇಮ.

# ಸಂಸ್ಕೃತಿ ಶಿಕ್ಷಣ ಶಿಬಿರ

**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ**
**ಜಸವು ಜನಜೀವನಕೆ ಮಂಕುತಿಮ್ಮ ॥**

"ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು". ಮನೆ ಸಂಸ್ಕಾರ ನೀಡುವ ಕೇಂದ್ರವಾಗಿದ್ದಾಗ ಭಾರತ ಜಗದ್ಗುರುವಾಗಿತ್ತು. ವೇದ, ಸಂಸ್ಕೃತಗಳು ಭಾರತೀಯ ಸಂಸ್ಕೃತಿ ಹಾಗೂ ವಿಚಾರಧಾರೆಗಳ ತಳಹದಿ. ಸಂಸ್ಕೃತಿ, ಸಂಸ್ಕೃತ, ಸಂಸ್ಕಾರ ನೀಡಲು ಸಾಧ್ಯವಿಲ್ಲದ ಪ್ರಸ್ತುತ ವ್ಯವಸ್ಥೆಯಲ್ಲಿ ಹಿಂದು ಸಮಾಜದ ಎಲ್ಲಾ ಬಾಲಕರಿಗೆ ಸಂಸ್ಕೃತಿ ಶಿಕ್ಷಣ ಶಿಬಿರದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಜನಕಲ್ಯಾಣ ಟ್ರಸ್ಟ್ ನಾಟಿ ನರಿಕೊಂಬು ಗ್ರಾಮ, ಬಂಟ್ವಾಳ ತಾಲೂಕು ಇದರ ಆಶ್ರಯದಲ್ಲಿ, ವೇದವಿಜ್ಞಾನ ಗುರುಕುಲ, ಚನ್ನೇನಹಳ್ಳಿ ಇವರ ಸಹಯೋಗದೊಂದಿಗೆ ಸಂಸ್ಕೃತಿ ಶಿಕ್ಷಣ ಶಿಬಿರವನ್ನು ನಡೆಸಲು ನಿರ್ಧರಿಸಲಾಗಿದೆ.

**ಶಿಬಿರ ವಿವರ : ಬಾಲಕರಿಗೂ, ಬಾಲಕಿಯರಿಗೂ ಪ್ರತ್ಯೇಕ ಶಿಬಿರಗಳು**

* **ಶಿಬಿರಸ್ಥಾನ:** ಜನಕಲ್ಯಾಣ ಟ್ರಸ್ಟ್ ನಾಟಿ, ನರಿಕೊಂಬು ಗ್ರಾಮ, ಬಂಟ್ವಾಳ ತಾ॥, ದ.ಕ. 574231
* **ಶಿಬಿರಅವಧಿ:** ಚೈತ್ರ ಶುದ್ಧ ಚತುರ್ಥಿಯಿಂದ ವೈಶಾಖಶುದ್ಧಬಿದಿಗೆ (14.4.13–12.5.2013) ಬಾಲಕರಿಗೆ.
* 20.4.13 ರಿಂದ 12.05.13ರವರೆಗೆ ಹಿಂದೂ ಬಾಲಕಿಯರಿಗೆ
* **ಅರ್ಹತೆ:** 6,7,8 ಮತ್ತು 9ನೇ ತರಗತಿಗಳಲ್ಲಿ ಓದುವ ಹಿಂದೂ ಬಾಲಕರು/ಬಾಲಕಿಯರು

**ಕಲಿಕೆಯ ವಿಷಯಗಳು**

1. ನಿತ್ಯ ಪೂಜಾ ವಿಧಿ, ಜಪ, ಅಗ್ನಿಹೋತ್ರ
2. ವೇದ ಉಪನಿಷತ್ತುಗಳ ಪ್ರಾಥಮಿಕ ಪಾಠ
3. ಪ್ರಾರ್ಥನಾ ಶ್ಲೋಕಗಳು
4. ಯೋಗಶಿಕ್ಷಣ (ಆಸನ, ಪ್ರಾಣಾಯಾಮ, ಧ್ಯಾನ)
5. ಸಂಸ್ಕೃತ ಸಂಭಾಷಣೆ
6. ಹಿಂದೂ ಜೀವನ ಮೌಲ್ಯಗಳು

* ಬಾಲಕ ಶಿಬಿರಾರ್ಥಿಗಳು 13.04.2013 ರಂದು ಸಾಯಂಕಾಲ 5.00 ಗಂಟೆಯೊಳಗೆ
* ಬಾಲಕಿಯರು 19.04.2013 ಸಾಯಂಕಾಲ 5.00 ಗಂಟೆಯೊಳಗೆ ಶಿಬಿರದಲ್ಲಿರಬೇಕು
* ಶಿಬಿರ ಪೂರ್ತಿ ಶಿಬಿರ ಸ್ಥಾನದಲ್ಲಿರಬೇಕು.
* ಶಿಬಿರದಲ್ಲಿ 70 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ, ಆಸಕ್ತರು ಕೂಡಲೇ ಅರ್ಜಿ ಸಲ್ಲಿಸಬೇಕು.

**ಶಿಬಿರಕ್ಕೆ ಬರುವಾಗ ತರಬೇಕಾದ ವಸ್ತುಗಳು**

* ಬಾಲಕರಿಗೆ ಎರಡು ಜತೆ ಬಿಳಿ ಪಂಚೆ + ಕೇಸರಿ ಶಾಲು ತರಬೇಕು (ಮಂತ್ರ ಪಾಠಕ್ಕೆ)
* ಯೋಗಾಸನ ಹಾಗೂ ಶಾರೀರಿಕ ಚಟುವಟಿಕೆಗಳಿಗಾಗಿ 2 ಸಡಿಲವಾದ ಚಡ್ಡಿಗಳನ್ನು ತರಬೇಕು
* ಬಾಲಕಿಯರು ನಿತ್ಯ ಉಡುಪಿನೊಂದಿಗೆ ಚೂಡಿದಾರ್ ಮತ್ತು ವೇಲ್ ತರಬೇಕು.
* ನೂರು ಪುಟಗಳ ಎರಡು ಪುಸ್ತಕಗಳು – ಒಂದು ಪೆನ್ನು

**40ನೇ ಪುಟಕ್ಕೆ....**

ಸ್ಮರಣ ಸಂಚಿಕೆ 'ತೇಜಸ್'ನ ಸಂಪಾದಕ ಮಂಡಳಿಯಲ್ಲಿ ಡಾ॥ ಜಯಂತಿ ಮನೋಹರ್, ವಿಜಯ ವಿಷ್ಣುಭಟ್, ವಸಂತ ಸ್ವಾಮಿ, ರಾದಾ ರಾಮಸ್ವಾಮಿಯವರು ಕಾರ್ಯಪ್ರವೃತ್ತರಾದರು. ಲೇಖಕಿಯರಿಂದ ಲೇಖನಗಳ ಆಹ್ವಾನ, ಸಂಚಿಕೆಗೆ ಜಾಹೀರಾತು, ಹಣದ ವ್ಯವಸ್ಥೆ, ಮಠಾಧೀಶರು, ಗೌರವಾನ್ವಿತ ಸಂದೇಶಗಳ ಮುದ್ರಣ ಹೀಗೆ ಕೆಲಸಗಳು ಸಾಲುಗಟ್ಟಿ ನಿಂತಿದ್ದವು.

ಸಂಪೂರ್ಣ ಸಮಾವೇಶದ ನೇತೃತ್ವ ವಹಿಸಿದವರ ಜವಾಬ್ದಾರಿ ಸ್ವಲ್ಪವೇ? ರಮಾರತ್ನ ತಮ್ಮ ಉದ್ಯೋಗಕ್ಕೆ ಆರು ತಿಂಗಳು ಸಂಬಳ ಇಲ್ಲದ ರಜೆಯನ್ನು ಹಾಕಿದ್ದಾಯಿತು. ವಿಶ್ವಹಿಂದು ಪರಿಷದ್‌ನ ಹಿರಿಯರು ಸಂಪೂರ್ಣ ಸಹಕಾರವನ್ನು ಕೊಡುತ್ತಾ ಧೈರ್ಯ, ವಿಶ್ವಾಸದಿಂದ ಕೆಲಸ ಮಾಡಲು ಅನುವು ಮಾಡಿಕೊಟ್ಟರು.

# ಸಾಕಾರಗೊಂಡ ಸಮಾವೇಶ – 2

ಶಾರದಾ ವಿ.ಮೂರ್ತಿ
ಮೈಕೊ ಲೇಔಟ್, ಬೆಂಗಳೂರು – 560076

ಪ್ರವಾಸ, ಚರ್ಚೆ, ಚಿಂತನ–ಮಂಥನಗಳು ನಡೆದು ಡಿಸೆಂಬರ್, 28,29,ರಂದು ಅಧಿವೇಶನ ಸಾಕಾರಗೊಂಡಿತು. ಆ ಪರಿಸರದ ತುಂಬಾ ಹಬ್ಬದ ವಾತಾವರಣ, ಬಣ್ಣದ ಸಿಂಗಾರ, ಹೊರ, ಒಳ ಆವರಣವೆಲ್ಲವೂ ಕಣ್ಮನ ಸೆಳೆಯುವಂತೆ... ಅರಿವಿಗಾಗಿ ಆಗಮಿಸಿದ ಪ್ರತಿನಿಧಿಗಳು, ವಿಚಾರ ವಿನಿಮಯ ಮಾಡಿಕೊಳ್ಳಲು ಬಂದ ವಿಚಾರವಂತರು ಎಲ್ಲರಲ್ಲು ಸಡಗರ–ಸಂಭ್ರಮ. ಒಳಗಡಿಯಿಡುವ ಮೊದಲು ರಚಿಸಲಾಗಿದ್ದ ಭವ್ಯ ರಂಗೋಲಿ ಸಂಸ್ಕಾರ ಭಾರತೀಯವರ ಕಲಾ ನೈಪುಣ್ಯತೆಗೆ ಪ್ರತ್ಯಕ್ಷ ಸಾಕ್ಷಿಯಾಗಿತ್ತು. ಒಳ, ಹೊರಗಿನ ಶೃಂಗಾರಗಳೂ ಅಷ್ಟೇ ಕಲಾತ್ಮಕವಾಗಿತ್ತು. ವೇದಿಕೆಯ ಮುಂದಿನ ಕೆಳಭಿತ್ತಿಯಲ್ಲಿ ಸಭಿಕರಿಗೆ ಕಾಣುವಂತೆ ಮಹಿಳೆಯರ ನಾನಾ ಮುಖಗಳನ್ನು ಬಿಂಬಿಸುವ ಮನೋಜ್ಞವಾದ ಭಿತ್ತಿಚಿತ್ರಗಳು. ದುಡಿಯುತ್ತಿರುವ ಗ್ರಾಮೀಣ ಮಹಿಳೆಯಿಂದ ಹಿಡಿದು ಕಲಾವಿದೆಯರು, ತಂತ್ರಜ್ಞರ ಚಿತ್ರಗಳು ಸಮಯೋಚಿತವೆನಿಸಿದ್ದವು.

ವೇದೋಪಾಸಕಿ ಶ್ರೀಮತಿ ಭ್ರಮರಾಂಬ ಮಹೇಶ್ವರಿ ಮತ್ತು ಜೊತೆಯವರು ವಿಶ್ವಸೌಹಾರ್ದ ಹವನವನ್ನು ಕೆಲವು ಮಂತ್ರಗಳ ಅರ್ಥವಿವರಣೆಯೊಂದಿಗೆ ನಡೆಸಿಕೊಟ್ಟು ಕಾರ್ಯಕ್ರಮಕ್ಕೆ ಶುಭಾರಂಭ ಒದಗಿಸಿಕೊಟ್ಟರು. ದೀಪ ಪ್ರಜ್ವಲನ ಹಾಗೂ ಗಾನ ಕಲಾಶ್ರೀ ಡಾ. ನಾಗವಲ್ಲಿ ನಾಗರಾಜ್‌ರಿಂದ ಪ್ರಾರ್ಥನೆಯಾಯಿತು. ಶ್ರೀಮತಿ ಶಾಲಿನಿ ಕೃಷ್ಣಭಟ್ಟರಿಂದ ವೇದಗಾನ ಪಠಣವಾಯಿತು. ಸ್ವಾಗತ, ಪರಿಚಯದ ನಂತರ ರಾಷ್ಟ್ರಸೇವಿಕಾ ಸಮಿತಿಯ ಪ್ರಮುಖ ಸಂಚಾಲಕೆಯವರಾದ ಮಾನನೀಯ ಶಾಂತಕ್ಕನವರಿಂದ ಉದ್ಘಾಟನಾ ಭಾಷಣವಾಯಿತು. ಭಾರತೀಯ ಮಹಿಳೆಯರ ಹಿರಿಮೆಯನ್ನು ಶ್ಲಾಘಿಸುತ್ತಾ ಶಾಂತಕ್ಕನವರು ಆಕೆ ಜನನಿ, ನಿರ್ಮಾಣದ ಶಕ್ತಿಯೊಂದೇ ಅಲ್ಲ... ದುರ್ಗಿಯಾಗಿ ಅಸುರೀ ಶಕ್ತಿಯ ಸಂಹಾರ ಮಾಡಬಲ್ಲಳು ಎಂದು ವಿವರಿಸಿದರು.

"ನಮ್ಮ ದೇಶದ ಮಹಿಳೆಯರು ಸಮಸ್ಯೆಗಳನ್ನು ತಮ್ಮದೇ ರೀತಿಯಲ್ಲಿ ನಿವಾರಿಸುತ್ತಾರೆ". ಎಂಬ ವಿವೇಕಾನಂದರ ಮಾತುಗಳನ್ನು ಉದ್ಧರಿಸಿದರು.

ಸ್ವಾಮಿನಿ ಕೃಷ್ಣಾಮೃತ ಪ್ರಾಣ ಅವರು ಮಾತಾ ಅಮೃತಾನಂದಮಯಿಯ ಸಂದೇಶದೊಂದಿಗೆ ಪೂರ್ಣ ಅತಃಕರಣದಿಂದ ಆಶೀರ್ವಚನವನ್ನು ಅನುಗ್ರಹಿಸಿದರು. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ವಾಸವಾಗಿರುವ ಶ್ರೀಮತಿ ಅಖಿಲಾ ರಾಮರತ್ನಂರವರು ಹಿಂದುಗಳ ಪರವಾಗಿ ಮಾಡುತ್ತಿರುವ ಕಾರ್ಯಸಾಧನೆ ಬೆರಗುಹುಟ್ಟಿಸಿತ್ತು. ಅಲ್ಲಿ ವೇದ ಪಾಠಶಾಲೆಗಳು, ಸಂಸ್ಕೃತ ಶಾಲೆಗಳು, ಬಾಲ ಸಂಸ್ಕಾರ ಕೇಂದ್ರಗಳು ಎಲ್ಲವನ್ನೂ ಹೆಚ್ಚಾಗಿ ಮಹಿಳೆಯರೇ ನೋಡಿಕೊಳ್ಳುತ್ತಿದ್ದಾರೆಂಬುದನ್ನು ದಾಖಲೆ, ಚಿತ್ರಗಳ ಸಹಿತ ವಿವರಿಸಿದರು. ಎರಡೂವರೆ ಲಕ್ಷ ಜನರು ವಿಶ್ವಹಿಂದು ಪರಿಷತ್ತಿನೊಂದಿಗೆ ಗುರುತಿಸಿಕೊಂಡಿರುವುದನ್ನು ಹೆಮ್ಮೆಯಿಂದ ಹೇಳಿದರು.

ನಂತರ ಮಾತನಾಡಿದ ಡಾ.ಎಸ್.ಆರ್. ಲೀಲ ಅವರು, "ಮಹಿಳೆ ಅಗ್ನಿಯಂತೆ, ಎಲ್ಲವನ್ನೂ ಆಕೆ ಶುಚಿಗೊಳಿಸುತ್ತಾಳೆ". ಎಂಬುದನ್ನು ಮಹಿಳಾಧ್ಯಾಯ ಎಂಬ ವರಾಹಮಿಹಿರನ ಕೃತಿಯಲ್ಲಿ ಬರುವ ಉಕ್ತಿಯೊಂದಿಗೆ ಉದಾಹರಿಸುತ್ತಾ ಸಂಸಾರದ ಅಸಮತೋಲನವನ್ನು ತನ್ನ ನಿಸ್ವಾರ್ಥತೆಯಿಂದ ಸರಿಪಡಿಸುತ್ತಾಳೆ ಎಂದು ಶ್ಲಾಘಿಸಿದರು. ಅಧ್ಯಕ್ಷತೆ ವಹಿಸಿದ ತೇಜಸ್ವಿನಿ ಅನಂತ ಕುಮಾರ್ ಅವರು ಉತ್ತಮ ಸಂಸ್ಕಾರ ರೂಪಿಸುವಲ್ಲಿ ಹಿಂದು ಮಹಿಳೆಯ ಪಾತ್ರ ಎಂಬ ಬಗ್ಗೆ ಮಾತನಾಡಿದರು.

ನಂತರದ ಗೋಷ್ಠಿ ಆರ್ಥಿಕರಂಗದಲ್ಲಿ ಮಹಿಳೆಯರ ಪಾತ್ರ ಕುರಿತಾಗಿ ನಡೆಯಿತು. ಪ್ರಸ್ತುತ ಆರ್ಥಿಕರಂಗದಲ್ಲಿ ಹಿಂದು ಮಹಿಳೆಯ ಪಾತ್ರ, ಆಕೆಯ ಸ್ವಾರ್ಥರಹಿತ ದುಡಿಮೆ, ತ್ಯಾಗ, ಅವಗಣನೆಗೊಳಗಾಗುತ್ತಿರುವ ಆಕೆಯ ಗೃಹಕೃತ್ಯ, ಮಕ್ಕಳಿಗಾಗಿ ಉದ್ಯೋಗವನ್ನು ಬಿಡುವ ಹೆಣ್ಣಿನ ಔದಾರ್ಯ ಮುಂತಾದ ವಿಷಯಗಳ ಬಗ್ಗೆ ಗೋಷ್ಠಿ ನಡೆಯಿತು. ಶ್ರೀಮತಿ ವನಿತಾ ನಾರಾಯಣ್, ನಿರ್ಮಲಾ ಸೀತಾರಾಮ್, ಗೀತಾ ರಾಮಾನುಜಂ, ಶ್ರೀಮತಿ ಭರಣಿ ಮುಂತಾದವರು ಮಾಹಿತಿಯೊಂದಿಗೆ ಮಹತ್ವದ ವಿವರಣೆ ನೀಡಿದರು.

ಇಂದಿನ ವಿದ್ಯಾಭ್ಯಾಸದ ಪದ್ಧತಿಯಿಂದ ಮಹಿಳೆಗಿರುವ ಅವಕಾಶಗಳು ಮತ್ತು ಸವಾಲುಗಳು, ನೇತೃತ್ವದ ಗುಣಗಳ ಅಳವಡಿಕೆಯ ಬಗ್ಗೆ ಚರ್ಚಿಸಿದವರು ಪ್ರೊಫೆಸರ್ ಮೀರಾ ಚಂದಾವರ್ಕರ್, ಟಿ.ಎಸ್. ಸತ್ಯವತಿ, ಡಾ.ವಿಜಯಕುಮಾರಿ ಹಾಗೂ ಇಂದಿರಾ ತಿವಾರಿಯವರು.

ಹಿಂದು ಸಮಾಜದ ಮೇಲೆ ಮಾಧ್ಯಮಗಳ ಪ್ರಭಾವ, ಮಾಧ್ಯಮಗಳಿಂದ ಸ್ತ್ರೀ ಶೋಷಣೆ, ಯುವತಿಯರ ಮೇಲೆ ಆಗುತ್ತಿರುವ ಪರಿಣಾಮ ಮಾದ್ಯಮಗಳಲ್ಲಿ ಸ್ತ್ರೀಯರ ಭಾಗವಹಿಸುವಿಕೆ, ಮತ್ತು ನಿರ್ಣಾಯಕ ಪಾತ್ರಗಳ ಬಗ್ಗೆ ಚರ್ಚಿಸಲಾಯಿತು. ವಿಜಯವಾಣಿ ಪತ್ರಿಕೆಯ ಮಹಿಳಾ ವಿಭಾಗದ ಸಂಪಾದಕರಾದ ಶ್ರೀಮತಿ ಭಾರತಿ ಹೆಗಡೆ, ದೀಪಿಕಾ ಆರಾಧ್ಯ, ನಂದಿನಿ ಲಕ್ಷ್ಮೀಕಾಂತ ಮುಂತಾದವರು ಮಾತನಾಡಿದರು.

ಸಂಜೆ ಸಂದೇಶ ಸಾರುವ ಮನರಂಜನಾ ಕಾರ್ಯಕ್ರಮವಿತ್ತು. ಧಾತು ಸಂಸ್ಥೆಯ ಡಾ। ಅನುಪಮ ಹೊಸಕೆರೆಯವರು ನಿರ್ದೇಶಿಸಿ, ನಿರೂಪಿಸಿದ ಬೊಂಬೆಯಾಟವನ್ನು ನೋಡಿದವರೆಲ್ಲರೂ ತುಂಬುಮನದಿಂದ ಮೆಚ್ಚಿ ಆಕೆಯ ಸಾಮರ್ಥ್ಯ, ಪ್ರತಿಭೆಯ ಬಗ್ಗೆ "ಭಲೆ" ಎಂದು ಉದ್ಗರಿಸುವಂತಾಗಿತ್ತು. ಮಹಾಭಾರತದ "ಧರ್ಮವ್ಯಾಧನ" ಕಥೆಯನ್ನು ಗೊಂಬೆಗಳ ಮೂಲಕ ಸಾದರ ಪಡಿಸಿ ಉತ್ತಮ ನೀತಿಯನ್ನು ತಿಳಿಸಿದ ರೀತಿ ಅದ್ಭುತ, ಅವಿಸ್ಮರಣೀಯವಾಗಿತ್ತು.

ನಂತರ ನಿರುಪಮ ರಾಜೇಂದ್ರ ಅವರು ಪ್ರಸ್ತುತ ಪಡಿಸಿದ ಕಥಕ್ ನೃತ್ಯವೂ ಅಷ್ಟೇ ಸೊಗಸಾಗಿತ್ತು. ಮರುದಿನ ಡಿಸೆಂಬರ್ 30, ಭಾನುವಾರದಂದು ಹಿಂದು ಮಹಿಳೆಯರ ಕಾನೂನು ಹಕ್ಕುಗಳ, ಅತಿಕ್ರಮಣ, ಮಾನವ ಹಕ್ಕುಗಳು, ಅವುಗಳ ಬಗ್ಗೆ ಮಾಹಿತಿ, ಅರಿವು, ಸಾಮಾಜಿಕ ಸ್ಥಳಗಳಲ್ಲಿ ಔದ್ಯೋಗಿಕ ಕ್ಷೇತ್ರಗಳಲ್ಲಿ ಮಹಿಳೆ ಅನುಭವಿಸುತ್ತಿರುವ ಶೋಷಣೆ – ಈ ಎಲ್ಲಾ ವಿಷಯಗಳ ಬಗ್ಗೆ ಬೆಳಕು ಚೆಲ್ಲಿ ವಿಷಯ ಮಂಡಿಸಿದವರು ಶ್ರೀಮತಿ ಮಿರಾ ಫಡಕೆ, ಶ್ರೀಮತಿ ಮಂಜುಳ, ಡಾ. ಶಾಂತ, ಡಾ। ಅಸ್ಮಿತ್ ಅದ್ವೈತ್ ವೈದ್ಯ ಮೊದಲಾದವರು.

ಸಾಮಾಜಿಕ, ಸಾಂಸ್ಕೃತಿಕ ಸವಾಲುಗಳ ಬಗ್ಗೆ ಶ್ರೀಮತಿ ಚೂಡಾಮಣಿ ನಂದಗೋಪಾಲ್ ಮಾತನಾಡಿದರೆ ಡಾ। ವಿಜಯಲಕ್ಷ್ಮಿಬಾಳೆಕುಂದ್ರಿಯವರು "ಲವ್ ಜಿಹಾದ್" ಬಗ್ಗೆ ತಿಳಿಸುತ್ತಾ ಹಿಂದು ಮಹಿಳೆಯರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಖೇದ ವ್ಯಕ್ತಪಡಿಸಿದರು. ಹೆಣ್ಣು ಭ್ರೂಣ ಹತ್ಯೆ, ವರದಕ್ಷಿಣೆಯ ಸಾವು, ಲವ್ ಜೆಹಾದ್ ಮೂಲಕ ಮದುವೆಯಾದ ಯುವತಿಯೆ ಸ್ಥಿತಿಗತಿ ಹೀಗೆ ಎಲ್ಲವನ್ನೂ ವಿವರಿಸಿದರು. ಸಮಾವೇಶದ ಕೊನೆಯ ಗೋಷ್ಠಿಯಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಶ್ರೀಮತಿ ಸಾವಿತ್ರಿ ಸೋಮಯಾಜಿಯವರು, ನಾವು "ವಸುಧೈವ ಕುಟುಂಬಕಂ" ಎಂದು ಪ್ರತಿಪಾದಿಸುವವರು. ಪ್ರಪಂಚ ನಮ್ಮ ವಿಶಾಲವಾದ ಸಂಸಾರ. ನಮ್ಮ ಬೇರು ಧರ್ಮದಿಂದ ಕೂಡಿರಬೇಕು" ಎಂದು ವಿಶ್ಲೇಷಿಸಿದರು.

"ಸ್ತ್ರೀ ಜ್ಞಾನ ಸ್ವರೂಪಿಣಿ, ಹಿಂದೆಯೂ ಅನೇಕರು ವೇದಾಧ್ಯಯನ ಸಂಪನ್ನರಾಗಿದ್ದರು, ನಮ್ಮ ಅಂತಃಶಕ್ತಿಯ ಬಲಬೇಕು. ಬೇರೆಯವರಿಗೆ ಗೌರವ ಬರುವಂತಿರಬೇಕು ಹೆಣ್ಣು" ಎಂದು ಪ್ರತಿಪಾದಿಸಿದವರು ಅಮೃತವರ್ಷಿಣೀ ಉಮೇಶ್. ಹೆಣ್ಣು ಶಕ್ತಿ ಸ್ವರೂಪಿಣಿ – ದುರ್ಬಲಳಲ್ಲ.... ಅಳುವುದನ್ನು ಬಿಟ್ಟು ಆಕೆ ಸಶಕ್ತಳಾಗಬೇಕು" ಎಂದು ಮಾತನಾಡಿದವರು ಶ್ರೀಮತಿ ಆರತಿ ಸುಬ್ರಹ್ಮಣ್ಯರು. "ಈಗಿನ ಯುವಪೀಳಿಗೆಯನ್ನು ತಿದ್ದಿ ತೀಡಿ ಸರಿಯಾದ ಮಾರ್ಗದರ್ಶನ ಮಾಡಲು ಮಾತೃಶಕ್ತಿ ಮುಂದೆ ಬರಬೇಕು. ಸ್ತ್ರೀಯರು ಸಹಕರಿಸಬೇಕು ಒಟ್ಟಾಗಿ ನಿಸ್ವಾರ್ಥದಿಂದ ದುಡಿಯಬೇಕು. ಆಗಲೇ ದೇಶಕ್ಕೆ ಒಳಿತು, ಧರ್ಮ ರಕ್ಷಣೆಯಾಗುತ್ತದೆ" ಎಂಬ ಅಂಶವನ್ನು ತಿಳಿಸಿದವರು ಶ್ರೀಮತಿ ಪರಿಮಳ ಮೂರ್ತಿ. ಈ ಸಂದರ್ಭದಲ್ಲಿ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಗೃಹಕೃತ್ಯ, ಮಕ್ಕಳ ಲಾಲನೆ–ಪಾಲನೆ, ಮುಂತಾದವುಗಳನ್ನು ಆದಾಯವೆಂದು ಪರಿಗಣಿಸುವುದು ಹಾಗೂ ಆದಾಯ ತೆರಿಗೆಯಿಂದ ವಿಮುಕ್ತಿಗೊಳಿಸುವುದು. ಮಕ್ಕಳನ್ನು ನೋಡಿಕೊಳ್ಳುವ ಡೇಕೇರ್ ಸೆಂಟರ್‌ಗಳಲ್ಲಿ ಸ್ನೇಹ ಪೂರ್ಣ ವಾತಾವರಣವನ್ನು ನಿರ್ಮಿಸುವುದು, ಮಹಿಳಾ ಸಣ್ಣ ಸಣ್ಣ ಉದ್ದಿಮೆದಾರರಿಗೆ ಸರಕಾರ ಸಹಾಯ, ಸಹಕಾರಗಳನ್ನು ಅವಶ್ಯವಿದ್ದರೆ ಹಣವನ್ನು ಕೊಡುವುದು. ಶಿಕ್ಷಣರಂಗದಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನು ಕಡ್ಡಾಯಗೊಳಿಸುವುದು, ಜನ ಸಾಂದ್ರತೆ ಇರುವ ಸ್ಥಳಗಳಲ್ಲಿ ಸಂಸ್ಕಾರ ಕೇಂದ್ರಗಳನ್ನು ನಡೆಸುವುದು, ಭ್ರಷ್ಟಾಚಾರ ಮುಕ್ತ ಶಿಕ್ಷಣ ವ್ಯವಸ್ಥೆ, ನೈತಿಕ, ಆಧ್ಯಾತ್ಮಿಕ ವಿಚಾರಗಳನ್ನು ಶಿಕ್ಷಣದಲ್ಲಿ ಅತ್ಯವಶ್ಯವಾಗಿ ತರುವುದು.

ಕಾನೂನಿನ ವಿಚಾರದಲ್ಲಿ ಮಹಿಳೆಯರ ಪರವಾಗಿರುವ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಗೆ ತರುವುದು, ಅತಿ ಶೀಘ್ರವಾಗಿ ವಿಚಾರಣೆಯಾಗುವಂತಹ ಕೋರ್ಟ್ ವ್ಯವಸ್ಥೆ,

ಅತ್ಯಾಚಾರಿಗಳಿಗೆ ಶೀಘ್ರ ವಿಚಾರಣೆ ಕಠಿಣ ಶಿಕ್ಷೆ, ದುರುಳರ ಫೋಟೋಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾಕಿ ಜನರಿಗೆ ಅವರ ಬಗ್ಗೆ ಅರಿವು, ಜಿಗುಪ್ಸೆ, ತಿರಸ್ಕಾರ ಉಂಟುಮಾಡುವುದು. ಲವ್ ಜೆಹಾದ್ ಬಗ್ಗೆ ಸ್ಪಷ್ಟ ತಿಳುವಳಿಕೆ ಮೂಡಿಸುವುದು, ಅಂತಹ ಕ್ರಮಗಳನ್ನು ತಡೆಯುವುದು, ಕಠಿಣ ಕ್ರಮ ತೆಗೆದುಕೊಳ್ಳುವುದು. ಮಾಧ್ಯಮಗಳಲ್ಲಿನ ಜಾಹೀರಾತುಗಳಲ್ಲಿ ಒಂದು ವಸ್ತುವಿನಂತೆ ಮಹಿಳೆಯರನ್ನು ಬಳಸದಿರುವುದು, ಉತ್ತಮ ಸ್ಥಾನಮಾನ ದೊರಕಿಸಿಕೊಡುವುದು, ಮಾಧ್ಯಮಗಳಲ್ಲಿ ನಿರ್ಣಾಯಕ ಪಾತ್ರ ಒದಗಿಸಿಕೊಡುವುದು, ಆಕೆಯ ಸಾಧನೆ, ಸಾಮರ್ಥ್ಯಗಳನ್ನು ಹೆಚ್ಚು ಹೆಚ್ಚಾಗಿ ಬಿಂಬಿಸುವುದು – ಆ ಮೂಲಕ ಸಮಾಜದಲ್ಲಿ ನಾರಿಯರ ಬಗ್ಗೆ ಸಕಾರಾತ್ಮಕ ಚಿಂತನೆಯುಂಟಾಗುವಂತೆ ಮಾಡುವುದು. ಸಾಂಸ್ಕೃತಿಕ, ಸಾಮಾಜಿಕ ಸಭೆಗಳಲ್ಲಿ ಹೆಚ್ಚಾಗಿ ಮಹಿಳೆಯರನ್ನು ಸೇರಿಸುವುದು, ಆಧುನಿಕತೆಯೊಂದಿಗೆ ಹಳೆಯ ಉತ್ತಮ ಮೌಲ್ಯಗಳನ್ನು ಅಳವಡಿಸುವುದು. ಹೀಗೆ ಹಲವಾರು ಮುಖ್ಯ ನಿರ್ಣಯಗಳನ್ನು ಮಂಡಿಸಿದ ನಂತರ ಅವನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ತೀರ್ಮಾನಿಸಲಾಯಿತು. ಈ ಅಂಶಗಳು ಕಾರ್ಯಗತಗೊಂಡಾಗ ಸಮಾವೇಶದ ಉದ್ದೇಶವೂ ಸಫಲವಾಗುತ್ತದೆ.

ಇಷ್ಟೆಲ್ಲಾ ಬೌದ್ಧಿಕ, ಚರ್ಚೆ, ಗೋಷ್ಠಿಗಳೊಂದಿಗೆ ನಾಲಿಗೆಗೆ, ಉದರಕ್ಕೆ ಶುಚಿ–ರುಚಿಯಾದ ತಿಂಡಿ–ತಿನಿಸು, ಪಾನೀಯ, ಊಟ–ಉಪಚಾರಗಳು ಸಮಾವೇಶದ ಆಕರ್ಷಣೆಯಾಗಿದ್ದವು. ಸಮಯಕ್ಕೆ ಸರಿಯಾಗಿ ಗೊಂದಲವಾಗದಂತೆ ಅಚ್ಚುಕಟ್ಟಾಗಿ, ಬಡಿಸುವ, ವಿತರಿಸುವ ವ್ಯವಸ್ಥೆಯನ್ನು ಮಾಡಿದ ರಾಷ್ಟ್ರ ಸೇವಿಕಾ ಸಮಿತಿಯವರ ಪಾತ್ರ ಮೆಚ್ಚುವಂತಿತ್ತು. ಇಂತಹ ಸಮಾವೇಶಕ್ಕೆ ಕೆಲಸ ಮಾಡಿದ ಕೈಗಳು ಸಾವಿರಾರು. ಇಲ್ಲಿ ಸೂಚಿಸಲಾಗದಿದ್ದರೂ ಅವರು ಪಾತ್ರ ಸಮಾವೇಶದೊಂದಿಗೆ ಬೆಸೆದಿರುವುದನ್ನು ಖಂಡಿತ ಮರೆಯಲಾಗದು.

**ದೃಢ ಚಿತ್ತ, ಸಂಕಲ್ಪ ಸ್ಪಷ್ಟ ಗುರಿಯಿರಲು। ಅಡೆತಡೆಗೆ ಅಂಜದೀ ದಿಟ್ಟ ನಿಲುವಿರಲು।**
**ಬಿಡುವನೇನ್ ಭಗವಂತ ತೋರುವನು ಒಲವು। ಬಿಡುಬೀಸು ಕಾಯಕಕ್ಕೆ ನಿಚ್ಚಳವು ಗೆಲುವು॥**

## ಸಂಸ್ಕೃತಿ ಶಿಕ್ಷಣ ಶಿಬಿರ – ಆಹ್ವಾನ

**36ನೇ ಪುಟದಿಂದ.....**

* ಚಾಪೆ, ಹೊದೆಯುವ ಬಟ್ಟೆ, ಹಾಸುವ ಬಟ್ಟೆ
* ಸಾಬೂನು, ಪೇಸ್ಟ್, ಬ್ರಶ್, ಟಾರ್ಚ್ ಇತ್ಯಾದಿ ನಿತ್ಯೋಪಯೋಗಿವಸ್ತುಗಳು
* ಲೋಟ, ಊಟದ ತಟ್ಟೆ, ಇತ್ಯಾದಿ

**ಸಂಪರ್ಕ : ಸಂಯೋಜಕರು** ದೂರವಾಣಿ ಸಂಖ್ಯೆ : 08255–275102, 9448726679, 9448141368, 9945967266, 9448928710 (ವಸಂತಿ ಕೆ.), 9448153325 (ಸುಶೀಲ ವಿ.ರಾವ್)

**ಸಂಯೋಜಕರು** ಸಂಸ್ಕೃತಿ ಶಿಕ್ಷಣ ಶಿಬಿರ, ಶ್ರೀಕೃಷ್ಣ ಬ್ರಿಕ್ಸ್ & ಟೈಲ್ಸ್ (ಪ್ರೈ.ಲಿ.)
ಕಲ್ಲಡ್ಕ , ಬಂಟ್ವಾಳ ತಾಲೂಕು, ದ.ಕ. 574222,
ದೂರವಾಣಿ ಸಂಖ್ಯೆ : 08255–275102, 9448726679, 9448141368




ಗಿಬ್ ಬಾಲಕಿಯರ ಪ್ರೌಢಶಾಲೆ, ಕುಮಟಾ: ಕನಕದಾಸರ ಕೀರ್ತನೆಗಳ ಸ್ಪರ್ಧೆಗಳಲ್ಲಿ ವಿಜೇತರು

## ಭಾರತ ಸಂಸ್ಕೃತಿ ಪ್ರತಿಷ್ಠಾನ ರಾಮಾಯಣ ಮಹಾಭಾರತ ಪರೀಕ್ಷೆಗಳ ಪಕ್ಷಿನೋಟ

**ರಾಮಾಯಣ ಪ್ರಥಮ**



**ಶರಧಿ**
ವಿವೇಕಾನಂದ ಆಂಗ್ಲ ಮಾಧ್ಯಮ ಪ್ರೌಢಶಾಲೆ
ಪುತ್ತೂರು



**ಗೌರವ ಶೆಟ್ಟಿ**
ಶ್ರೀ ಸತ್ಯಸಾಯಿ ಲೋಕಸೇವಾ
ಪದವೀ ಪೂರ್ವ ಕಾಲೇಜು, ಅಳಿಕೆ

**ಮಹಾಭಾರತ ಪ್ರಥಮ**



**ಜ್ಯೋತ್ಸ್ನಾ ಜೆ. ದೇಶಪಾಂಡೆ**
ಸೇವಾಭಾರತಿ ಆಂಗ್ಲ ಮಾಧ್ಯಮ
ಪ್ರೌಢಶಾಲೆ, ಚಾಮರಾಜನಗರ



**ಭಟ್ಟು ಭಾರ್ಗವ ಸಾಯಿ**
ಶ್ರೀ ಸತ್ಯಸಾಯಿ ಲೋಕಸೇವಾ
ಪಿ.ಯು. ಕಾಲೇಜು, ಮುದ್ದೇನಹಳ್ಳಿ

## ಪ್ರಾಂತ ದ್ವಿತೀಯ ಸ್ಥಾನ – ರಾಮಾಯಣ



**ದೇವರಾಜ ಹೆಚ್. ಅಂಗಡಿ**
ಶ್ರೀ ಸತ್ಯಸಾಯಿ ಲೋಕಸೇವಾ ಪ್ರೌಢಶಾಲೆ
ಅಳಿಕೆ, ದ.ಕ.



**ಸುಚಿತ್ರಾ ಈ. ಆರ್.**
ಶ್ರೀ ಉದ್ಭವ ಗಣಪತಿ ಪ್ರೌಢಶಾಲೆ
ಬೆಳವಾಡಿ, ಚಿಕ್ಕಮಗಳೂರು



**ಹರ್ಷವರ್ಧನ**
ಶ್ರೀ ರಾಮಕೃಷ್ಣ ವಿದ್ಯಾನಿಕೇತನ
ಶಿವಮೊಗ್ಗ



**ಸೌಜನ್ಯ**
ಶ್ರೀ ದುರ್ಗಾಪರಮೇಶ್ವರಿ ದೇವಳ
ಪಿ.ಯು. ಕಾಲೇಜು, ಕಟೀಲು, ದ.ಕ.

## ಪ್ರಾಂತ ದ್ವಿತೀಯ ಸ್ಥಾನ – ಮಹಾಭಾರತ



**ಸಚಿನ್ ಬಿ.ಎಸ್**
ಶ್ರೀ ಸತ್ಯಸಾಯಿ ಲೋಕಸೇವಾ



**ಶ್ರೀರಂಗ ಹೆಚ್.ವಿ.**
ಶ್ರೀ ಸತ್ಯಸಾಯಿ ಲೋಕಸೇವಾ



**ದರ್ಶನ್ ಡಿ.ವಿ.**
ವಿಜಯ ಆಂಗ್ಲ ಪ್ರೌಢಶಾಲೆ



**ಆಶಾ**
ಸರಕಾರಿ ಪಿ.ಯು. ಪ್ರೌಢಶಾಲೆ



**ಅಕ್ಷಯ ಆರ್.ಹೆಚ್.**
ಶ್ರೀ ಸತ್ಯಸಾಯಿ ಲೋಕಸೇವಾ

Regd. No. RNP/KA/BGS/636/2012-2014 Total Pages 44
Post at G.P.O. Bangalore ON 5TH OF EVERY MONTH RNI No. KARKAN/2002/08081







ಮುಡಿಪು(ದಕ್ಷಿಣ ಕನ್ನಡ)ವಿನಲ್ಲಿ ಭಗವಾಧ್ವಜ ಕಟ್ಟೆಯನ್ನು ಅಪವಿತ್ರಗೊಳಿಸಿದುದರ ವಿರುದ್ಧ ಪ್ರತಿಭಟನೆ

ಇಂದ
**ಹಿಂದುವಾಣಿ**
'ಧರ್ಮಶ್ರೀ', 91, ಶಂಕರಪುರಂ, ಬೆಂಗಳೂರು – 560 004

# ಹಿಂದುವಾಣಿ

Printed by T.L.Venkatesh Published by Ramesh M.Parande on behalf of and (owned by) Vishwa Hindu Parishad and Printed at Vishwas prints #17/1, 3rd Cross, Nanjamba Agrahara, Chamarajpet, Bangalore - 560118, Karnataka. and published at #91, Dharmashri, Shankarapuram, Bangalore - 560 004 Karnataka. Editor T.A.P. Shenoy